ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 16 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 61 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಹಿಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ

ಮತಾಂತರ ನಿಷೇಧ, ಎಪಿಎಂಸಿ ಕಾಯ್ದೆ ರದ್ದು

● ಸಿದ್ದರಾಮಯ್ಯ ನೇತೃತ್ವದ ಸಂಪುಟ ತೀರ್ಮಾನ
● ಶಾಲಾ ಪಠ್ಯ ಪುಸ್ತಕ ಪರಿಷ್ಕರಣೆಯೂ ರದ್ದು; ಹಿಂದಿನ ಪಠ್ಯಗಳ ಮುಂದುವರಿಕೆ ನಿರ್ಧಾರ



ಬೆಂಗಳೂರು, ಜೂ.15(ಕೆಎಂಶಿ)– ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಮತಾಂತರ ನಿಷೇಧ ಹಾಗೂ ಎಪಿಎಂಸಿ ಕಾಯ್ದೆಗಳನ್ನು ರದ್ದು ಮಾಡುವ ಮಹತ್ವದ ತೀರ್ಮಾನ ಕೈಗೊಂಡಿರುವ ಸಂಪುಟ ಸಭೆಯು, ಶಾಲಾ ಪಠ್ಯ ಪುಸ್ತಕ ಪರಿಷ್ಕರಣೆಯನ್ನು ರದ್ದುಪಡಿಸಿ, ಈ ಹಿಂದಿನ ಪಠ್ಯವನ್ನು ಮುಂದುವರೆಸಲು ನಿರ್ಣಯಿಸಿದೆ.

ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ಜನತೆಗೆ ನೀಡಿದ್ದ ಈ ಭರವಸೆಗಳ ಬಗ್ಗೆ ತನ್ನ ಎರಡನೇ ಸಂಪುಟ ಸಭೆಯಲ್ಲೇ ನಿರ್ಧರಿಸಿರುವುದಲ್ಲದೆ, ಜುಲೈನಲ್ಲಿ ನಡೆಯುವ ವಿಧಾನ ಮಂಡಲದ ಅಧಿವೇಶನದಲ್ಲಿ ಈ ಕಾಯ್ದೆಗಳ ತಿದ್ದುಪಡಿ ವಿಧೇಯಕವನ್ನು ಮಂಡಿಸಿ, ಒಪ್ಪಿಗೆ ಪಡೆಯಲು ತೀರ್ಮಾನಿಸಲಾಗಿದೆ. ಸಭೆಯ ನಂತರ ಜಂಟಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು, ಹಿಂದಿನ ಸರ್ಕಾರ ಜಾರಿಗೆ ತಂದಿದ್ದ 2020–22ರ ತಿದ್ದುಪಡಿ ರದ್ದುಪಡಿಸಿ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ –2023 ಅನ್ನು ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದರು. ಬಿಜೆಪಿ ಸರ್ಕಾರ ಶಾಲಾ ಪಠ್ಯದಲ್ಲಿ ಸೇರಿಸಿದ್ದ ಆರ್‌ಎಸ್‌ಎಸ್ ಮುಖಂಡ ಹೆಡಗೇವಾರ್, ವಿ.ಡಿ.ಸಾವರ್ಕರ್ ಹಾಗೂ ಸೂಲಿಬೆಲೆ ಚಕ್ರವರ್ತಿ ಅವರ ಪಠ್ಯ ಕೈಬಿಡಲು ತೀರ್ಮಾನಿಸಿದೆ. ಈಗಾಗಲೇ ಪಠ್ಯ ಪುಸ್ತಕಗಳು ವಿದ್ಯಾರ್ಥಿಗಳ ಕೈ ಸೇರಿರುವುದರಿಂದ ಮರು ಮುದ್ರಣ ಮಾಡಲು ಸಾಧ್ಯವಿಲ್ಲ. ಅಂತಹ ನಿರ್ಧಾರ ಕೈಗೊಂಡರೆ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂ. ನಷ್ಟವಾಗಲಿದೆ. ಹಿಂದಿನ ಸರ್ಕಾರದಲ್ಲಿ ಬದಲಾವಣೆ ಮಾಡಿರುವ ಪಾಠ, ಪದಗಳನ್ನು ಕೈಬಿಟ್ಟು, ಈ ಹಿಂದೆ ಯಾವ ಪಠ್ಯಗಳಿದ್ದವೋ ಅವುಗಳನ್ನೇ ಮುಂದುವರೆಸಲಾಗುವುದು. ಬದಲಾವಣೆಗಳನ್ನು 10–15 ಪುಟಗಳಲ್ಲಿ ಮುದ್ರಿಸಿ ಸಣ್ಣ ಪುಸ್ತಕಗಳನ್ನು ಸಂಬಂಧಪಟ್ಟ ಶಾಲೆಗಳಿಗೆ ● 9ನೇ ಪುಟಕ್ಕೆ

ಸಾರಿಗೆ ನೌಕರರ ವೇತನ ಶೇ.15ರಷ್ಟು ಹೆಚ್ಚಳಕ್ಕೆ ಅನುಮೋದನೆ

ಬೆಂಗಳೂರು: ಸಾರಿಗೆ ನೌಕರರ ವೇತನವನ್ನು ಶೇ.15ರಷ್ಟು ಹೆಚ್ಚಳ ಮಾಡಲು ಸಚಿವ ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ಏಪ್ರಿಲ್ ತಿಂಗಳಿಂದ ಪೂರ್ವಾನ್ವಯವಾಗುವಂತೆ ಸಾರಿಗೆ ನೌಕರರ ವೇತನವನ್ನು ಶೇ.15ರಷ್ಟು ಹೆಚ್ಚಳ ಮಾಡಲು ತೀರ್ಮಾನಿಸಲಾಗಿದೆ. ಕಳೆದ ಮಾರ್ಚ್‌ನಲ್ಲಿ ಈ ಹಿಂದಿನ ಬಿಜೆಪಿ ಸರ್ಕಾರ, ನಾಲ್ಕೂ ನಿಗಮಗಳ(ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕಲ್ಯಾಣ ಕರ್ನಾಟಕ ಸಾರಿಗೆ, ವಾಯುವ್ಯ ಕರ್ನಾಟಕ ಸಾರಿಗೆ) ಸಾರಿಗೆ ನೌಕರರ ವೇತನವನ್ನು ಶೇ.15ರಷ್ಟು ಹೆಚ್ಚಳ ಮಾಡಿ ಆದೇಶ ಹೊರಡಿಸಿತ್ತು.

ಶಾಲಾ, ಕಾಲೇಜ್‌ಗಳಲ್ಲಿ ಸಂವಿಧಾನದ ಪೀಠಿಕೆ ಓದು ಕಡ್ಡಾಯಗೊಳಿಸಿದ ಸರ್ಕಾರ

ಬೆಂಗಳೂರು, ಜೂ.15–ಸರ್ಕಾರಿ, ಅನುದಾನಿತ ಅಥವಾ ಖಾಸಗಿ ಸೇರಿದಂತೆ ಎಲ್ಲಾ ಶಾಲಾ–ಕಾಲೇಜುಗಳು ಸಂವಿಧಾನದ ಪೀಠಿಕೆಯನ್ನು ಪ್ರತಿದಿನ ಕಡ್ಡಾಯವಾಗಿ ಓದಬೇಕು ಮತ್ತು ಎಲ್ಲಾ ಸರ್ಕಾರಿ ಕಚೇರಿ, ಇಲಾಖೆಗಳಲ್ಲೂ ಸಂವಿಧಾನದ ಪೀಠಿಕೆಯ ಫೋಟೋ ಹಾಕಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅರೆ ಸರ್ಕಾರಿ ಕಚೇರಿಗಳಲ್ಲಿ ಸಂವಿಧಾನದ ಪೀಠಿಕೆಯ ಭಾವಚಿತ್ರ ಹಾಕುವುದನ್ನು ಕಡ್ಡಾಯಗೊಳಿಸಿದೆ. ಸ್ವಾತಂತ್ರ್ಯ ಹೋರಾಟ, ಸಂವಿಧಾನದ ಹಿಂದಿನ ಕಲ್ಪನೆಯನ್ನು ಗಮನದಲ್ಲಿಟ್ಟುಕೊಂಡು, ಜನರು, ವಿಶೇಷವಾಗಿ ಶಾಲಾ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಯುವಕರು–ಅದು ಸರ್ಕಾರಿ, ಅನುದಾನಿತ ಅಥವಾ ● 9ನೇ ಪುಟಕ್ಕೆ

ಗೃಹಲಕ್ಷ್ಮೀ ಯೋಜನೆಗೆ ಇಂದಿನಿಂದ ಅರ್ಜಿ ಸಲ್ಲಿಕೆಗೆ ಅವಕಾಶ



ಬೆಂಗಳೂರು, ಜೂ.15– ಮನೆ ಯಜಮಾನಿಗೆ ಮಾಸಿಕ 2,000 ರೂ ಭತ್ಯೆ ನೀಡುವ ಗೃಹಲಕ್ಷ್ಮೀ ಯೋಜನೆಗೆ ಶುಕ್ರವಾರ ಮಧ್ಯಾಹ್ನ 1.30 ರಿಂದ ಅರ್ಜಿ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗುತ್ತಿದೆ. ಯೋಜನೆಯಡಿ ಅರ್ಜಿ ಸಲ್ಲಿಸುವುದಕ್ಕೆ ಯಾವುದೇ ಕಾಲಮಿತಿ ವಿಧಿಸಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾಹಿತಿ ನೀಡಿದರು. ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ● 9ನೇ ಪುಟಕ್ಕೆ

ಮೈಸೂರು ಹೊರ ವಲಯದ 104 ಕಿ.ಮೀ. ಪೆರಿಫೆರಲ್ ರಿಂಗ್ ರೋಡ್ ಯೋಜನೆಗೆ ಡಿಪಿಆರ್ ರೂಪಿಸಲು ಮುಡಾದಿಂದ ಟೆಂಡರ್

ಕಡಿಮೆ ದರ ನಮೂದಿಸುವ ಸಂಸ್ಥೆಗೆ ಜವಾಬ್ದಾರಿ: ಜಿ.ಟಿ.ದಿನೇಶ್‌ಕುಮಾರ್



ಮೈಸೂರು, ಜೂ.15(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಮಹತ್ವಾಕಾಂಕ್ಷೆಯ ಪೆರಿಫೆರಲ್ ಹೊರ ವರ್ತುಲ ರಸ್ತೆ ನಿರ್ಮಾಣಕ್ಕೆ ಡಿಪಿಆರ್ (ಸಮಗ್ರ ಯೋಜನಾ ವರದಿ) ತಯಾರಿಸಲು ಅನುಭವವುಳ್ಳ ಅರ್ಹ ಸಂಸ್ಥೆಯಿಂದ ಕಡೆಗೂ ಟೆಂಡರ್ ಕರೆಯಲಾಗಿದೆ. ಪ್ರಸ್ತುತ 42.5 ಕಿ.ಮೀ. ರಿಂಗ್ ರೋಡ್ ಎರಡು ದಶಕದ ಹಿಂದೆ ನಿರ್ಮಾಣವಾಗಿದೆ. ಈಗ 104 ಕಿ.ಮೀ. ಪೆರಿಫೆರಲ್ ರಿಂಗ್ ರಸ್ತೆ ನಿರ್ಮಿಸಿ ಭವಿಷ್ಯದಲ್ಲಿ ಮೈಸೂರು ನಗರದ ವಾಹನ ಸಂಚಾರ ದಟ್ಟಣೆ ನಿವಾರಿಸಲು ಮುಡಾ ಮುಂದಾಗಿದ್ದು, ಯೋಜನೆಗೆ ಡಿಪಿಆರ್ ತಯಾರಿಸಲು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 10 ಕೋಟಿ ರೂ. ಅನುದಾನವನ್ನು ಮೀಸಲಾಗಿರಿಸಲಾಗಿದೆ.



ಗುರುವಾರ ಸಂಜೆ ಯೋಜನೆಗೆ ಗ್ಲೋಬಲ್ ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಹಾಗೂ ಅನುಭವವಿರುವ ಪ್ರಾಜೆಕ್ಟ್ ಕನ್ಸಲ್ಟೆಂಟ್‌ಗಳು ಟೆಂಡರ್‌ನಲ್ಲಿ ಪಾಲ್ಗೊಳ್ಳುವಂತೆ ಪ್ರಾಧಿಕಾರವು ತಿಳಿಸಿದೆ ಟೆಂಡರ್ ಕರೆಯಲು ಸರ್ಕಾರ ಅನುಮತಿ ನೀಡುತ್ತಿದ್ದಂತೆಯೇ ● 9ನೇ ಪುಟಕ್ಕೆ

ಪ್ರೀತಿಗೆ ಅಡ್ಡ ಬಂದ ಪ್ರಿಯತಮೆಯ ಅಣ್ಣನ ಭೀಕರವಾಗಿ ಹತ್ಯೆಗೈದ ಪ್ರಿಯಕರ

● ಮೈಸೂರು ವಿಜಯನಗರ ನಾಲ್ಕನೇ ಹಂತದಲ್ಲಿ ಘಟನೆ
● ಸಂಬಂಧಿಗಳಿಬ್ಬರ ನೆರವಿನಿಂದ ಹತ್ಯೆ ನಡೆಸಿ ಮೂವರು ಪರಾರಿ

ಮೈಸೂರು, ಜೂ.15(ಆರ್‌ಕೆ)– ಪ್ರೀತಿಗೆ ಅಡ್ಡಿಯಾಗಿದ್ದಾನೆ ಎಂಬ ಕಾರಣಕ್ಕೆ ಪ್ರಿಯತಮೆಯ ಅಣ್ಣನನ್ನು ಸಂಬಂಧಿಕರೊಡಗೂಡಿ ಪ್ರಿಯಕರ ಬರ್ಬರವಾಗಿ ಹತ್ಯೆ ಮಾಡಿದ ಘಟನೆ ಮೈಸೂರಿನ ಹೊರ ವಲಯದ ವಿಜಯನಗರ ನಾಲ್ಕನೇ ಹಂತದ ಬಸವನಹಳ್ಳಿ ರಸ್ತೆಯಲ್ಲಿ ಗುರುವಾರ ಸಂಜೆ ನಡೆದಿದೆ.

ಮೈಸೂರು ತಾಲೂಕು ಬೆಳವಾಡಿ ಗ್ರಾಮದ ಹೇಮಂತ್ ಅಲಿಯಾಸ್ ಸ್ವಾಮಿ (23) ಹತ್ಯೆಗೀಡಾದ ಯುವಕನಾಗಿದ್ದು, ಈತನ ಸಂಬಂಧಿಕನೂ ಆದ ಅದೇ ಗ್ರಾಮದ ಸಾಗರ್ ಎಂಬಾತ ತನ್ನ ಸಂಬಂಧಿಕರಾದ ಪ್ರತಾಪ್ ಮತ್ತು ಮಂಜು ಅವರ ನೆರವಿನಿಂದ ಹತ್ಯೆ ಮಾಡಿದ್ದಾನೆ.

ವಿವರ: ಹತ್ಯೆಗೀಡಾದ ಸ್ವಾಮಿ ಮತ್ತು ಹತ್ಯೆಗೈಯ್ದವರು ಬೆಳವಾಡಿಯ ಒಂದೇ ಬೀದಿಯ ನಿವಾಸಿಗಳು ಹಾಗೂ ಸಂಬಂಧಿಕರು ಎಂದು ಹೇಳಲಾಗಿದೆ ಇವರೆಲ್ಲರೂ ಪೇಂಟಿಂಗ್ ವೃತ್ತಿ ಮಾಡುತ್ತಿದ್ದಾರೆ. ಸ್ವಾಮಿಯ ತಂಗಿ ಕಡಕೊಳ ಸಮೀಪದ ಖಾಸಗಿ ಕಾಲೇಜಿನಲ್ಲಿ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾಳೆ. ಸ್ವಾಮಿ ತಂಗಿ ಮತ್ತು ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಸಾಗರ್ ಪರಸ್ಪರ ಪ್ರೀತಿಸುತ್ತಿದ್ದು, ಇಬ್ಬರೂ ಮದುವೆಯಾಗುವ ತಯಾರಿಯಲ್ಲಿದ್ದರು ● 9ನೇ ಪುಟಕ್ಕೆ

ಲಲಿತಾದ್ರಿಪುರ ರಸ್ತೆಯಲ್ಲಿ ಕಸದ ರಾಶಿ: ದೈನಂದಿನ ವಾಯುವಿಹಾರಿಗಳಿಗೆ ಕಿರಿಕಿರಿ



ಮೈಸೂರು, ಜೂ. 15– ಮೈಸೂರಿನ ಲಲಿತಮಹಲ್ ಹೆಲಿಪ್ಯಾಡ್ ಸಮೀಪ, ಲಲಿತಾದ್ರಿಪುರ ರಸ್ತೆಯಲ್ಲಿ ರಾಶಿ ರಾಶಿ ಕಸ ಬಿದ್ದಿದ್ದು, ಬೆಳಗಿನ ಮತ್ತು ಸಂಜೆಯ ವಾಯುವಿಹಾರಿಗಳಿಗೆ ತೀವ್ರ ಕಿರಿಕಿರಿ ಯುಂಟು ಮಾಡುತ್ತಿದೆ. ಇದರ ದುರ್ವಾಸನೆಯಿಂದ ವಾಯುವಿಹಾರಿಗಳು ಮೂಗು ಮುಚ್ಚಿಕೊಂಡು ಓಡಾಡುವ ಹೇಸಿಗೆ ಪರಿಸ್ಥಿತಿ ನಿರ್ಮಾಣವಾಗಿದೆ. ಪರಿಸರ ಹಾಳು ಮಾಡುತ್ತಿರುವ ಈ ಕಸದ ರಾಶಿಯನ್ನು ತೆರವುಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿ ವರ್ಗವನ್ನು ಆಗ್ರಹಿಸಿದ್ದಾರೆ.

ದೈನಂದಿನ ವಾಯುವಿಹಾರಿಗಳು ಹಾಗೂ ಈ ಮಾರ್ಗದಲ್ಲಿ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಇಂಡಸ್ ವ್ಯಾಲಿ ಆಯುರ್ವೇದಿಕ್ ಸೆಂಟರ್ (ಐವಿಎಸಿ) ಮತ್ತು ಚಾಮುಂಡಿಬೆಟ್ಟಕ್ಕೆ ತೆರಳುವ ಪ್ರವಾಸಿಗರನ್ನು, ವ್ಯಾಪಕವಾಗಿ ಹರಡಿರುವ ಈ ಕಸದ ರಾಶಿ ಸ್ವಾಗತಿಸುತ್ತದೆ. ಮನೆಯ ಕಸದಿಂದ ಹಿಡಿದು ಕಟ್ಟಡ ತ್ಯಾಜ್ಯದವರೆಗೆ ಎಲ್ಲವನ್ನೂ ಇಲ್ಲಿ ತಂದು ಸುರಿಯಲಾಗಿದ್ದು, ಈ ಸ್ಥಳ ಕಸದ ಗುಂಡಿಯಂತೆ ಕಂಡು ಬರುತ್ತಿದೆ. ನಿತ್ಯ ವಿಹರಿಸುವವರು, ಇಲ್ಲಿಗೆ ಪ್ರಾಣಿಗಳ ತ್ಯಾಜ್ಯವನ್ನು ತಂದು ಎಸೆಯುವುದರಿಂದ ದುರ್ನಾತ ಬೀರುತ್ತಿದೆ ಎಂದು ದೂರುತ್ತಿದ್ದಾರೆ.

ನಾಗರಿಕರು, ಅಧಿಕಾರಿಗಳು ನಮ್ಮ ನಗರವನ್ನು ಸ್ವಚ್ಛವಾಗಿಡುವಲ್ಲಿ ಜವಾಬ್ದಾರಿಯುತವಾಗಿ ವರ್ತಿಸದಿದ್ದರೆ ಸ್ವಚ್ಛ ಭಾರತ ಉಪಕ್ರಮವು ವ್ಯರ್ಥವಾಗುತ್ತದೆ ಎಂದು ವಾಯುವಿಹಾರಿಗಳು ಅಭಿಪ್ರಾಯಪಟ್ಟಿದ್ದಾರೆ.



ಕಾರ್ಯ ನಿಮಿತ್ತ ಬುಧವಾರ ಮೈಸೂರಿಗೆ ಆಗಮಿಸಿದ್ದ ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಶಾಸಕ ಕೆ.ಹರೀಶ್‌ಗೌಡ ಆತ್ಮೀಯವಾಗಿ ಸ್ವಾಗತಿಸಿದರು. ಈ ವೇಳೆ ಮುಖಂಡರಾದ ಚೇತನ್ ಕುಂಬಾರಕೊಪ್ಪಲು, ನಗರ ಕಾಂಗ್ರೆಸ್ ಓಬಿಸಿ ವಿಭಾಗದ ಅಧ್ಯಕ್ಷ ಎನ್.ಆರ್.ನಾಗೇಶ್, ಪ್ರಧಾನ ಕಾರ್ಯದರ್ಶಿ ಯೋಗೀಶ್ ಉಪ್ಪಾರ್, ರಾಜ್ಯ ಕಾರ್ಯದರ್ಶಿ ಪ್ರಕಾಶ್ ಕುಂಬಾರ್ ಇನ್ನಿತರಿದ್ದರು.

ಮೈಸೂರಿನ ಹಲವು ಬಡಾವಣೆಗಳಲ್ಲಿ ಶಾಸಕರು, ಮೇಯರ್ ಪರಿಶೀಲನೆ



ಮೈಸೂರು ಜೂ.15(ಬಿಎಲ್‌ಯು)– ಸಿಲಿಕಾನ್ ಸಿಟಿ ಬೆಂಗಳೂರಿನಂತೆ ಮಳೆ ಬಂದಾಗ ಮೈಸೂರಿನಲ್ಲಿ ಯಾವುದೇ ಅನಾಹುತ ಆಗಬಾರದೆಂದು ಶಾಸಕ ಶ್ರೀವತ್ಸ, ಮೇಯರ್ ಶಿವಕುಮಾರ್ ಹಾಗೂ ಅಧಿಕಾರಿಗಳು ಕೆಲವು ಬಡಾವಣೆಗಳಲ್ಲಿ ಗುರುವಾರ ಪರಿಶೀಲನೆ ನಡೆಸಿದರು.

ಮೈಸೂರಿನ ಅಶೋಕಪುರಂಗೆ ಭೇಟಿ ನೀಡಿದ ಶ್ರೀವತ್ಸ, ಶಿವಕುಮಾರ್ ಅವರು, ಒಳಚರಂಡಿ ವ್ಯವಸ್ಥೆ ಹಾಗೂ ಹಾಳಾಗಿರುವ ರಸ್ತೆಗಳ ಪರಿಶೀಲನೆ ನಡೆಸಿದರು. ರಸ್ತೆ ಹಾಗೂ ಒಳ ಚರಂಡಿ ಕಾಮಗಾರಿ ಕೈಗೊಳ್ಳಲು ಅವಶ್ಯವಿರುವ ಹಣ ನೀಡಲು ಅಂದಾಜು ವೆಚ್ಚ ಎಷ್ಟಾಗುತ್ತದೆ ಎಂದು ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಮೈಸೂರಿನ ಸುಣ್ಣದ ಕೇರಿಗೂ ಭೇಟಿ ನೀಡಿ ಅಲ್ಲಿನ ಒಳಚರಂಡಿ ಅವ್ಯವಸ್ಥೆ ಬಗ್ಗೆ ಸ್ಥಳೀಯರಿಂದ ಅಹವಾಲು ಸ್ವೀಕರಿಸಿದರು. ಇಲ್ಲಿನ ಒಳಚರಂಡಿಗೆ ಬೇಕಿರುವ 40 ಲಕ್ಷ ರೂಪಾಯಿಯನ್ನು ಕೂಡಲೇ ಬಿಡುಗಡೆ ಮಾಡಿ ಕಾಮಗಾರಿ ಆರಂಭಿಸುವ ಭರವಸೆ ನೀಡಿದರು.

ನಗರಪಾಲಿಕೆ ಸೂಪರಿಂಟೆಂಡೆಂಟ್ ಇಂಜಿನಿಯರ್ ಮಹೇಶ್, ಅಭಿವೃದ್ಧಿ ಅಧಿಕಾರಿ ಸೋಮಶೇಖರ್ ಸೇರಿದಂತೆ ಹಲವು ಅಧಿಕಾರಿಗಳು ಹಾಜರಿದ್ದರು.

ನಿಧನ

ಡಾ. ಮುಜೀಬ್ ಉರ್ ರೆಹಮಾನ್ ಖಾನ್



ಮೈಸೂರು, ಜೂ. 15– ಬೆಂಗಳೂರು ಮಹಾರಾಣಿ ಕಾಲೇಜಿನ ರಸಾಯನಶಾಸ್ತ್ರ ನಿವೃತ್ತ ಪ್ರಾಧ್ಯಾಪಕರು, ಪ್ರಾಂಶುಪಾಲರು ಹಾಗೂ ಅಜಾಮ್ ಬೈತುಲ್ ಮಾಲ್‌ನ ಉಪಾಧ್ಯಕ್ಷರೂ ಆದ ಎನ್.ಆರ್. ಮೊಹಲ್ಲಾದ ನಾರ್ತ್ ಈಸ್ಟ್ ನಿವಾಸಿ ಡಾ. ಮುಜೀಬ್ ಉರ್ ರೆಹಮಾನ್‌ಖಾನ್ (78) ಅವರು ಬುಧವಾರ ರಾತ್ರಿ ನಿಧನರಾದರು.

ಮೃತರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಎನ್.ಆರ್.ಮೊಹಲ್ಲಾದ ಮಸೀದಿಯಲ್ಲಿ ನಮಾಜ್–ಇ–ಜನಾಜ ನಡೆದು ನಂತರ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿ.ಎಸ್.ಕೃಷ್ಣನ್




ಮೈಸೂರು,ಜೂ.15–ನಗರದ ನಿವೃತ್ತ ಎಂಜಿನಿಯರ್ ಸಿ.ಎಸ್. ಕೃಷ್ಣನ್ (90) ಅಲ್ಪಕಾಲದ ಅನಾರೋಗ್ಯದಿಂದ ಗುರುವಾರ ನಿಧನರಾದರು.

ಇವರು ಪುತ್ರ, ಕ್ರೀಡಾ ವರದಿಗಾರ ಸಿ.ಕೆ.ಮುರಳೀಧರನ್, ಪುತ್ರಿ, ಸೊಸೆ, ಇಬ್ಬರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಕೊಯಮತ್ತೂರಿನಲ್ಲಿ ಲಕ್ಷ್ಮಿ ಮಿಷನ್ ವರ್ಕ್ಸ್‌ನಲ್ಲಿ ಎಂಜಿನಿಯರ್ ಆಗಿದ್ದ ಅವರು ವಿವಿಧ ದೇಶಗಳಿಗೆ ಭೇಟಿ ನೀಡಿ ಅಲ್ಲಿನ ತಜ್ಞರ ಅನುಭವ ಗಳಿಸಿದ್ದರು. ಇದರಿಂದ ಅವರಿಗೆ ಫ್ರೆಂಚ್, ಜರ್ಮನ್, ಇಟಾಲಿಯನ್, ಜಪಾನೀಸ್, ಸ್ಪ್ಯಾನಿಷ್ ಒಟ್ಟು 16 ಭಾಷೆಗಳನ್ನು ಬಲ್ಲವರಾಗಿದ್ದರು. 1974ರಲ್ಲಿ ವಿಶ್ವ ಟೇಬಲ್ ಟೆನಿಸ್ ಟೂರ್ನಿ ಕೊಲ್ಕತ್ತಾದಲ್ಲಿ ನಡೆದಾಗ ಜಪಾನ್ ತಂಡಕ್ಕೆ ದ್ವಿಭಾಷಿಯಾಗಿ ಕಾರ್ಯನಿರ್ವಹಿಸಿದ್ದರು. ಅವರ ಅಂತ್ಯಕ್ರಿಯೆ ಗುರುವಾರ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿತು.

ಕಾಡಾ ಕಚೇರಿಯ ಪಬ್ಲಿಕ್ ಆಫೀಸ್ ಪಾರಂಪರಿಕ ಕಟ್ಟಡದ ನವೀಕರಣ ಕಾಮಗಾರಿ ಪ್ರಗತಿಯಲ್ಲಿ







ಮೈಸೂರು, ಜೂ. 15 (ಆರ್‌ಕೆ)– ಮೈಸೂರಿನ ಹೃದಯ ಭಾಗದಲ್ಲಿರುವ ಕಾಡಾ (ಕಾವೇರಿ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ) ಕಚೇರಿಯ ಪಾರಂಪರಿಕ ಕಟ್ಟಡದ ಪಬ್ಲಿಕ್ ಆಫೀಸ್ ನವೀಕರಣ ಕಾಮಗಾರಿ ಪ್ರಗತಿಯಲ್ಲಿದೆ.

ಅಂಬಾ ವಿಲಾಸ ಅರಮನೆಯ ದಕ್ಷಿಣ ಭಾಗದಲ್ಲಿರುವ ಈ ಪಾರಂಪರಿಕ ಕಟ್ಟಡವು ಸರಿಯಾದ ನಿರ್ವಹಣೆ ಇಲ್ಲದೆ ಶಿಥಿಲಗೊಂಡಿತ್ತು. ನೆಲ ಮತ್ತು ಮೊದಲ ಮಹಡಿ ಹೊಂದಿರುವ ಕಟ್ಟಡದ ಚಾವಣಿ, ಗೋಪುರಗಳು ಶಿಥಿಲಗೊಂಡು ಕುಸಿಯುವ ಸ್ಥಿತಿಯಲ್ಲಿತ್ತು. ಕಟ್ಟಡದ ಅಲ್ಲಲ್ಲಿ ಗಿಡಗಂಟಿಗಳು ಬೆಳೆದು ಕೆಲವೆಡೆ ಬಿರುಕು ಬಿಟ್ಟಿತ್ತು.

ಸುಮಾರು 114 ವರ್ಷಗಳ ಹಳೆಯದಾದ ಈ ಪಾರಂಪರಿಕ ಕಟ್ಟಡದಲ್ಲಿ ನೀರಾವರಿ ಇಲಾಖೆ ಚೀಫ್ ಇಂಜಿನಿಯರ್ ಕಚೇರಿ, ಕೃಷಿ ಇಲಾಖೆ ಜಂಟಿ ನಿರ್ದೇಶಕ, ಉಪನಿರ್ದೇಶಕ, ಸಹಾಯಕ ನಿರ್ದೇಶಕರ ಕಚೇರಿ, ಕಾಡಾ ಕಚೇರಿಗಳು, ಸಂಘ ಸಂಸ್ಥೆಗಳ ನೋಂದಣಾಧಿಕಾರಿಗಳು, ಜಂಟಿ ನಿಬಂಧಕರು, ಉಪನಿಬಂಧಕರು, ಸಹಾಯಕ ನಿಬಂಧಕರ ಕಚೇರಿ, ಅಂಚೆ ಕಚೇರಿ, ರೇಷ್ಮೆ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಹಾಗೂ ಓರ್ವ ಎಂಎಲ್‌ಎ, ಓರ್ವ ಎಂಪಿ ಹಾಗೂ ಓರ್ವ ಎಂಎಲ್‌ಸಿ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ.

ಲೋಕೋಪಯೋಗಿ ಇಲಾಖೆಯ ಕಟ್ಟಡ ವಿಭಾಗ (ನಂ.1, ವಿಶೇಷ ಉಪ ವಿಭಾಗ)ದ ಅಧೀನದಲ್ಲಿರುವ ಈ ಸಾರ್ವಜನಿಕ ಕಚೇರಿಗಳ ಪಾರಂಪರಿಕ ಕಟ್ಟಡವನ್ನು ಪುನರುಜ್ಜೀವನಗೊಳಿಸಿ, ಸದೃಢಗೊಳಿಸಲು 2022ರ ಡಿಸೆಂಬರ್ ಮಾಹೆಯಲ್ಲಿ ನವೀಕರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿತ್ತು.

ಪಾರಂಪರಿಕ ಇಲಾಖೆಯಿಂದ ಅನುಮತಿ ಪಡೆದು ಪಾರಂಪರಿಕ ತಜ್ಞರ ಸಮಿತಿ ಸದಸ್ಯರ ಸಲಹೆಯಂತೆ ಸುಣ್ಣ, ಬೆಲ್ಲ, ಇಟ್ಟಿಗೆ ಚೂರು, ಅಂಟುವಾಳು ಕಾಯಿ ಬಳಸಿ ಈ ಹಿಂದೆ ಕಟ್ಟಡ ನಿರ್ಮಿಸಿದಾಗ ಬಳಸಿರುವ ಸಾಮಗ್ರಿಗಳ ಗಾರೆ ಬಳಸಿ ಪಾರಂಪರಿಕ ಶೈಲಿಯಲ್ಲೇ ರಿಪೇರಿ ಕೆಲಸ ಮಾಡುತ್ತಿದ್ದು, ಚಾವಣಿ, ಕಟ್ಟಡದ ಮುಂಭಾಗ ಹಾಗೂ ಎಡಭಾಗದ ಸಯ್ಯಾಜಿರಾವ್ ರಸ್ತೆಯ ಪ್ಲಾಸ್ಟಿಂಗ್ ಮುಕ್ತಾಯದ ಹಂತ ತಲುಪಿದೆ.

ಎರಡು ಕೋಟಿ ರೂ. ಅಂದಾಜು ವೆಚ್ಚದ ಕಾಮಗಾರಿಯನ್ನು ಹರೀಶ್ ಎಂಬ ಗುತ್ತಿಗೆದಾರರು ನಿರ್ವಹಿಸುತ್ತಿದ್ದು, ಜಾರ್ಖಂಡ್, ರಾಜಸ್ಥಾನ್ ಮೂಲದ ಕಾರ್ಮಿಕರಿಂದ ಕೆಲಸ ಮಾಡಿಸುತ್ತಿದ್ದಾರೆ. ಟೆರೇಸ್‌ನಲ್ಲಿ ಬಿರುಕು ಬಿಟ್ಟಿದ್ದ ಗ್ಯಾಪ್ ಅನ್ನು ಅರೆದ ಗಾರೆಯಿಂದ ಫಿಲ್ ಮಾಡಿ, ನೀರು ಜಿನುಗದಂತೆ ವಾಟರ್ ಪ್ರೂಫಿಂಗ್ ಮಾಡಲಾಗಿದೆ.

ಪಾರಂಪರಿಕ ಶೈಲಿಯಲ್ಲೇ ಕಾರ್ವಿಂಗ್ ಕೆಲಸ ಮಾಡಬೇಕಾಗಿರುವುದರಿಂದ ಕಾಮಗಾರಿ ನಿಧಾನವಾಗುತ್ತಿದೆ. ಸ್ಥಳದಲ್ಲೇ ಗ್ರೈಂಡರ್ ಯಂತ್ರದಿಂದ ಗಾಣದ ಬೆಲ್ಲ, ಅಂಟುವಾಳು ಕಾಯಿ, ಬಿಲ್ವಪತ್ರೆ ಅಂಟು, ಅರಳೆಕಾಯಿ, ಸುಣ್ಣವನ್ನು ಮಿಕ್ಸ್ ಮಾಡಿ ಅರೆದು ಮಾಗಿದ ನಂತರವೇ ಪ್ಲಾಸ್ಟಿಂಗ್ ಮಾಡಲಾಗುತ್ತಿದೆ ಎಂದು ಗುತ್ತಿಗೆದಾರ ಹರೀಶ್ ತಿಳಿಸಿದ್ದಾರೆ.

ಈಗಾಗಲೇ ಶೇ.50ರಷ್ಟು ಕೆಲಸ ಮುಗಿದಿದ್ದು, ನಾಲ್ಕು ತಿಂಗಳೊಳಗಾಗಿ ಪುನರುಜ್ಜೀವನ ಕಾಮಗಾರಿಯನ್ನು ಪೂರ್ಣಗೊಳಿಸುತ್ತೇವೆ ಎಂದು ತಿಳಿಸಿದರು.

ಅತೀ ಹಳೆಯ ಕಟ್ಟಡವಾದ ಕಾಡಾ ಕಚೇರಿ ಬಿಲ್ಡಿಂಗ್‌ನ ನಿರ್ವಹಣೆಗೆ ಸರ್ಕಾರ ಅನುದಾನ ನೀಡದ ಕಾರಣ ಸಮರ್ಪಕವಾಗಿ ಕಾಲ ಕಾಲಕ್ಕೆ ನಿರ್ವಹಿಸದಿರುವುದು ಕಟ್ಟಡ ಶಿಥಿಲವಾಗಲು ಕಾರಣ. ಅದೇ ರೀತಿ ಕಟ್ಟಡದ ಒಳಭಾಗ ಮತ್ತು ಕಾಂಪೌಂಡ್ ನಿರ್ಮಿಸಲು 1 ಕೋಟಿ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆಯಾದರೂ ಮಂಜೂರಾಗಿಲ್ಲ. ಬಂದ ನಂತರ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಲೋಕೋಪಯೋಗಿ ಇಲಾಖೆ ಇಂಜಿನಿಯರ್ ತಿಳಿಸಿದ್ದಾರೆ.

ಮೈಸೂರು ಆರ್ಟ್ಸ್ ಗ್ಯಾಲರಿಯಿಂದ ಸಾಧಕರಿಗೆ ಸನ್ಮಾನ



ಮೈಸೂರು,ಜೂ.15–ಮೈಸೂರು ಆರ್ಟ್ಸ್ ಗ್ಯಾಲರಿಯ 80 ಹಾಗೂ 81ನೇ ಕಾರ್ಯಕ್ರಮದಲ್ಲಿ ಹರ್ಷ ಪ್ರಿಂಟರ್ಸ್ ಸಂಸ್ಥಾಪಕ ಎಂ.ಚಿನ್ನಸ್ವಾಮಿ ಮತ್ತು ಶ್ರೀ ರಾಜೇಂದ್ರ ಪ್ರಿಂಟರ್ಸ್ ಮತ್ತು ಪಬ್ಲಿಷರ್ ಮಾಲೀಕ ಡಿ.ಎನ್.ಲೋಕಪ್ಪ ಗೌರವಕ್ಕೆ ಪಾತ್ರರಾದರು.

1958ರಲ್ಲಿ ಮೈಸೂರು ವಿಶ್ವವಿದ್ಯಾಲಯ ಪ್ರಸಾರಂಗದ ಮೂಲಕ ದೇ.ಜವರೇಗೌಡರ ನೇತೃತ್ವದಲ್ಲಿ ಆರಂಭವಾದ ಮುದ್ರಣ ಕ್ಷೇತ್ರದ ಆರಂಭದಲ್ಲಿ ಕೆಲಸಕ್ಕೆ ಸೇರಿದ ಮೊದಲಿಗರಾದ ಎಂ.ಚಿನ್ನಸ್ವಾಮಿ ಮುದ್ರಣ ಕ್ಷೇತ್ರದಲ್ಲಿ ಬಾಲ್ಯದಿಂದಲೇ ಆರಂಭಿಸಿ 6 ದಶಕಗಳ ಅಪಾರ ಅನುಭವ ಗಳಿಸಿ ಈಗಲೂ ತಂತ್ರಜ್ಞಾನದ ಪೈಪೋಟಿಯೊಂದಿಗೆ ತಮ್ಮ 83ನೇ ವಯೋಮಾನದ ಜೀವನೋತ್ಸಾಹದಲ್ಲಿ ಇರುವ ಸರಳ ಸಜ್ಜನಿಕೆಯ ಸಾಧಕರು.

ಮತ್ತೋರ್ವ ಸಾಧಕರಾದ ಡಿ.ಎನ್. ಲೋಕಪ್ಪ, ಬಿಎಸ್‌ಸಿ ಪದವಿಯೊಂದಿಗೆ ಲೈಬ್ರರಿ ಸೈನ್ಸ್‌ನಲ್ಲಿ ತರಬೇತಿ ಪಡೆದು ಮುದ್ರಣ ಕಲೆಯಲ್ಲಿ 45 ವರ್ಷಕ್ಕೂ ಹೆಚ್ಚು ಅನುಭವ ಪಡೆದು ಆಧುನಿಕ ತಂತ್ರಜ್ಞಾನ ಮುದ್ರಣ ಲೋಕದಲ್ಲಿ ಹಾಗೂ ಸಂವಹನ ಪ್ರಕಾಶನದಿಂದ ಸಾವಿರಕ್ಕೂ ಹೆಚ್ಚು ಪುಸ್ತಕ ಪ್ರಕಟಿಸಿ ಹಲವಾರು ಹೊಸ ಲೇಖಕರನ್ನು ಸಮಾಜಕ್ಕೆ ಪರಿ ಚಯಿಸಿದ ಕೀರ್ತಿಗೆ ಭಾಜನರಾಗಿದ್ದಾರೆ.

ಸಂವಾದ ಕಾರ್ಯಕ್ರಮದಲ್ಲಿ ಕಲಾಕೂಟ ಅಧ್ಯಕ್ಷ ಚಂದ್ರಶೇಖರ, ದೀಪ್ತಿ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಕಾಳಿಹುಂಡಿ ಶಿವಕುಮಾರ್, ಆಕಾಶವಾಣಿ ಶ್ರೋತೃ ಬಳಗದ ಕಣ್ಣೂರು ಗೋವಿಂದಚಾರಿ, ತಾರಾ ಪ್ರಿಂಟರ್ಸ್‌ನ ಕಾರ್ತಿಕ್, ಪ್ರಸಾರಂಗದ ಹಿರಿಯರು ಹಾಗೂ ಅನುಭವಿ ಮೇಲ್ವಿಚಾರಕರು, ಹಿರಿಯ ಛಾಯಾಗ್ರಾಹಕ ಕೊ.ಸು.ನರಸಿಂಹಮೂರ್ತಿ ಮತ್ತಿತರರು ಹಾಜರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಿವಲಿಂಗಪ್ಪ ವಹಿಸಿದ್ದರು. ಕಾರ್ಯದರ್ಶಿ ಜಮುನಾರಾಣಿ ಮಿರ್ಲೆ ಕಾರ್ಯಕ್ರಮ ನಿರೂಪಿಸಿದರೆ, ಸಂಚಾಲಕ ಶ್ರೀಕಂಠಮೂರ್ತಿ ವಂದನಾರ್ಪಣೆ ಮಾಡಿದರು.

ಅರ್ಜಿ ಆಹ್ವಾನ

ಮೈಸೂರು,ಜೂ.15–ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2023–24ನೇ ಶೈಕ್ಷಣಿಕ ಸಾಲಿನಲ್ಲಿ ಮೆಟ್ರಿಕ್ ನಂತರದ ದ್ವಿತೀಯ ಪಿಯುಸಿ, 3 ವರ್ಷದ ಪಾಲಿಟೆಕ್ನಿಕ್ ಡಿಪ್ಲೋಮಾ, ಪದವಿ ಅಥವಾ ಸ್ನಾತಕೋತ್ತರ ಪದವಿ ಹಾಗೂ ವೃತ್ತಿಪರ ಕೋರ್ಸ್‌ಗಳನ್ನು ಪೂರ್ಣಗೊಳಿಸಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದ್ದು, ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ sw.kar.nic.inನಲ್ಲಿ ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರನ್ನು ಅಥವಾ ದೂ. ಸಂ–0821–2520910 ಅನ್ನು ಸಂಪರ್ಕಿಸಬಹುದು

ರೈತ ವಿರೋಧಿ ಕಾಯ್ದೆ ವಾಪಸ್‌ಗೆ ಆಗ್ರಹಿಸಿ ರೈತಾಗ್ರಹ ಧರಣಿ



ಮೈಸೂರು, ಜೂ.15 (ಜಿಎ)– ಹಿಂದಿನ ರಾಜ್ಯ ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ರೈತ ವಿರೋಧಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಆಗ್ರಹಿಸಿ ರಾಜ್ಯ ರೈತ ಸಂಘದ ವತಿಯಿಂದ ಡಿಸಿ ಕಚೇರಿ ಮುಂಭಾಗ ರೈತಾಗ್ರಹ ಧರಣಿ ನಡೆಸಲಾಯಿತು.

ರಾಜ್ಯ ರೈತ ಸಂಘದ ವತಿಯಿಂದ ರಾಜ್ಯಾದ್ಯಂತ ಕರೆ ನೀಡಿರುವ ರೈತಾಗ್ರಹ ಧರಣಿ ಹಿನ್ನೆಲೆಯಲ್ಲಿ ಡಿಸಿ ಕಚೇರಿ ಬಳಿ ಜಮಾಯಿಸಿದ ರೈತ ಸಂಘದ ಪದಾಧಿಕಾರಿಗಳು ರೈತ ವಿರೋಧಿ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ ಮತ್ತು ಜಾನುವಾರು ಹತ್ಯೆ ಪ್ರತಿಬಂಧಕ, ಸಂರಕ್ಷಣಾ ಕಾಯ್ದೆಯನ್ನು ವಾಪಸ್ ಪಡೆಯುವಂತೆ ಆಗ್ರಹಿಸಿ ಮುಖ್ಯಮಂತ್ರಿಗಳಿಗೆ ಹಕ್ಕೊತ್ತಾಯ ಪತ್ರ ನೀಡಿದರು.

ಈ ವೇಳೆ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಕಾಂಗ್ರೆಸ್ ಚುನಾವಣಾ ಪೂರ್ವ ನೀಡಿದ 5 ಗ್ಯಾರಂಟಿ ಪೈಕಿ ಕೆಲವುಗಳನ್ನು ಈಗಾಗಲೇ ಜಾರಿಗೆ ತಂದಿರುವುದು ಸಂತಸದ ವಿಚಾರ. ಉಳಿದ ಗ್ಯಾರಂಟಿಗಳನ್ನು ಜಾರಿಗೆ ತರುವ ಭರವಸೆ ಇದೆ. ಹಾಗೇ ಎಪಿಎಂಸಿ ಮಾರುಕಟ್ಟೆಯನ್ನು ರೈತಸ್ನೇಹಿಯಾಗಿ ರೂಪಿಸಿ, ಮಾರುಕಟ್ಟೆ ವ್ಯವಸ್ಥೆಯನ್ನು ಮತ್ತಷ್ಟು ವಿಸ್ತರಿಸಿ ರೈತರಿಗಾಗುತ್ತಿರುವ ವಂಚನೆಗಳನ್ನು ತಪ್ಪಿಸಿ ಎಂದರು.

ಕೆಇಆರ್‌ಸಿ ಅವೈಜ್ಞಾನಿಕವಾಗಿ ವಿದ್ಯುತ್ ದರವನ್ನು ಹೆಚ್ಚಿಸಿದ್ದು, ಅದನ್ನು ತಡೆಹಿಡಿದು ಸಾಮಾನ್ಯ ಜನರಿಗೆ ಅನುಕೂಲ ಮಾಡಬೇಕು. ಹಸಿರು ಕಾರಣಕ್ಕಾಗಿ ರೈತರು ಅವರ ಜಮೀನಿನಲ್ಲಿ ಮರಗಿಡಗಳನ್ನು ಬೆಳೆಸಲು ಅರಣ್ಯ ಇಲಾಖೆ ರಿಯಾಯಿತಿ ದರದಲ್ಲಿ ಅಗತ್ಯ ಸಸಿಗಳನ್ನು ನೀಡುತ್ತಿತ್ತು. ಆದರೆ, ಈ ಸಾಲಿನಲ್ಲಿ ಸಸಿಗಳ ಬೆಲೆಯನ್ನು ಹೆಚ್ಚಳ ಮಾಡಿದೆ. ತಕ್ಷಣ ಅದನ್ನು ಹಿಂಪಡೆಯಬೇಕೆಂದು ಆಗ್ರಹಿಸಿದರು.

ಭತ್ತ ಬೆಳೆಯುವ ಪ್ರದೇಶವು ಪ್ರತಿವರ್ಷ ಕಡಿಮೆಯಾಗುತ್ತಿದ್ದು, ಅದನ್ನು ಉತ್ತೇಜಿಸಲು ಸರ್ಕಾರ ವಿಶೇಷ ಆದ್ಯತೆ ನೀಡಬೇಕು. ಕಳೆದ ಸರ್ಕಾರ ತೀರ್ಮಾನಿಸಿರುವಂತೆ 1 ಟನ್ ಕಬ್ಬಿಗೆ 150 ರೂ.ಗಳನ್ನು ಕಾರ್ಖಾನೆಗಳು ರೈತರಿಗೆ ಪಾವತಿಸಲು ಕ್ರಮ ಕೈಗೊಳ್ಳಬೇಕಿದೆ. ಹಾಗೆ ರಾಜ್ಯದ 12 ಜಿಲ್ಲೆಗಳಲ್ಲಿ ತೆಂಗು ಬೆಳೆಯುತ್ತಿದ್ದು, ಕೊಬ್ಬರಿ ಬೆಲೆ ಕುಸಿತದಿಂದ ರೈತರು ಕಂಗಾಲಾಗಿದ್ದಾರೆ. ಕಳೆದ ವರ್ಷ ಕೊಬ್ಬರಿ ಕ್ವಿಂಟಾಲ್‌ಗೆ 19 ಸಾವಿರ ರೂ. ಇತ್ತು ಆದರೆ, ಈ ವರ್ಷ 8,500 ರೂ. ನಿಗದಿ ಮಾಡಲಾಗಿದೆ. ಕನಿಷ್ಠ ಕ್ವಿಂಟಾಲ್‌ಗೆ 20 ಸಾವಿರ ರೂ. ದೊರಕಿಸಿ ಕೊಡಬೇಕು. ಕೃಷಿ ಬೆಲೆ ಆಯೋಗಕ್ಕೆ ಶಾಸನಾತ್ಮಕ ಅಧಿಕಾರ ನೀಡುವಂತೆ ಹಾಗೂ ರೈತಪರ ನೀತಿಗಳನ್ನು ರೂಪಿಸುವಂತೆ ಒತ್ತಾಯಿಸಿದರು.

ಧರಣಿಯಲ್ಲಿ ಜಿಲ್ಲಾಧ್ಯಕ್ಷ ಹೊಸೂರ್ ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜ, ಮುಖಂಡರಾದ ಪ್ರಸನ್ನ ಎನ್.ಗೌಡ, ಬೊಕ್ಕಳ್ಳಿ ನಂಜುಂಡಸ್ವಾಮಿ, ಪಿ.ಮರಂಕಯ್ಯ, ಹುಣಸೂರು ತಾಲೂಕು ಅಧ್ಯಕ್ಷ ಬೆಂಕಿಪುರ ಚಿಕ್ಕಣ್ಣ, ಹೆಚ್‌ಡಿ ಕೋಟೆ ತಾಲೂಕು ಅಧ್ಯಕ್ಷ ಮಾದೇವನಾಯಕ, ಟಿ.ನರಸೀಪುರ ತಾಲೂಕು ಕಾರ್ಯದರ್ಶಿ ಅತ್ತಳ್ಳಿ ಶಿವನಂಜು, ಮೈಸೂರು ತಾಲೂಕು ಅಧ್ಯಕ್ಷ ಪ್ರಭಾಕರ್, ಕಾರ್ಯದರ್ಶಿ ಮಹೇಶ, ನಂಜನಗೂಡು ತಾಲೂಕು ಅಧ್ಯಕ್ಷ ಸಿದ್ದಪ್ಪ, ಪ್ರಕಾಶ್, ದೇವಮ್ಮ ಇನ್ನಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.6.2023 ಶುಕ್ರವಾರ, ಮಳೆ ನಕ್ಷತ್ರ: ಮೃಗಶಿರ, 08.06.2023 ರಿಂದ 21.06.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ,
ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಚರ್ಮರೋಗಿಗಳಿಗೆ ಚಿಕಿತ್ಸಾ ಶಿಬಿರ, 'ಆಯುರ್ವೇದ ಪಂಚಕರ್ಮ', ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ, ಆಲನಹಳ್ಳಿ, ಬೆಳಗ್ಗೆಯಿಂದ.

■ **ದಿ ಆರ್ಟ್ ಆಫ್ ಲಿವಿಂಗ್ :** ಶ್ರೀ ಶ್ರೀ ಯೋಗ ಶಿಬಿರ, ಸ್ಥಳ: 2870, ವಜ್ರನಖ, 1ನೇ ಮೇನ್, 4ನೇ ಕ್ರಾಸ್, ಚಾಮುಂಡಿಪುರಂ; ಆರ್ಟ್ ಆಫ್ ಲಿವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6 ರಿಂದ 7

■ **ಮೈಸೂರು ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘ :** ಪತ್ರಕರ್ತರಿಗೆ ಯಶಸ್ವಿನಿ ಆರೋಗ್ಯ ವಿಮೆ ಸ್ಮಾರ್ಟ್ ಕಾರ್ಡ್ ವಿತರಣೆ ಮತ್ತು ವಾರ್ಷಿಕ ಪ್ರಶಸ್ತಿಗಳ ಪ್ರದಾನ ಸಮಾರಂಭ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಯಶಸ್ವಿನಿ ಆರೋಗ್ಯ ವಿಮೆ ಸ್ಮಾರ್ಟ್ ಕಾರ್ಡ್ ವಿತರಣೆ : ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ. ದೀಪಕ್, ಮುಖ್ಯ ಅತಿಥಿಗಳು : ಸಹಕಾರ ಸಂಘಗಳ ಜಂಟಿ ನಿಬಂಧಕ ಡಾ. ಉಮೇಶ್, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್. ಬಸಂತ್, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಇಂಟರ್‌ನ್ಯಾಷನಲ್ ಸೆಂಟರ್, ಇಂಟರ್‌ನೆಟ್ ಕ್ವಾಲಿಟಿ ಅಶ್ಯೂರೆನ್ಸ್ ಸೆಲ್ :** 2024–25 ಫುಲ್‌ಬ್ರೈಟ್–ನೆಹರೂ, ಫುಲ್‌ಬ್ರೈಟ್ –ಕಲಾಂ ಮತ್ತು ಇತರ ಫುಲ್‌ಬ್ರೈಟ್ ಫೆಲೋಶಿಪ್ಸ್ ಬಗ್ಗೆ ಮಾಹಿತಿ ಅಧಿವೇಶನ, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉಪಸ್ಥಿತರು: ಫುಲ್‌ಬ್ರೈಟ್ ಪ್ರೋಗ್ರಾಂ ಕೋಆರ್ಡಿನೇಟರ್ ಶಿನು ಶೋಭಾ ವಿನ್ಸೆಂಟ್, ಸ್ಥಳ: ಸೆಮಿನಾರ್ ಹಾಲ್, ವಿಜ್ಞಾನ ಭವನ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಪ್ರೌಢಶಾಲೆ, ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ :** ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಶಾಲೆ ಮುಖ್ಯೋಪಾಧ್ಯಾಯರಾದ ಶ್ರೀಮತಿ ಸುಶೀಲಾ, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಅಭಿನಂದನಾ ಭಾಷಣ: ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಸಿದ್ದರಾಮು, ಪುರಸ್ಕಾರ ಪ್ರದಾನ: ಕಲಾವಿದರಾದ ಡಾ.ಜಮುನಾರಾಣಿ ಮಿರ್ಲೆ, ಮುಖ್ಯ ಅತಿಥಿಗಳು : ಡಾ. ಎಂ.ಡಿ. ಪ್ರಸನ್ನ, ಕವಯತ್ರಿ ಶ್ರೀಮತಿ ಕೆರೋಡಿ ಎಂ. ಲೋಲಾಕ್ಷಿ, ಸ್ಥಳ: ಜೆಎಸ್‌ಎಸ್ ಪ್ರೌಢಶಾಲೆ, ರಾಜ್‌ಕುಮಾರ್ ರಸ್ತೆ, ಮಧ್ಯಾಹ್ನ 2.30ಕ್ಕೆ.

■ **ಎಂಎಂಕೆ– ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ:** ಅಂತರ ಕಾಲೇಜು ಸ್ಪರ್ಧೆ–2023 'ಪ್ರಭಿಜ್ಞಾನ್', ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ನಟ ರಂಜನ್ ಕಾಸರಗೋಡು, ಅಧ್ಯಕ್ಷತೆ: ಮಹಾವಿದ್ಯಾಲಯ ಪ್ರಾಂಶುಪಾಲ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು, ಸ್ಥಳ: ಮಹಾವಿದ್ಯಾಲಯ, ಸಂಜೆ 4.30ಕ್ಕೆ.

■ **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** ಪ್ರತಿಷ್ಠಾಪನಾ ವಾರ್ಷಿಕ ಮಹೋತ್ಸವ, ಶ್ರೀ ಗುರುವಾಯೂರಪ್ಪನಿಗೆ ಪ್ರಸಾದ ಶುದ್ಧಿ, ಅಸ್ತ್ರ ಕಳಶ ಪೂಜಾ, ವಾಸ್ತು ಹೋಮ, ವಾಸ್ತು ಕಳಶಪೂಜಾ, ವಾಸ್ತು ಕಳಶಾಭಿಷೇಕಂ, ವಾಸ್ತುಬಲಿ, ರಾಕ್ಷೋಘ್ನ ಹೋಮ, ಅತ್ತಾಳ ಪೂಜಾ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟದ ಪಾದ, ಸಂಜೆ 5.30 ರಿಂದ.

■ **ಕದಂಬ ರಂಗ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** ಕದಂಬ ರಂಗ ವೇದಿಕೆ ಸಂಭ್ರಮ, ಬೆಂಗಳೂರಿನ ಸೈಡ್‌ವಿಂಗ್ ಕಲಾವಿದರಿಂದ ಸೀತೂ ಮದುವೆ ನಾಟಕ ಪ್ರದರ್ಶನ, ಮೂಲ : ಶ್ರೀ ಬೀಚಿ, ನಿರ್ದೇಶನ : ಎಂ.ಎಂ. ಶೈಲೇಶ್ ಕುಮಾರ್, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾಪರಂಪರೆ–ಬಾನುಲಿ ಸರಣಿ, ಪ್ರಸ್ತುತಿ–ಡಾ. ಎ.ಎಸ್. ಚಂದ್ರಶೇಖರ್, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು–ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜ್, ಮೈಸೂರು, 6.40 ಪದ ಸಂಸ್ಕೃತಿ–ಡಾ.ಶ್ರೀಧರ ಹೆಗಡೆ ಭದ್ರನ್, 7.15 ಭಾವಗೀತೆಗಳು–ಅಜಯ್ ವಾರಿಯರ್, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ನೇದನೂರಿ ಕೃಷ್ಣಮೂರ್ತಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಡಿ.ಪುರುಶೋತ್ತಮ್, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಅಕ್ಷತಾ ಅಥೋನಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ಎ.ಎಸ್.ಪದ್ಮಾ–ವೀಣಾವಾದನ, 4.00 ಮಹಿಳಾರಂಗ–ಕೈಗನ್ನಡಿ, ಪ್ರಸ್ತುತಿ–ನಿಶಿತಾ ಕೃಷ್ಣಸ್ವಾಮಿ, 4.30 ವೃತ್ತಿ ಮಾರ್ಗದರ್ಶನ–ಫಿಸಿಕಲ್ ಫಿಟ್ನೆಸ್ ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಹರ್ಷಿತಾ ಸಂಗಯ ಮತ್ತು ಸುಂದರ್ ರಾವ್ ಶಿಂಧೆ ಅವರೊಂದಿಗೆ ಮಾತುಕತೆ, 6.55 ಕೃಷಿರಂಗ–ಕಿಸಾನ್‌ವಾಣಿ–ಸಹಜ ಕೃಷಿಯಲ್ಲಿ ತೊಡಗಿರುವ ಎಂ.ವಿ.ಕೃಷ್ಣ ಹಾಗೂ ಕಿರಣ ದಂಪತಿಗಳೊಂದಿಗೆ ಸಂವಾದದಲ್ಲಿ ಭಾಗವಹಿಸುವವರು ಜಿ.ಶಾಂತಕುಮಾರ್, 8.00 ವಿಜ್ಞಾನ ಭಾರತಿ, 9.15 ಜನಪದ ಸಂಗೀತ, 9.30 ಗಾನ ಲಹರಿ, ಪ್ರಸ್ತುತಿ–ಶ್ರೀಕಾಂತ ಕುಲಕರ್ಣಿ ಮತ್ತು ಮಾಯಾ ರಾಮನ್, 10.30 ವಾದ್ಯವೃಂದ, ನಿರ್ದೇಶನ–ತುಮಕೂರು ಬಿ.ರವಿಶಂಕರ್, 10.30 ಸವಿನೆನಪು

ಅಕ್ಕಿ ಕೊಡದ ಕೇಂದ್ರಕ್ಕೆ ಡಿಕೆಶಿ ಡಿಚ್ಚಿ!

ದೊಡ್ಡ ಮಟ್ಟದ ಹೋರಾಟ ರೂಪಿಸುವ ಘೋಷಣೆ



ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿದ್ದ ಡಿಸಿಎಂ ಡಿ.ಕೆ.ಶಿವಕುಮಾರ್ ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು.

ಮೈಸೂರು, ಜೂ.15(ಎಸ್‌ಬಿಡಿ)– ತಿನ್ನುವ ಅಕ್ಕಿ ಹಾಗೂ ಬಡವರ ವಿಷಯದಲ್ಲಿ ರಾಜಕೀಯ ಮಾಡುವುದನ್ನು ಕಾಂಗ್ರೆಸ್ ತೀವ್ರವಾಗಿ ಖಂಡಿಸಿದ್ದು, ಕೇಂದ್ರ ಸರ್ಕಾರದ ಧೋರಣೆ ವಿರುದ್ಧ ದೊಡ್ಡ ಮಟ್ಟದ ಹೋರಾಟ ರೂಪಿಸುವುದಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಖಾಸಗಿ ಕಾರ್ಯಕ್ರಮ ನಿಮಿತ್ತ ಗುರುವಾರ ಮೈಸೂರಿಗೆ ಆಗಮಿಸಿದ್ದ ಅವರು ಇಲ್ಲಿನ ವಿಮಾನ ನಿಲ್ದಾಣದಲ್ಲಿ ಮಾಧ್ಯದವರಿಗೆ ಪ್ರತಿಕ್ರಿಯಿಸಿ, ಕೇಂದ್ರ ಸರ್ಕಾರ ನಮಗೆ ಪುಕ್ಕಟ್ಟೆ ಅಕ್ಕಿ ಕೊಡುತ್ತಿಲ್ಲ. ಅದಕ್ಕಾಗಿ ಹಣ ಕೊಡುತ್ತೇವೆ. ಹಾಗಾಗಿ ಈವರೆಗೆ ಅನುಸರಿಸುತ್ತಿದ್ದ ವ್ಯವಸ್ಥೆಯಡಿಯಲ್ಲೇ ಅಕ್ಕಿ ಕೇಳಿದ್ದೆವು. ಆದರೆ ಈಗ ಇಲ್ಲ ಎನ್ನುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅನ್ನಭಾಗ್ಯ ಯೋಜನೆಯಡಿ ಜುಲೈ 1ರಿಂದ ಫಲಾನುಭವಿಗಳಿಗೆ ತಲಾ 10 ಕೆಜಿ ಅಕ್ಕಿ ವಿತರಿಸಲು ತೀರ್ಮಾನಿಸಿದ್ದೇವೆ. ಆದರೆ ಕೇಂದ್ರ ಆಹಾರ ನಿಗಮದವರು ಅಕ್ಕಿ ಕೊಡುತ್ತಿಲ್ಲ. ನಮ್ಮ ಬಳಿ ಅಕ್ಕಿ ಇಲ್ಲ ಎಂದು ಪತ್ರ ಬರೆದಿದ್ದಾರೆ. ನಮಗೆ ಅಕ್ಕಿ ಕೊಡಬೇಕಾಗುತ್ತದೆ ಎಂಬ ಕಾರಣದಿಂದ ಹಲವು ರಾಜ್ಯಗಳಿಗೂ ಕೊಡುವುದಿಲ್ಲ ಎಂದು ತಿಳಿಸಲಾಗಿದೆ. ಹೀಗಾಗಿ, ನಮಗೇನೂ ಉಳಿದಿಲ್ಲ. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಛತ್ತೀಸ್‌ಗಡ, ತೆಲಂಗಾಣ ಸೇರಿದಂತೆ ಹಲವು ರಾಜ್ಯದವರ ಜೊತೆ ಮಾತನಾಡುತ್ತಿದ್ದಾರೆ. ಯಾವ ರೀತಿಯಲ್ಲಾದರೂ ಅಕ್ಕಿ ಖರೀದಿಸುವ ಪ್ರಯತ್ನ ನಡೆದಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಧೋರಣೆಯನ್ನು ಕಾಂಗ್ರೆಸ್ ತೀವ್ರವಾಗಿ ಖಂಡಿಸುತ್ತದೆ. ಈ ತಾರತಮ್ಯವನ್ನು ವಿರೋಧಿಸುತ್ತೇವೆ. ತಿನ್ನುವ ಅಕ್ಕಿ ಹಾಗೂ ಬಡವರ ವಿಷಯದಲ್ಲಿ ರಾಜಕೀಯ ಮಾಡುವುದನ್ನು ಪ್ರತಿಭಟಿಸುತ್ತೇವೆ. ಈ ನಿಟ್ಟಿನಲ್ಲಿ ದೊಡ್ಡಮಟ್ಟದ ಹೋರಾಟವನ್ನೇ ರೂಪಿಸುತ್ತೇವೆ. ಅದರ ರೂಪುರೇಷೆಗಳ ಬಗ್ಗೆ ಬೆಂಗಳೂರಲ್ಲಿ ವಿವರಣೆ ನೀಡುತ್ತೇನೆ ಎಂದರು.

ರಾಜ್ಯದ ಅನ್ನಭಾಗ್ಯ ಯೋಜನೆಗೆ ಸ್ಥಳೀಯ ರೈತರಿಂದಲೇ ಬತ್ತ ಖರೀದಿಸಬೇಕೆಂಬ ರೈತ ಮುಖಂಡರ ಆಗ್ರಹಕ್ಕೆ ಪ್ರತಿಕ್ರಿಯಿಸಿದ ಡಿಕೆಶಿ, ಮುಕ್ತ ಮಾರುಕಟ್ಟೆ ಮೂಲಕ ಅಕ್ಕಿ ಖರೀದಿಸಲು ಸಾಧ್ಯವಿಲ್ಲ. ಎಲ್ಲಾ ಪ್ರಕ್ರಿಯೆಯೂ ಪಾರದರ್ಶಕವಾಗಿರಬೇಕು. ನ್ಯಾಯಬದ್ಧವಾಗಿ ಸರ್ಕಾರಿ ಸಂಸ್ಥೆಗಳು ಹಾಗೂ ನಿಗದಿತ ಏಜೆನ್ಸಿಗಳ ಮೂಲಕವೇ ಖರೀದಿಸಬೇಕಾಗುತ್ತದೆ. ಯಾರೂ ಬೆರಳು ತೋರಿಸದಂತೆ ಕ್ರಮ ವಹಿಸಬೇಕು ಎಂದು ಸ್ಪಷ್ಟಪಡಿಸಿದರು.

ಆದರ್ಶ ವಿದ್ಯಾಲಯ 6ನೇ ತರಗತಿ ದಾಖಲಾತಿಗೆ ಗಡುವು ವಿಸ್ತರಣೆ

ಮೈಸೂರು, ಜೂ.15(ಎಸ್‌ಪಿಎನ್)– 2023–24ನೇ ಸಾಲಿನ ಆದರ್ಶ ವಿದ್ಯಾಲಯದ 6ನೇ ತರಗತಿ ದಾಖಲಾತಿಗೆ ಜೂ.19ರವರೆಗೆ ಗಡುವು ವಿಸ್ತರಿಸಿ ಸಮಗ್ರ ಶಿಕ್ಷಣ ರಾಜ್ಯ ಯೋಜನಾ ನಿರ್ದೇಶಕಿ ಬಿ.ಬಿ.ಕಾವೇರಿ ಆದೇಶಿಸಿದ್ದಾರೆ.

ಈ ಹಿಂದೆ ಪ್ರವೇಶಾತಿಗೆ ಜೂ.12ರಂದು ಕೊನೆ ದಿನ ನಿಗದಿಗೊಳಿಸಲಾಗಿತ್ತು. ಆದರೆ, ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು ಮೊದಲ ಸುತ್ತಿನ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸಲು ಕೋರಿದ್ದರು. ಈ ಹಿನ್ನೆಲೆಯಲ್ಲಿ ಜೂ.19ರವರೆಗೆ ಗಡುವು ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಈಗಾಗಲೇ ಮೊದಲ ಸುತ್ತಿನ ಪ್ರವೇಶ ಪಡೆಯದ ವಿದ್ಯಾರ್ಥಿಗಳಿಗೆ ರಾಜ್ಯ ಯೋಜನಾ ನಿರ್ದೇಶಕರ ಕಚೇರಿಯಿಂದ ಎಸ್‌ಎಂಎಸ್ ಕಳುಹಿಸಲಾಗಿದ್ದು, ಶಾಲಾ ಮುಖ್ಯ ಶಿಕ್ಷಕರು ಈ ವಿದ್ಯಾರ್ಥಿಗಳ ದೂರವಾಣಿ ಸಂಖ್ಯೆಗೆ ಕರೆ ಮಾಡಿ ಪ್ರವೇಶಾತಿ ಪಡೆಯಲು ಸೂಚಿಸುವುದು ಹಾಗೂ ಕರೆ ಮಾಡಿರುವುದಕ್ಕೆ ದಾಖಲೆ ನಿರ್ವಹಣೆ ಮಾಡುವುದು ಕಡ್ಡಾಯ ಎಂದಿದ್ದಾರೆ.

ಶ್ರೀ ಸಪ್ತರ್ಷಿ ವೈದಿಕ ಗುರುಕುಲ ಆಶ್ರಮಕ್ಕೆ ಉಚಿತ ಪ್ರವೇಶ

ಮೈಸೂರು,ಜೂ. 15–ಮೈಸೂರಿನ ಕೆ.ಆರ್.ಎಸ್ ರಸ್ತೆಯಲ್ಲಿರುವ ಸಾಧನಹಳ್ಳಿ ಶ್ರೀ ಸಪ್ತರ್ಷಿ ವೈದಿಕ ಗುರುಕುಲ ಸೇವಾಶ್ರಮದ ವತಿಯಿಂದ ನಡೆಸಲಾಗುತ್ತಿರುವ 2ನೇ ತರಗತಿಯಿಂದ 10ನೇ ತರಗತಿವರೆಗೆ ವಿದ್ಯಾಭ್ಯಾಸ ಬಯಸಿ ಬರುವವರಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. 8, 9, 10ನೇ ತರಗತಿ ಹಾಗೂ ಪಿಯುಸಿಯಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಉಚಿತವಾಗಿ ವೇದ, ಆಗಮ, ಜ್ಯೋತಿಷ್ಯ, ಸಂಸ್ಕೃತಿ ಕಲಿಕೆ, ಶಾಸ್ತ್ರೀಯ ಸಂಗೀತವನ್ನು ನುರಿತ ಶಿಕ್ಷಣ ತಜ್ಞರಿಂದ ಬೋಧನೆಯನ್ನು ಮಾಡಲಾಗುವುದು. ಮಾಹಿತಿಗಾಗಿ ಆಶ್ರಮದ ಪೀಠಾಧ್ಯಕ್ಷ ಡಾ.ಅಭಿನವ, ಶ್ರೀರಂಗ ರಾಮಾನುಜಚಾರ್ಯಜೀ ಅವರನ್ನು 9481319111, 8861573934 ಸಂಪರ್ಕಿಸಬಹುದು.

ಶಿಕ್ಷಕರು ತರಬೇತಿ ಪಡೆಯಲು ಸೂಚನೆ

ಮೈಸೂರು, ಜೂ.15(ಎಸ್‌ಪಿಎನ್)– ಇಎನ್‌ಕೆ ಲೆವೆಲ್–02 ಆನ್‌ಲೈನ್ ತರಬೇತಿ ಕೋರ್ಸ್ ಅನ್ನು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ನಲಿಕಲಿ ಘಟಕದ ಶಿಕ್ಷಕರು ಪಡೆದುಕೊಳ್ಳುವಂತೆ ಬೆಂಗಳೂರು ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕಿ ಡಾ.ಬಿ.ಬಿ.ಕಾವೇರಿ ಆದೇಶಿಸಿದ್ದಾರೆ. ಕರ್ನಾಟಕ ರಾಜ್ಯ ಕನ್ನಡ ಮತ್ತು ಉರ್ದು ಮಾಧ್ಯಮದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ನಲಿಕಲಿ ಬೋಧನಾ ಕಲಿಕಾ ಪದ್ಧತಿಯನ್ನು ಅನುಷ್ಠಾನಗೊಳಿಸಲಾಗಿದೆ. ದ್ವಿತೀಯ ಭಾಷೆ ಇಂಗ್ಲಿಷ್ ವಿಷಯವನ್ನು ನಲಿಕಲಿ ವಿಧಾನಕ್ಕೆ ಒಳಪಡಿಸಲಾಗಿದ್ದು, ಇಎನ್‌ಕೆ ಲೆವೆಲ್–01 ತರಬೇತಿಯನ್ನು ಶಿಕ್ಷಕರಿಗೆ ಈಗಾಗಲೇ ನೀಡಲಾಗಿರುತ್ತದೆ. ಈ ತರಬೇತಿಯನ್ನು ನಲಿಕಲಿ ಘಟಕದ ಶಿಕ್ಷಕರು ದೀಕ್ಷಾ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಿರುವ ಇಎನ್‌ಕೆ ಆನ್‌ಲೈನ್ ತರಬೇತಿ ಕೋರ್ಸ್ ಅನ್ನು ನಲಿಕಲಿ ಘಟಕಗಳ ಶಿಕ್ಷಕರೆಲ್ಲರೂ ಜು.31ರೊಳಗೆ ಪಡೆದುಕೊಳ್ಳುವಂತೆ ಅಗತ್ಯ ಕ್ರಮವಹಿಸಲು ರಾಜ್ಯದ ಎಲ್ಲಾ ಉಪ ನಿರ್ದೇಶಕರಿಗೆ (ಅಭಿವೃದ್ಧಿ) ಸೂಚಿಸಿದ್ದಾರೆ.

NOTICE

NOTICE is hereby given that Chythanya Kumar N B and family have agreed to sell the property mentioned in the schedule hereto, to my client.

All persons claiming an interest in the said property or any part thereof by way of sale, gift, lease, inheritance, exchange, mortgage, charge, lien, trust, possession, easement, attachment or otherwise howsoever are hereby required to make the same known to the undersigned at his office at # 1089, 1st floor, Vishnuvardhana Road, Chamarajapuram, Mysore-05 (9945761155) within 15 days from the date hereof, failing which the said sale will be completed, without any reference to such claim and the same, if any, shall be considered as waived.

SCHEDULE

All that piece and parcel of Property bearing No. 63/4, F-2/4, Gurukar Devanna Cross Road, Khille Mohalla, Mysuru, presently measuring East to West 60.00 Feet and North to South 50.00 Feet, totally measuring 3000.00 Square Feet and bounded as follows: East by : Gurukar Devanna Street, West by: Property of Late N.B. Puttanna: North by : Private Property: South by: Property of N.B. Sambashivan.

Sd/- P. Prithvi Kiran Setty
Advocate, KAR 1293/11
1089, 1st Floor, Vishnuvardhana Road,
Chamarajapuram, Mysuru-570005,
Date: 14-06-2023 Ph: 9945761155

IN THE COURT OF SENIOR CIVIL JUDGE AT VIRAJPET

P&SC NO 4/2022

Petitioner: 1) G. V. Saraswathi, aged 79 years, W/o late G. S. Venkataramana Bhat 2)Manorama Bhat G. V, aged 57 years, W/o Dr. Udaya Chandra P. N. D/o late G. S. Venkataramana Bhat, Takshashila, 1st Cross, Shivajinagar, Ujire Village and Post, Belthangady Taluk-574240
3)Chandrashekar Bhat G. V aged 59 years S/o late G. S. Venkataramana Bhat Nalkeri Village, Virajpet Taluk -Vs-
Respondent: Nil

NOTICE

The Petitioners have filed this Petition for issuance of Succession Certificate in their name in respect of the schedule properties. If anybody has any objection for issuance of Succession Certificate, they may appear before the Court on 18-7-2023 either personally or through Advocate on at 11.a.m. failing which the case will proceed placing you experte.

SCHEDULE OF THE PROPERTIES

402 Shares in Vijaya bank, now bank of Baroda, Kakotuparambu branch, **a)** Folio Number 114897, Distinctive No's 28335 0501-283350600, Certificate No's:- 241129, **b)** Folio No:- 114897, Distinctive No's: 283350601-283350700, Certificate No's: 241130, **c)**Folio No: 114897, Distinctive No's 283350701- 283350800, Certificate No's 241131, **d)**Folio No: 114897, Distinctive No's: 283350801-283350900, Certificate No:- 241132. **e)** Folio No: 114897, Distinctive No's - 2833 50901-283351000, Certificate No: 241133. **f)** Folio No: 114897, Distinctive No:-'s 283351001-283351100, Certificate No:- 241134. **g)** Folio No: 114897, Distinctive No's 283351 101-283351200, Certificate No:-241135.

h) Folio No: 114897, Distinctive No's: 2833 51201-283351300, Certificate No:- 241136. **i)**Folio No:-114897, Distinctive No's -283351301-283351400, Certific ate No:- 241137. **j)** Folio No: 114897, Distinctive No's 28335 1401-283351500, Certificate No:- 241138

By order of Court
Sd/- Cheif Ministerial Officer Senior Civil Judge and JMFC Court, Virajpet
Virajpet, Date: 13.06.2023
IR. Pramod,
Advocate for Plaintiff

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿರವರ ಕಛೇರಿ,
ಜಿಲ್ಲಾ ಪಂಚಾಯತ್, ಮಂಡ್ಯ. ಫೋನ್ : 08232–2240273,
E-mail : dho.mandya@gmail.com
ಸಂಖ್ಯೆ: ಸರಬ/01/2023–24 ದಿನಾಂಕ:13.06.2023

ಇ–ಟೆಂಡರ್ ಪ್ರಕಟಣೆ – (E-PROCUREMENT TENDER)

ವಿಷಯ: 2023–24 ನೇ ಸಾಲಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಮಂಡ್ಯ ರವರ ಅಧೀನದಲ್ಲಿ ಬರುವ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಇಲಾಖಾ ಕಾರ್ಯಕ್ರಮಗಳ ಅನುಷ್ಠಾನಗೊಳಿಸಲು ಖಾಸಗಿ ವಾಹನಗಳನ್ನು ಹೊರಗುತ್ತಿಗೆ ಮೂಲಕ ಬಾಡಿಗೆ ಪಡೆಯಲು e- Procurement ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ: (1) ಸರ್ಕಾರದ ಆದೇಶ ಸಂಖ್ಯೆ:ಆಕುಕ 143 ಎಫ್‌ಆರ್‌ಸಿ 2022 ಬೆಂಗಳೂರು ದಿ:23.03.2023. (2) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು ರವರ ಸುತ್ತೋಲೆ ಪತ್ರ ಸಂಖ್ಯೆ:ಎಸ್‌ಹೆಚ್‌ಟಿಬಿ/ಹೆಚ್‌ಟಿಎಸ್/14/2013–14 ದಿನಾಂಕ:06.07.2016. (3) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 30 ಶಿವಾನಿ 2019, ಬೆಂಗಳೂರು, ದಿನಾಂಕ:31.03.2022

2023–24 ನೇ ಸಾಲಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಮಂಡ್ಯ ರವರ ಅಧೀನದಲ್ಲಿ ಬರುವ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಇಲಾಖಾ ಕಾರ್ಯಕ್ರಮಗಳ ಅನುಷ್ಠಾನಗೊಳಿಸಲು ಖಾಸಗಿ ವಾಹನಗಳನ್ನು ಹೊರಗುತ್ತಿಗೆ ಮೂಲಕ ಬಾಡಿಗೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000 ರ ಪ್ರಕಾರ E-Procurement ಮೂಲಕ ಎನ್.ಹೆಚ್.ಎಂ ಮಾರ್ಗಸೂಚಿಯಂತೆ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವಿಳಾಸ **http://eproc.karnataka.gov.in** ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಇ–ಪೋರ್ಟಲ್‌ನಲ್ಲಿ ಕಾಣಿಸಿದ ನಿಬಂಧನೆಗಳು, ಟೆಂಡರ್‌ನ ಇ.ಎಂ.ಡಿ ಮೊತ್ತ ಹಾಗೂ ಇತರೆ ವಿವರಗಳನ್ನು ಗಮನಿಸಿ ಕ್ರಮವಹಿಸುವುದು. ಟೆಂಡರ್ ದಿನಾಂಕಗಳ ವಿವರ ಈ ಕೆಳಕಂಡಂತೆ ಇರುತ್ತದೆ. ಮುಂದಿನ ಯಾವುದೇ ಬದಲಾವಣೆಗಳನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

(1) ಟೆಂಡರ್ ಪ್ರಕಟಣೆ ದಿನಾಂಕ : **ಸಂಖ್ಯೆ: ಸರಬ/01/2023–24 ದಿ:13.06.2023**. (2) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ : **14.06.2023**. (3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **21.06.2023 ರ ಸಂಜೆ 05:30 ಗಂಟೆ ಒಳಗೆ.** (4) ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ : **ಜಿಲ್ಲಾ ಆ.ಕು.ಕ ಅಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ** ದಿನಾಂಕ:**23.06.2023 ಬೆಳಿಗ್ಗೆ 11–00 ಗಂಟೆ ನಂತರ.** (5) ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ : ತಾಂತ್ರಿಕ ದಾಖಲಾತಿಗಳನ್ನು ತೆರೆದ ನಂತರದ ದಿನಗಳಲ್ಲಿ ತೆರೆಯಲಾಗುವುದು. (6) ಟೆಂಡರ್‌ನ ಒಟ್ಟು ಅಂದಾಜು ಮೊತ್ತ **ರೂ. 42,00,000/– (ನಲವತ್ತೆರಡು ಲಕ್ಷ ರೂಗಳು)**. (7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ : **ರೂ. 1,05,000/–**. (8) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಆವರಣ, ಮಂಡ್ಯ, ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: 08232–224027**

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,
ಮಂಡ್ಯ ಜಿಲ್ಲೆ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/59/2023–24

ನಕ್ಕರೆ ಅದೇ ಸ್ವರ್ಗ

ಮಾಸ್ಟರ್ : "ನೋಡಪ್ಪ ಯಾವಾಗಲೂ ಜೀವನದಲ್ಲಿ ಇನ್ನೊಬ್ಬರಿಗೆ ಸಹಾಯ ಮಾಡುವ ಗುಣವನ್ನು ಬೆಳೆಸಿಕೊಳ್ಳಬೇಕು"

ವಿದ್ಯಾರ್ಥಿ : "ಬಿಡಿ ಸಾರ್, ಪರೀಕ್ಷೆಯಲ್ಲಿ ನೀವು ಒಂದು ದಿನ ಆದರೂ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದೀರಾ?"

ಮೈಸೂರು ಮಿತ್ರ

ಶುಕ್ರವಾರ, 16 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಕಾರ್ಯ ಮಾಡುವಾಗ ದಕ್ಷನಾಗಿರು. ಮಾತನಾಡುವಾಗ ಎಚ್ಚರದಿಂದಿರು. ಯೋಚಿಸುವಾಗ ದೂರದೃಷ್ಟಿಯಿಂದಿರು – ಕಾರ್ಲ್‌ಮಾರ್ಕ್ಸ್.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾಲು ಕುಡಿದು ಹಾಗಲಕಾಯಿ ತಿಂದಂತೆ

ನಿಮ್ಮ ಪತ್ರಗಳು

ಮೈಸೂರಿನ ಆರಕ್ಷಕ ಆಯುಕ್ತರ ಗಮನಕ್ಕೆ

ಮಾನ್ಯರೇ,

ಮೈಸೂರಿನ ಅನೇಕ ರಸ್ತೆಗಳನ್ನು ಜನದಟ್ಟಣೆ ಮತ್ತು ಸುಗಮ ಸಂಚಾರದ ದೃಷ್ಟಿಯಿಂದ ಸಂಚಾರಿ ಆರಕ್ಷಕರು ಏಕಮುಖ ಸಂಚಾರ ಮಾಡಿರುವ ಕೆಲವು ರಸ್ತೆಗಳು ಈ ಕೆಳಕಂಡಂತವು. ದೇವರಾಜ ಅರಸು ರಸ್ತೆ, ಶಿವರಾಂಪೇಟೆ ರಸ್ತೆ, ಎರಡು ರಸ್ತೆಗೆ ಸಂಪರ್ಕಿಸುವ ಅಡ್ಡ ರಸ್ತೆಗಳನ್ನು, ಸಂತೆಪೇಟೆಯ ರಸ್ತೆಗಳು, ನಜರ್‌ಬಾದ್‌ನ ಕೆನರಾ ಬ್ಯಾಂಕಿನ (ಮದ್ವೇಶ ಕಾಂಪ್ಲೆಕ್ಸ್ ಮುಂಭಾಗದ ರಸ್ತೆ), ಗೋಪಾಲ್‌ಗೌಡ ಆಸ್ಪತ್ರೆಯಿಂದ ನಜರ್‌ಬಾದ್‌ನ ಮುಖ್ಯ ರಸ್ತೆ, ಅಶೋಕ ರಸ್ತೆ, ಗಾಂಧಿಚೌಕದಿಂದ ಅಶೋಕ ರಸ್ತೆಗೆ ಸಾಗುವ ಅಡ್ಡರಸ್ತೆ, ಮೈಸೂರಿನ ಬಹುತೇಕ ದ್ವಿಚಕ್ರ ವಾಹನ ಸವಾರರಿಗೂ ನಾಲ್ಕು ಚಕ್ರ ವಾಹನ ಸವಾರರಿಗೂ ತಿಳಿದಿರುವ ವಿಚಾರ.

ಆದರೆ ಕಳೆದ ಹಲವಾರು ತಿಂಗಳುಗಳಿಂದ ಈ ರಸ್ತೆಗಳಲ್ಲಿ ಹಾಡುಹಗಲೇ ಮತ್ತು ಸಂಜೆಯ ಸಮಯದಲ್ಲಿ ಅನೇಕ ದ್ವಿಚಕ್ರ ವಾಹನ ಸವಾರರು ಏಕಮುಖ ಸಂಚಾರ ರಸ್ತೆಗಳಲ್ಲಿ ತದ್ವಿರುದ್ಧವಾಗಿ ನಿರ್ಬಂಧಿಸಿದ ಕಡೆಯಿಂದ ವೇಗವಾಗಿಯೇ ಸಂಚರಿಸಿ ಕಾನೂನನ್ನು ಉಲ್ಲಂಘಿಸುತ್ತಿದ್ದಾರೆ. ಜೊತೆಯಲ್ಲಿ ಕ್ರಮಬದ್ಧವಾಗಿ ಸಂಚರಿಸುವ ದ್ವಿಚಕ್ರ ಮತ್ತು ನಾಲ್ಕು ಚಕ್ರ ವಾಹನ ಸವಾರರಿಗೆ ಅತ್ಯಂತ ಕಿರಿಕಿರಿ ಉಂಟು ಮಾಡುತ್ತಿದ್ದಾರೆ. ಇದು ಕೇವಲ ನನ್ನ ಅನುಭವವಲ್ಲ. ನನ್ನ ಅನೇಕ ವಕೀಲ ಮಿತ್ರರು ಹಾಗೂ ಕುಟುಂಬದ ಸದಸ್ಯರ ಅನುಭವವೂ ಆಗಿದೆ.

ಮುಂದುವರಿದಂತೆ ಮೈಸೂರಿನ ಮುಖ್ಯ ಅನೇಕ ರಸ್ತೆಗಳಲ್ಲಿ ತಮ್ಮ ಮನೆಗೆ, ಕಚೇರಿಗೆ ಮತ್ತು ಬೇರೆ ಬೇರೆ ಸಂದರ್ಭದಲ್ಲಿ ಚಲಿಸುವಾಗ ರಸ್ತೆಗಳಲ್ಲಿ ದ್ವಿಚಕ್ರ ವಾಹನ ಸವಾರರು ಕಾನೂನು ಬದ್ಧವಾಗಿ ತೆರಳದೆ, ತದ್ವಿರುದ್ಧದ ದಿಕ್ಕಿನಲ್ಲಿ ಸಂಚರಿಸಿ ಅನೇಕ ಸಂದರ್ಭಗಳಲ್ಲಿ ಅಪಘಾತಗಳನ್ನು ಉಂಟು ಮಾಡುತ್ತಿದ್ದಾರೆ.

ಮೈಸೂರಿನ ಬಹುತೇಕ ವೃತ್ತಗಳಲ್ಲಿ ಸಿಗ್ನಲ್ ಲೈಟ್ ಇರುವುದು, ಈ ಸಿಗ್ನಲ್ ಲೈಟ್‌ಗಳಲ್ಲಿ ಕೆಂಪು ಸಿಗ್ನಲ್ ಇದ್ದಾಗಲೂ ಸಹ ಅನೇಕ ದ್ವಿಚಕ್ರ ವಾಹನ ಸವಾರರು, ಸಿಗ್ನಲ್ ಉಲ್ಲಂಘಿಸಿ ಸಂಚರಿಸುವುದು ಸರ್ವೇ ಸಾಮಾನ್ಯವಾಗುತ್ತಿದೆ. ಅನೇಕ ಸಂದರ್ಭಗಳಲ್ಲಿ ಮೇಲ್ಕಂಡ ಮೂರು ಘಟನೆಗಳು ಸಂಚಾರಿ ಆರಕ್ಷಕರ ಹಾಗೂ ಹೋಂ ಗಾರ್ಡ್‌ಗಳ ಸಮ್ಮುಖದಲ್ಲೇ ನಡೆದರೂ ಯಾವುದೇ ಕ್ರಮ ಜರುಗಿಸುವುದಿಲ್ಲ.

ಈ ನಿಟ್ಟಿನಲ್ಲಿ ಆರಕ್ಷಕ ಆಯುಕ್ತರು, ಸಂಚಾರಿ ಪೊಲೀಸರಿಗೆ ಸೂಕ್ತ ನಿರ್ದೇಶನ ನೀಡಿ ಮೈಸೂರಿನಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ, ಕಾನೂನು ಉಲ್ಲಂಘಿಸಿ ಸಂಚರಿಸುವ ದ್ವಿಚಕ್ರ ವಾಹನಗಳ ಸವಾರರ ಮೇಲೆ ಕ್ರಮ ಕೈಗೊಳ್ಳಬೇಕಾಗಿ ವಿನಂತಿ.

–ಗೋಕುಲ್ ಗೋವರ್ಧನ್.ಕೆ ವಕೀಲರು, ಮೈಸೂರು

ಕಾಂಗ್ರೆಸ್ ಗ್ಯಾರಂಟಿಗಳು ಪುರುಷರಿಗೂ ಸಿಗಲಿ

ಮಾನ್ಯರೆ,

ಮಹಿಳಾ ಮತದಾರರನ್ನು ಗುರಿಯಾಗಿಟ್ಟು ಕೊಂಡು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಮಹಿಳೆಯರಿಗೆ ಮಾತ್ರ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣದ "ಸ್ತ್ರೀ ಶಕ್ತಿ ಯೋಜನೆ" ಮಹಿಳೆಯರು ಆರ್ಥಿಕ ಸ್ವಾವಲಂಬಿಗಳಾಗಲು ನೆರವಾಗ ಬಹುದು. ಇನ್ನು ಮನೆಯೊಡತಿಗೆ ತಿಂಗಳಿಗೆ ಎರಡು ಸಾವಿರ ನೀಡುವ ಗ್ಯಾರಂಟಿಯು ಆದಷ್ಟು ಬೇಗ ಜಾರಿಗೆ ಬರಲಿ. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಬರೀ ಮಹಿಳಾ ಮತದಾರರು ಮಾತ್ರ ಕಾರಣವೇ, ಪುರುಷ ಮತದಾರರು ಕಾಂಗ್ರೆಸ್‌ಗೆ ಮತ ಹಾಕಿಲ್ಲವೇ? ಸರ್ಕಾರಿ ಬಸ್ಸುಗಳ ಉಚಿತ ಪ್ರಯಾಣವನ್ನು ಪುರುಷ ಪ್ರಯಾಣಿಕರಿಗೂ ವಿಸ್ತರಿಸಿ. ಹಾಗೆಯೇ ಪ್ರತಿ ಮನೆ ಯಜಮಾನನಿಗೂ ಪ್ರತಿ ತಿಂಗಳು ಎರಡು ಸಾವಿರ ರೂಪಾಯಿಗಳನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ವಿರೋಧ ಪಕ್ಷ ನಾಯಕನ ಆಯ್ಕೆ ಬೇಗ ಆಗಲಿ

ಮಾನ್ಯರೆ,

ರಾಜ್ಯ ವಿಧಾನಸಭಾ ಚುನಾವಣಾ ಫಲಿತಾಂಶ ಘೋಷಣೆಯಾಗಿ 1 ತಿಂಗಳಾದರೂ ಸಹ, ರಾಜ್ಯ ವಿಧಾನಸಭೆಯಲ್ಲಿ ಅಧಿಕೃತ ವಿರೋಧ ಪಕ್ಷವಾದ ಭಾರತೀಯ ಜನತಾ ಪಕ್ಷ ತನ್ನ ನಾಯಕನನ್ನು ಆಯ್ಕೆ ಮಾಡದಿರುವುದು ವಿಪರ್ಯಾಸವೇ ಸರಿ. ವಿಧಾನಸಭೆಯಲ್ಲಿ 65 ಸದಸ್ಯರನ್ನು ಹೊಂದಿರುವ ಬಿಜೆಪಿ ತನ್ನ ನಾಯಕನನ್ನು ಆರಿಸಲು ಏಕೆ ಮೀನಾಮೇಷ ಎಣಿಸುತ್ತಿದೆ?

ಬಹುಶಃ ಈ ಹುದ್ದೆಗೆ ಆ ಪಕ್ಷದಲ್ಲಿ ಪ್ರಬಲ ಪೈಪೋಟಿ ಇರಬಹುದು. ಸದ್ಯದ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ನೆಲ ಕಚ್ಚಿರುವ ಪಕ್ಷವನ್ನು ಮೇಲೆತ್ತಲು ಓರ್ವ ವರ್ಚಸ್ಸುಳ್ಳ ನಾಯಕನ ಅಗತ್ಯವಿದೆ. ಆರ್.ಅಶೋಕ್, ಯತ್ನಾಳ್, ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವರು ಈ ಹುದ್ದೆಗಾಗಿ ಪೈಪೋಟಿ ನಡೆಸಿರಬಹುದು. ಹೀಗಾಗಿ ಆಯ್ಕೆ ವಿಳಂಬವಾಗುತ್ತಿರಬಹುದು. ಸದ್ಯದಲ್ಲೇ ಬಜೆಟ್ ಅಧಿವೇಶನ ಪ್ರಾರಂಭವಾಗುವುದರಿಂದ, ಆ ಹೊತ್ತಿಗಾದರೂ ವಿರೋಧ ಪಕ್ಷದ ನಾಯಕನ ಆಯ್ಕೆ ಸಾಧ್ಯವಾಗುತ್ತದೆ ಎಂದು ನಂಬೋಣ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷಗಳಿಗೆ ಮಹತ್ವದ ಸ್ಥಾನವಿದೆ. ವಿರೋಧ ಪಕ್ಷದ ನಾಯಕನನ್ನು ಛಾಯಾ ಮುಖ್ಯಮಂತ್ರಿ ಎಂದು ಕರೆಯಲಾಗುತ್ತದೆ. ರಾಜ್ಯ ಸರ್ಕಾರದ ವೈಫಲ್ಯಗಳನ್ನು ಅನಾವರಣಗೊಳಿಸಿ, ಜನಪರ ಆಡಳಿತ ನೀಡುವಂತೆ ಸರ್ಕಾರದ ಮೇಲೆ ಒತ್ತಡ ತರುವುದು, ಅದಕ್ಕಾಗಿ ಶಾಸನ ಸಭೆಗಳ ಒಳಗೆ ಹಾಗೂ ಹೊರಗೆ ಕಾರ್ಯತಂತ್ರ ರೂಪಿಸುವುದು, ರಾಜ್ಯದ ನೆಲ, ಜಲ, ಗಡಿ, ಮುಂತಾದ ವಿಷಯಗಳಲ್ಲಿ ರಾಜ್ಯ ಸರ್ಕಾರದ ಒತ್ತಾಸೆಗೆ ಧಾವಿಸುವುದು, ರಾಷ್ಟ್ರೀಯ ವಿಪತ್ತುಗಳಲ್ಲಿ ಓರ್ವ ಜವಾಬ್ದಾರಿಯುತ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸುವುದು, ರಾಜ್ಯ ಸರ್ಕಾರ ಕೈಗೊಳ್ಳುವ ಜನಹಿತ ಕಾರ್ಯಕ್ರಮಗಳನ್ನು ಬೆಂಬಲಿಸುವುದು, ಇವೇ ಮುಂತಾದವು ವಿರೋಧ ಪಕ್ಷದ ನಾಯಕನ ಕೆಲಸವಾಗಿದೆ. ಬಿಜೆಪಿ ಇನ್ನಾದರೂ ತಡ ಮಾಡದೇ ತನ್ನ ನಾಯಕನನ್ನು ಆರಿಸಿ, ತನ್ನ ಜವಾಬ್ದಾರಿಯನ್ನು ನಿರ್ವಹಿಸಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಬಸ್ಸುಗಳ ಸಂಖ್ಯೆ ಹೆಚ್ಚಾಗಲಿ

ಮಾನ್ಯರೆ,

ರಾಜ್ಯ ಸರ್ಕಾರವು ಶಕ್ತಿ ಯೋಜನೆಗೆ ಚಾಲನೆ ನೀಡಿ ಸರಕಾರಿ ಬಸ್ಸುಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಆದರೆ ಸೋಮನಾಥನಗರದ ಮಹಿಳೆಯರು ಈ ಅವಕಾಶದಿಂದ ವಂಚಿತರಾಗಿದ್ದಾರೆ. ಬಸ್ಸುಗಳ ಸಂಖ್ಯೆ ಕಡಿಮೆ ಇದ್ದು ಹೆಚ್ಚುವರಿ ಬಸ್‌ಗಳು ಬರುವಂತಾಗಲಿ. 65 ಮತ್ತು 69ಎ ಈ ನಂಬರಿನ ಎರಡು ಬಸ್‌ಗಳು ಗಂಟೆಗೆ ಒಂದು ಸಾರಿ ಬರುತ್ತಿವೆ. ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಸ್‌ಗಳು ಬಂದರೆ ಮಹಿಳೆಯರಲ್ಲದೆ ವಿದ್ಯಾರ್ಥಿಗಳು ಮತ್ತು ಕಾರ್ಮಿಕರಿಗೂ ಅನುಕೂಲವಾಗುತ್ತದೆ. ಮಹಾಮನೆ ಸರ್ಕಲ್ ಮತ್ತು ನೇತಾಜಿ ಸರ್ಕಲ್‌ಗೆ ಬರುವ ಬಸ್ಸುಗಳು ಸೋಮನಾಥನಗರಕ್ಕೂ ಬಂದು ವಾಪಸ್ ಆಗಲಿ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು, ಶಾಸಕರು ಈ ಸಮಸ್ಯೆಯನ್ನು ಗಂಭೀರವಾಗಿ ತೆಗೆದುಕೊಂಡು ಪರಿಹರಿಸಲಿ. ಹೆಚ್ಚಿನ ಬಸ್‌ಗಳು ಬರುವಂತಾಗಲಿ.

–ರೂಪ ಎಂ., ಸೋಮನಾಥನಗರ, ದಟ್ಟಗಳ್ಳಿ, ಮೈಸೂರು.



ಕಾರ್ಕಳ ಆನಂದ ಭಟ್

ಮೊ : 7676554198

ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್, ಪೆರ್ವಾಜೆ ರಸ್ತೆ, ಕಾರ್ಕಳ, – 574 104 ಉಡುಪಿ ಜಿಲ್ಲೆ

ದಿಕ್ಕುದೆಸೆ

ಗ್ರಾಮೀಣ ಜನತೆಗೆ ಶುದ್ಧ ಕುಡಿಯುವ ನೀರು ಪೂರೈಸುವ ಕೇಂದ್ರದ ಬದ್ಧತೆ


ದೇಶಕ್ಕೆ ಸ್ವಾತಂತ್ರ್ಯ ದೊರೆತ 70 ವರ್ಷಗಳ ನಂತರವೂ ದೇಶದ ಸುಮಾರು ಶೇ.50ರಷ್ಟು ಜನರಿಗೆ ಶುದ್ಧ ಜಲ ನೀಡುವಲ್ಲಿ ಸರಕಾರಗಳು ವಿಫಲವಾಗಿವೆ. ಇದುವರೆಗೆ ಆಳಿದ ಕೇಂದ್ರ, ರಾಜ್ಯ ಸರಕಾರಗಳು ಜನರಿಗೆ ಶುದ್ಧ ನೀರು ಒದಗಿಸಲು ಯೋಜನೆಗಳನ್ನು ರೂಪಿಸಿದರೂ ಅನುಷ್ಠಾನ ಹಂತಗಳಲ್ಲಾದ ವೈಫಲ್ಯಗಳಿಂದ ವಾಸ್ತವಿಕ ಪರಿಸ್ಥಿತಿ ನಿರಾಶಾದಾಯಕವಾಗಿತ್ತು. ದೇಶದ ಜನತೆ ಶುದ್ಧ ನೀರಿಗಾಗಿ ಪರಿತಪಿಸುತ್ತಿದ್ದ ಪರಿಸ್ಥಿತಿಯನ್ನು ಪರಿಹರಿಸಲು ಪ್ರಧಾನಿ ಮೋದಿಯವರು ದೆಹಲಿಯ ಕೇಂದ್ರ ಕೆಂಪು ಕೋಟೆಯಿಂದ ಜಲ ಜೀವನ್ ಮಿಷನ್‌ನ ಘೋಷಣೆ ಮಾಡಿದರು.

ಭೂಮಿಯಲ್ಲಿ ನೀರು ಅತ್ಯಮೂಲ್ಯ ಪ್ರಾಕೃತಿಕ ಸಂಪನ್ಮೂಲವಾಗಿದೆ. ಜಗತ್ತಿನ ಸಕಲ ಜೀವಿಗಳ ಬದುಕಿಗೆ ನೀರು ಆಧಾರವಾಗಿದೆ. ವಿಶ್ವ ಆರೋಗ್ಯ ಸಂಘಟನೆ (WHO) ನೀಡಿದ ಮಾಹಿತಿಯಂತೆ ಜಗತ್ತಿನಲ್ಲಿ 2 ಬಿಲಿಯನ್ ಜನರಿಗೆ ಶುದ್ಧ ಕುಡಿಯುವ ನೀರು ಲಭ್ಯವಿಲ್ಲ ಹಾಗೂ 4 ಬಿಲಿಯನ್ ಜನರು ಕನಿಷ್ಠ ಸ್ವಾಸ್ಥ್ಯ ಸಂಬಂಧಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಪ್ರತಿ ವರ್ಷ ಪ್ರಪಂಚದಲ್ಲಿ 1.5 ಮಿಲಿಯನ್ ಜನರು ಜಲ ಸಂಬಂಧಿ ಕಾಯಿಲೆಗಳಿಂದ ಸಾಯುತ್ತಿದ್ದಾರೆ. ಇವರಲ್ಲಿ 5 ವರ್ಷಕ್ಕಿಂತ ಕೆಳಗಿನ ವಯಸ್ಸಿನ ಮಕ್ಕಳು ಅತೀ ಹೆಚ್ಚು ಸಂಖ್ಯೆಯಲ್ಲಿದ್ದಾರೆ.

ದೇಶದ ನೀತಿ ಆಯೋಗದ 2018ರ ವರದಿಯಂತೆ ದೇಶದ 600 ಮಿಲಿಯನ್ ಜನರು ತೀವ್ರ ನೀರಿನ ಅಭಾವ ಎದುರಿಸುತ್ತಿದ್ದು, ಪ್ರತಿ ವರ್ಷ ಅಶುದ್ಧ ನೀರು ಸೇವನೆಯಿಂದ ಎರಡು ಲಕ್ಷ ಜನರು ಮೃತರಾಗುತ್ತಿದ್ದಾರೆ. 2030ರ ವೇಳೆಗೆ ದೇಶದಲ್ಲಿ ನೀರಿನ ಬೇಡಿಕೆಯು ಈಗ ಇರುವುದಕ್ಕಿಂತ ಎರಡು ಪಟ್ಟಾಗಲಿದ್ದು, ಕೋಟ್ಯಾಂತರ ಜನರು ಶುದ್ಧ ಜಲದ ತೀವ್ರ ಅಭಾವ ಎದುರಿಸಲಿದ್ದಾರೆ. ಇದರಿಂದ ದೇಶದ ಜಿ.ಡಿ.ಪಿ.ಗೆ ಶೇ.6ರಷ್ಟು ನಷ್ಟವಾಗಲಿದೆ ಎಂದು ಅಂದಾಜು ಮಾಡಲಾಗಿದೆ. ದೇಶದ ಶೇ.70ರಷ್ಟು ನೀರು ಮಲಿನಗೊಂಡಿದ್ದು, ಗ್ರಾಮೀಣ ಪ್ರದೇಶದ ಶೇ.84ರಷ್ಟು ಗೃಹ ಬಳಕೆದಾರರಿಗೆ ಶುದ್ಧ ನೀರು ದೊರೆಯುತ್ತಿಲ್ಲ. ಕೇಂದ್ರ ಸರಕಾರದ ಜಲ ಜೀವನ್ ಮಿಷನ್ 2024ರ ಒಳಗೆ ಗ್ರಾಮೀಣ ಪ್ರದೇಶದ ಪ್ರತಿ ವ್ಯಕ್ತಿಗೆ ಪ್ರತಿ ದಿನ 55 ಲೀಟರ್ ಶುದ್ಧ ಕುಡಿಯುವ ನೀರನ್ನು ನಲ್ಲಿ ಮೂಲಕ ನೀಡುವ ಮಹತ್ವಾಕಾಂಕ್ಷಿ ಯೋಜನೆಗೆ ಚಾಲನೆ ನೀಡಿದೆ.

ಹರ್ ಘರ್ ನಲ್ ಸೆ ಜಲ್
(ಪ್ರತಿ ಮನೆಗೆ ನಲ್ಲಿಯಿಂದ ನೀರು)

ಕೇಂದ್ರ ಸರಕಾರವು 2019ರಲ್ಲಿ ಹರ್ ಘರ್ ನಲ್ ಸೆ ಜಲ್ ಯೋಜನೆಯನ್ನು ಘೋಷಿಸಿತು. ಕೇಂದ್ರ ಜಲ ಶಕ್ತಿ ಸಚಿವಾಲಯದ ಈ ಯೋಜನೆಯನ್ವಯ 2024ರ ಒಳಗೆ ದೇಶದ ಗ್ರಾಮೀಣ ಜನತೆಗೆ ನಲ್ಲಿ ಮೂಲಕ ಶುದ್ಧ ಕುಡಿವ ನೀರನ್ನು ನೀಡಲಾಗುವುದು. ಇದು ಸರಕಾರದ ಜಲ ಜೀವನ್ ಮಿಷನ್‌ನ ಭಾಗವಾಗಿದೆ. ಗ್ರಾಮೀಣ ಜನರಿಗೆ ಇದೊಂದು ವಿಶಿಷ್ಟ ವಿನೂತನ ಮಾದರಿಯ ಯೋಜನೆಯಾಗಿದ್ದು, ಈ ಪ್ರಕಾರ ಗ್ರಾಮಸ್ಥರು ಬಳಸಿದ ನೀರಿಗೆ ಪಾವತಿಸಬೇಕಾದ ಶುಲ್ಕವನ್ನು ಸ್ಥಾನೀಯ ಜಲ ಸಮಿತಿಗಳು ನಿರ್ಧರಿಸುತ್ತವೆ.



ಜಲ ಸಮಿತಿಗಳು ನಿಗದಿಪಡಿಸುವ ಶುಲ್ಕವು ಪ್ರತಿ ವ್ಯಕ್ತಿಯಿಂದ ವ್ಯಕ್ತಿಗೆ, ಮನೆಯಿಂದ ಮನೆಗೆ ಭಿನ್ನವಾಗಿರುತ್ತದೆ. ಆರ್ಥಿಕವಾಗಿ ಅನುಕೂಲವಿರುವ, ಹೆಚ್ಚು ಜನರಿರುವ ಮನೆಗಳು ಹೆಚ್ಚು ಶುಲ್ಕ ಪಾವತಿಸಿದರೆ, ಬಡ ಬಳಕೆದಾರರು, ನಿಶ್ಚಿತ ಆದಾಯವಿಲ್ಲದವರಿಗೆ ಕಡಿಮೆ ದರ ನೀಡಿ ನೀರನ್ನು ಉಪಯೋಗಿಸುವ ಅವಕಾಶವಿದೆ.

ಈ ಯೋಜನೆಯು ದೇಶದ ಜನರ ಆರೋಗ್ಯದ ಮೇಲೆ ಉತ್ತಮ ಪರಿಣಾಮ ಬೀರಿ ಸಾಮಾಜಿಕ, ಆರ್ಥಿಕ ಸ್ಥಿತಿಯೂ ಸುಧಾರಿಸಲಿದೆ. ಶುದ್ಧ ನೀರು, ಜಲ ಸಂಬಂಧಿ ಕಾಯಿಲೆಗಳಿಂದ ಜನರನ್ನು ರಕ್ಷಿಸುತ್ತದೆ. ಜನರು ಆರೋಗ್ಯವಂತರಾಗಿ ಹೆಚ್ಚು ಸಮಯ ಲಾಭದಾಯಕ ಜೀವನೋಪಾಯದ ಚಟುವಟಿಕೆಗಳತ್ತ ಗಮನಹರಿಸಬಹುದು. ವ್ಯವಸಾಯದ ಮೇಲೆ ಹೆಚ್ಚು ಗಮನ ಹರಿಸಿ ತಮ್ಮ ಆರ್ಥಿಕ ಸ್ಥಿತಿ ಸುಧಾರಿಸಬಹುದು. ಇದು ಉತ್ಪಾದಕತೆ ಹೆಚ್ಚಿಸಿ ದೇಶದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಲಿದೆ. ಶುದ್ಧ ನೀರಿಗಾಗಿ ಪ್ರತಿ ದಿನ ಹತ್ತಾರು ಕಿ.ಮೀ. ನಡೆದಾಡುತ್ತಿದ್ದ ಮಹಿಳೆಯರಿಗೆ ಸಮಯದ ಉಳಿತಾಯವಾಗಲಿದೆ. ನಲ್ಲಿ ನೀರು ಪೂರೈಕೆಯು ಸ್ಥಾನೀಯ ಅಂತರ್ಜಲ ಉಳಿಸುವಲ್ಲಿ ಪರಿಣಾಮಕಾರಿಯಾಗಿ ಪ್ರಾಕೃತಿಕ ಸುಸ್ಥಿರತೆ ಕಾಪಾಡಲಿದೆ.

ಯೋಜನೆಗೆ ಎದುರಾಗಿರುವ ಸವಾಲುಗಳು: ನಲ್ ಸೆ ಜಲ್ ಯೋಜನೆ ಉತ್ತಮವಾಗಿದ್ದರೂ ಅನುಷ್ಠಾನದಲ್ಲಿ ಅನೇಕ ಸವಾಲುಗಳು ಎದುರಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ನಲ್ಲಿಗಳನ್ನು ಅಳವಡಿಸಲು ಮೂಲಭೂತ ಸೌಕರ್ಯದ ಕೊರತೆ ಭಾರೀ ಪ್ರಮಾಣದಲ್ಲಿದೆ. ಪಂಪ್ ಸೆಟ್‌ಗಳು, ಜಲ ಸಂಗ್ರಹಣಾಗಾರಗಳು, ಶುದ್ಧೀಕರಣ ಘಟಕಗಳು, ನಲ್ಲಿಗಳಿಗೆ ಭಾರೀ ಪ್ರಮಾಣದ ಹೂಡಿಕೆಯ ಅವಶ್ಯಕತೆ ಇದೆ. ಇದಕ್ಕಾಗಿ ಸರಕಾರವು ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕಾಗಿದೆ. ಇವುಗಳ ಹೊರತಾಗಿ ಈ ಯೋಜನೆಗಳ ಸಮರ್ಪಕ ಅನುಷ್ಠಾನವು ರಾಜಕೀಯ ಇಚ್ಛಾಶಕ್ತಿಯನ್ನು ಅವಲಂಬಿಸಿದೆ. ಯೋಜನೆಯ ಯಶಸ್ಸು ಜಲ ಬಳಕೆಗೆ ಸಂಬಂಧಿಸಿದಂತೆ ಬದಲಾಗುತ್ತಿರುವ ಜನರ ಸ್ವಭಾವ ಮತ್ತು ನೈರ್ಮಲ್ಯಕ್ಕೆ ಸಂಬಂಧಿತ ನಡವಳಿಕೆಯಲ್ಲಿ ಅಂತರ್ಗತವಾಗಿದೆ. ರಾಜ್ಯಗಳ ನಡುವಿನ ನದಿ ನೀರಿನ ಹಂಚಿಕೆ ವಿವಾದಗಳು ಯೋಜನೆಯ ಅನುಷ್ಠಾನಕ್ಕೆ ತಡೆಯಾಗಬಹುದು. ಹವಾಮಾನ ಬದಲಾವಣೆಯು ಜಲ ಸಂಪನ್ಮೂಲಗಳ ಲಭ್ಯತೆ, ಯೋಜನೆಗಳ ಸುಸ್ಥಿರ ಅನುಷ್ಠಾನ ಮತ್ತು ಮುಂದುವರಿಕೆ ಮೇಲೆ ಪ್ರಭಾವ ಬೀರಬಹುದು. ಜೆ.ಜೆ.ಎಂ. ನೀರಿನ ಮಹತ್ವ ಮತ್ತು ರಕ್ಷಣೆ ಬಗ್ಗೆ ಜನಜಾಗೃತಿ ಉಂಟು ಮಾಡುವ ಆಂದೋಲನವಾಗಬೇಕೆಂಬ ಉದ್ದೇಶ ಹೊಂದಿದೆ.

ದೇಶಕ್ಕೆ ಸ್ವಾತಂತ್ರ್ಯ ದೊರೆತ 70 ವರ್ಷಗಳ ನಂತರವೂ ದೇಶದ ಸುಮಾರು ಶೇ.50ರಷ್ಟು ಜನರಿಗೆ ಶುದ್ಧ ಜಲ ನೀಡುವಲ್ಲಿ ಸರಕಾರಗಳು ವಿಫಲವಾಗಿವೆ. ಇದುವರೆಗೆ ಆಳಿದ ಕೇಂದ್ರ, ರಾಜ್ಯ ಸರಕಾರಗಳು ಜನರಿಗೆ ಶುದ್ಧ ನೀರು ಒದಗಿಸಲು ಯೋಜನೆಗಳನ್ನು ರೂಪಿಸಿದರೂ ಅನುಷ್ಠಾನ ಹಂತಗಳಲ್ಲಾದ ವೈಫಲ್ಯಗಳಿಂದ ವಾಸ್ತವಿಕ ಪರಿಸ್ಥಿತಿ ನಿರಾಶಾದಾಯಕವಾಗಿತ್ತು. ದೇಶದ ಜನತೆ ಶುದ್ಧ ನೀರಿಗಾಗಿ ಪರಿತಪಿಸುತ್ತಿದ್ದ ಪರಿಸ್ಥಿತಿಯನ್ನು ಪರಿಹರಿಸಲು ಪ್ರಧಾನಿ ಮೋದಿಯವರು ದೆಹಲಿಯ ಕೇಂದ್ರ ಕೆಂಪು ಕೋಟೆಯಿಂದ ಜಲ ಜೀವನ್ ಮಿಷನ್‌ನ ಘೋಷಣೆ ಮಾಡಿದರು. ಕೇಂದ್ರ, ರಾಜ್ಯ ಪಾಲುದಾರಿಕೆಯಲ್ಲಿ ಯೋಜನಾನುಷ್ಠಾನಕ್ಕೆ ನಿರ್ಧರಿಸಲಾಯಿತು. 2024ರ ಅಂತ್ಯದ ವೇಳೆಗೆ ದೇಶದ ಜನತೆಗೆ ಉತ್ತಮ ಗುಣಮಟ್ಟದ ನೀರನ್ನು ನಿರಂತರವಾಗಿ ನೀಡುವ ಯೋಜನೆ ರೂಪಿಸಲಾಯಿತು. ಹರ್ ಘರ್ ನಲ್ ಸೆ ಜಲ್ ಯೋಜನೆಗಾಗಿ ಜಲ್ ಜೀವನ್ ಮಿಷನ್‌ಗೆ ಕೇಂದ್ರ ಸರಕಾರವು 3.6 ಲಕ್ಷ ಕೋಟಿ ರೂ.ವನ್ನು ನೀಡಿತು. ಈ ಯೋಜನೆಯಲ್ಲಿ ಮಳೆ ನೀರ ಕೊಯ್ಲು ಜಲ ಸಂರಕ್ಷಣೆ, ನೀರಿನ ಪುನರ್ ಬಳಕೆ, ಜಲ ಮೂಲಗಳ ಅಭಿವೃದ್ಧಿ ಮತ್ತು ರಕ್ಷಣೆ, ಗಿಡ ನೆಡುವಿಕೆ ಜತೆಗೆ ಪಾರಂಪರಿಕ ಮತ್ತು ಇತರ ಜಲ ಮೂಲಗಳ ರಕ್ಷಣೆ ಮಾಡಲಾಗುವುದು.

ಯೋಜನಾ ವೆಚ್ಚದ ಹಂಚಿಕೆ: ಯೋಜನಾ ವೆಚ್ಚದ ಪಾಲುದಾರಿಕೆ ಬಗ್ಗೆ ಕೇಂದ್ರ ಸರಕಾರವು ಸೂಕ್ತ ನೀತಿಯನ್ನು ರೂಪಿಸಿದೆ. ಹಿಮಾಲಯನ್ ಮತ್ತು ಪೂರ್ವೋತ್ತರ ರಾಜ್ಯಗಳಲ್ಲಿನ ಯೋಜನಾ ವೆಚ್ಚವನ್ನು 90:10ರ ಅನುಪಾತದಲ್ಲಿ ಅಂದರೆ ಕೇಂದ್ರವು ಒಟ್ಟು ವೆಚ್ಚದ ಶೇ.90ರಷ್ಟು ಭರಿಸಲಿದೆ. ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೇಂದ್ರವೇ ಸಂಪೂರ್ಣ ವೆಚ್ಚ ಮಾಡಲಿದೆ. ಇತರ ರಾಜ್ಯಗಳಲ್ಲಿ ಕೇಂದ್ರ, ರಾಜ್ಯಗಳು 50:50ರ ಅನುಪಾತದಲ್ಲಿ ಖರ್ಚು ಮಾಡಲಿವೆ.

ನಲ್ ಸೆ ಜಲ್ ಯೋಜನೆಯ ಪ್ರಗತಿ: ದೇಶದ ಗ್ರಾಮೀಣ ಪ್ರದೇಶಗಳಲ್ಲಿರುವ 18–93 ಕೋಟಿ ಪರಿವಾರಗಳಲ್ಲಿ 2019ರ ವೇಳೆಗೆ 3.24 ಕೋಟಿ (ಶೇ.17.1) ಪರಿವಾರಗಳಿಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸಲಾಗಿತ್ತು. 2019 ರಲ್ಲಿ ಆರಂಭವಾದ ಹರ್ ಘರ್ ನಲ್ ಸೆ ಜಲ್ ಯೋಜನೆಯನ್ವಯ ಇದುವರೆಗೆ 5.38 ಕೋಟಿ (ಶೇ.28) ಗ್ರಾಮೀಣ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ನೀಡಲಾಗಿದೆ. ಪ್ರಸ್ತುತ ದೇಶದಲ್ಲಿ 8.62 ಕೋಟಿ (ಶೇ.44.84) ಮನೆಗಳು ನಲ್ಲಿ ಮೂಲಕ ಶುದ್ಧ ನೀರು ಪಡೆಯುತ್ತಿವೆ. ತೆಲಂಗಾಣ, ಗೋವಾ, ಅಂಡಮಾನ್–ನಿಕೋಬಾರ್ ದ್ವೀಪಗಳು, ಪಾಂಡಿಚೇರಿಯ ಸರಕಾರಗಳು ಈ ಯೋಜನೆಯಲ್ಲಿ ಶೇ.100ರಷ್ಟು ಯಶಸ್ವಿಯಾಗಿರುವುದು ಗಮನಾರ್ಹವಾಗಿದೆ. ಜಲ್ ಜೀವನ್ ಮಿಷನ್ ಯೋಜನೆಯು ದೇಶದ ಗ್ರಾಮೀಣ ಪ್ರದೇಶದ ಸಾಮಾಜಿಕ, ಆರ್ಥಿಕ ಜೀವನದ ಮೇಲೆ ಧನಾತ್ಮಕ ಪರಿಣಾಮ ಬೀರುವ ಮೂಲಕ ಜಾಗತಿಕ ಮಟ್ಟದಲ್ಲಿ ಶುದ್ಧ ಜಲ ಮತ್ತು ನೈರ್ಮಲ್ಯ ಸಾಧಿಸುವ ವೈಶ್ವಿಕ ಗುರಿಗೆ ಮಹತ್ವದ ಕೊಡುಗೆ ನೀಡಲಿದೆ.

ಕೈಗಾರಿಕೆಗಳ ವಿದ್ಯುತ್ ದರ ಭಾರ ತಾತ್ಕಾಲಿಕ

- ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ ಭರವಸೆ
- ಬಿಲ್ ಪಾವತಿಗೆ ಹೆಚ್ಚಿನ ಅವಕಾಶ ನೀಡುವ ಸಾಧ್ಯತೆಗಳ ಪರಿಶೀಲನೆ
- ಮೈಸೂರು ಕೈಗಾರಿಕೆಗಳ ಸಂಘದ ಪದಾಧಿಕಾರಿಗಳೊಂದಿಗೆ ವಿದ್ಯುತ್ ಏರಿಕೆ ಸಂಬಂಧ ಸಮಾಲೋಚನೆ

ಮೈಸೂರು, ಜೂ.15(ಎಂಕೆ)– ಕಾನೂನಾತ್ಮಕವಾಗಿ ವಿದ್ಯುತ್ ದರ ಹೆಚ್ಚಳ ಮಾಡಿದ್ದು, ಮುಂದಿನ ತಿಂಗಳಿಂದ ಇಷ್ಟು ಹೊರೆಯಾಗುವುದಿಲ್ಲ. ಪರಿಸ್ಥಿತಿ ಅರಿತು ತಿಂಗಳ ಕಡೆಯವರೆಗೂ ಬಿಲ್ ಪಾವತಿಗೆ ಅವಕಾಶ ನೀಡಲು ಪ್ರಯತ್ನಿಸಲಾಗುವುದು ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚೆಸ್ಕಾಂ)ದ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ ಹೇಳಿದರು.

ಮೈಸೂರಿನ ವಿಜಯನಗರದಲ್ಲಿರುವ ಚೆಸ್ಕಾಂ ಕಚೇರಿಯಲ್ಲಿ ಗುರುವಾರ ಮೈಸೂರು ಕೈಗಾರಿಕೆಗಳ ಸಂಘ (ಮೈಸೂರು ಇಂಡಸ್ಟ್ರೀಸ್ ಅಸೋಸಿಯೇಷನ್)ದ ಪದಾಧಿಕಾರಿಗಳು ಹಾಗೂ ಕೈಗಾರಿಕೋದ್ಯಮಿಗಳೊಂದಿಗೆ ವಿದ್ಯುತ್ ದರ ಏರಿಕೆ ಸಂಬಂಧ ನಡೆದ ಸಭೆಯಲ್ಲಿ ಮಾತನಾಡಿದ ಅವರು, ವಿದ್ಯುತ್ ದರ ಏರಿಕೆಯಿಂದ ಕೈಗಾರಿಕೋದ್ಯಮಿಗಳಿಗೆ ಹೊರೆಯಾಗಿದ್ದು, ಈ ಹೊರೆ ಈ ತಿಂಗಳಿಗಷ್ಟೇ. ಮುಂದಿನ ತಿಂಗಳಿಂದ ವಿದ್ಯುತ್ ದರ ಕಡಿಮೆಯಾಗಲಿದ್ದು, ಕೈಗಾರಿಕೋದ್ಯಮಿಗಳು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ವಿದ್ಯುತ್ ಉತ್ಪಾದನೆಗೆ ಬಳಸುವ ಕಲ್ಲಿದ್ದಲು ಮತ್ತು ಡೀಸೆಲ್ ದರದಲ್ಲಿ ವ್ಯತ್ಯಾಸವಾಗುವ ಶುಲ್ಕವನ್ನು ಫ್ಯೂಯಲ್ ಅಂಡ್ ಪವರ್ ಪರ್ಚೇಸ್ ಅಡ್ಜೆಸ್ಟ್‌ಮೆಂಟ್ ಚಾರ್ಜಸ್(ಎಫ್‌ಪಿಪಿಎಸಿ) ಎಂದು ಸಂಗ್ರಹಿಸಲಾಗುತ್ತಿದೆ. ಈ ಚಾರ್ಜ್‌ನ್ನು ಪ್ರತಿ ಯೂನಿಟ್‌ಗೆ 0.53 ಪೈಸೆಯಂತೆ ಸಂಗ್ರಹಿಸುತ್ತಿದ್ದೆವು. ಆದರೆ ಎಫ್‌ಪಿಪಿಸಿಎ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಜಾಸ್ತಿಯಾಗಿದ್ದು, ಜೂನ್ ತಿಂಗಳ ಬಿಲ್‌ನಲ್ಲಿ ಅದು 2.42 ರೂ.ನಂತೆ ನಮೂದಾಗಿದೆ ಎಂದು ತಿಳಿಸಿದರು.

ಕೋರ್ಟ್ ಮೊರೆ ಹೋಗಲು ಚಿಂತನೆ: ವಿದ್ಯುತ್ ದರ ಏರಿಕೆ ವಿರುದ್ಧ ಕೋರ್ಟ್ ಮೊರೆ ಹೋದರೆ ಬಿಲ್ ಪಾವತಿಗೆ ತಡೆ ಬೀಳುವ ಸಾಧ್ಯತೆ ಇದೆ. ಆದ್ದರಿಂದ ಮೈಸೂರು ಕೈಗಾರಿಕೆಗಳ ಸಂಘದ ಅಧ್ಯಕ್ಷ ಹಾಗೂ ಮಾಜಿ ಶಾಸಕ ವಾಸು ನೇತೃತ್ವದಲ್ಲಿ ನ್ಯಾಯಾಲಯದಲ್ಲಿ ಹೋರಾಟ ನಡೆಸಬೇಕು ಎಂದು ಕೆಲ ಕೈಗಾರಿಕೋದ್ಯಮಿಗಳು ಒತ್ತಾಯಿಸಿದರು. ಇದಕ್ಕೆ ಉತ್ತರಿಸಿದ ಮಾಜಿ ಶಾಸಕ ವಾಸು, ಕೋರ್ಟ್‌ಗೆ ಹೋದರೆ ತ್ವರಿತವಾಗಿ ನ್ಯಾಯ ಸಿಗಲಿದೆ ಎಂದು ಭಾವಿಸುವುದು ಕಷ್ಟ. ಈ ಕುರಿತು ಮತ್ತೊಮ್ಮೆ ಚರ್ಚಿಸುವುದು ಸೂಕ್ತವಾಗಿದೆ. ಆದರೆ ಈಗ ಬಿಲ್ ಪಾವತಿಗೆ ಹೆಚ್ಚಿನ ಕಾಲಾವಕಾಶ ಪಡೆಯುವುದು ಒಳಿತು ಎಂದು ಸಲಹೆ ನೀಡಿದರು.



ಮೈಸೂರಿನ ವಿಜಯನಗರದಲ್ಲಿರುವ ಚೆಸ್ಕಾಂ ಕಚೇರಿಯಲ್ಲಿ ಗುರುವಾರ ಮೈಸೂರು ಕೈಗಾರಿಕೆಗಳ ಸಂಘ(ಮೈಸೂರು ಇಂಡಸ್ಟ್ರೀಸ್ ಅಸೋಸಿಯೇಷನ್)ದ ಪದಾಧಿಕಾರಿಗಳು ಹಾಗೂ ಕೈಗಾರಿಕೋದ್ಯಮಿಗಳೊಂದಿಗೆ ವಿದ್ಯುತ್ ದರ ಏರಿಕೆ ಸಂಬಂಧ ನಡೆದ ಸಭೆಯಲ್ಲಿ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ ಮಾತನಾಡಿದರು. ಮಾಜಿ ಶಾಸಕ ವಾಸು ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಹೆಚ್ಚುವರಿ ಕಾಲಾವಕಾಶಕ್ಕೆ ಮನವಿ: ಮೈಸೂರು ಕೈಗಾರಿಕೆಗಳ ಸಂಘದ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ಮಾತನಾಡಿ, ಏಕಾಏಕಿ ವಿದ್ಯುತ್ ದರ ಹೆಚ್ಚಳದಿಂದ ಉದ್ಯಮಿಗಳಿಗೆ ತೊಂದರೆಯಾಗಿದೆ. ಆದ್ದರಿಂದ ವಿದ್ಯುತ್ ಕಡಿತಗೊಳಿಸದೆ, ಬಿಲ್ ಪಾವತಿಗೆ 10–15 ದಿನಗಳ ಕಾಲ ಹೆಚ್ಚಿನ ಕಾಲಾವಕಾಶ ನೀಡಬೇಕು ಎಂದು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಚೆಸ್ಕಾಂ ಎಂಡಿ ಜಯವಿಭವಸ್ವಾಮಿ, ವಿದ್ಯುತ್ ಖರೀದಿಸುವ ವಿಚಾರದಲ್ಲಿ ಸ್ವಲ್ಪ ತಡವಾದರೂ ಸಂಸ್ಥೆ (ಚೆಸ್ಕಾಂ) ಶೇ.18ರಷ್ಟು ಬಡ್ಡಿ ಕಟ್ಟಬೇಕಾಗುತ್ತದೆ. ಅಲ್ಲದೆ ವಿದ್ಯುತ್ ಪೂರೈಕೆಯಲ್ಲಿಯೂ ತೊಂದರೆಯಾಗುತ್ತದೆ. ಆದ್ದರಿಂದ ಹೆಚ್ಚಿನ ಕಾಲಾವಕಾಶ ನೀಡಲು ಸಾಧ್ಯವಿಲ್ಲ. ಆದರೆ ತಿಂಗಳ ಅಂತ್ಯದವರೆಗೆ ವಿದ್ಯುತ್ ಪೂರೈಕೆ ಕಡಿತಗೊಳಿಸದೆ ಬಿಲ್ ಪಾವತಿಗೆ ಅವಕಾಶ ಮಾಡಿಕೊಡುವ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು.

ಗುಜರಿಗೆ ಹಾಕುವ ಬದಲು ಮರು ಮಾರಾಟ ಮಾಡಿ: ಬಳಕೆಯಾದ ವಿದ್ಯುತ್ ಉಪಕರಣಗಳನ್ನು ಗುಜರಿಗೆ ಹಾಕುವ ಬದಲು ಮರು ಬಳಕೆ ಮಾರಾಟ ಮಾಡಿದರೆ, ಚೆಸ್ಕಾಂಗೆ ಆದಾಯವಾಗುತ್ತದೆ. ಅದಕ್ಕಾಗಿ ಪ್ರತ್ಯೇಕ ಗೋಡೌನ್ ಮಾಡಿ ಎಂದು ಉದ್ಯಮಿಯೊಬ್ಬರು ನೀಡಿದ ಸಲಹೆಗೆ ಪ್ರತಿಕ್ರಿಯಿಸಿದ ಚೆಸ್ಕಾಂ ಎಂಡಿ ಜಯವಿಭವಸ್ವಾಮಿ, ಈಗಾಗಲೇ ಈ ಕೆಲಸವನ್ನು ಮಾಡಿದ್ದೇವೆ. ಬಳಕೆಯಾಗಿದ್ದ ವಿದ್ಯುತ್ ಉಪಕರಣಗಳನ್ನು ಮರು ಬಳಕೆ ಮಾಡುವ ಮೂಲಕ ಚೆಸ್ಕಾಂ ಆದಾಯ ಗಳಿಸುತ್ತಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಿಸಲಾಗುವುದು ಎಂದರು.

ಲಾಭದತ್ತ ಚೆಸ್ಕಾಂ: ಚೆಸ್ಕಾಂ ಅಧಿಕಾರಿ–ಸಿಬ್ಬಂದಿಗಳ ಸತತ ಪರಿಶ್ರಮದಿಂದ ಮುಂದಿನ ದಿನಗಳಲ್ಲಿ ಚೆಸ್ಕಾಂ ಲಾಭದತ್ತ ಸಾಗಲಿದೆ. ಅನಧಿಕೃತ ವಿದ್ಯುತ್ ಬಳಕೆದಾರರ ಮೇಲೆ ಸುಮಾರು 2500 ಪ್ರಕರಣ ದಾಖಲಿಸಲಾಗಿದೆ. ಬೇರೆ ಬೇರೆ ಎಸ್ಕಾಂಗಳಿಂದ ಸುಮಾರು 250 ಕೋಟಿ ರೂ.ಬಾಕಿ ಬರಬೇಕಾಗಿದೆ. ಮುಂದಿನ ದಿನಗಳಲ್ಲಿ ಸುಮಾರು 170 ಕೋಟಿ ರೂ. ಹೆಚ್ಚಿನ ಆದಾಯ ಗಳಿಸುವ ಮೂಲಕ ಚೆಸ್ಕಾಂ ಲಾಭದತ್ತ ಸಾಗಲಿದೆ. ಇದಕ್ಕಾಗಿ ಸಾರ್ವಜನಿಕರು, ಕೈಗಾರಿಕೋದ್ಯಮಿಗಳು ಸಹಕಾರ ನೀಡಬೇಕು ಎಂದು ಕೋರಿದರು.

ಮತ್ತೊಮ್ಮೆ ಸಭೆ: ಕಡೆಯಲ್ಲಿ ಮಾತನಾಡಿದ ಮಾಜಿ ಶಾಸಕ ವಾಸು, ಮೈಸೂರಿನ ಕೈಗಾರಿಕೋದ್ಯಮಿಗಳನ್ನು ಒಂದೆಡೆ ಸಭೆ ಸೇರಿಸಿ ಎಲ್ಲರೊಂದಿಗೆ ಚರ್ಚಿಸಿ, ಮತ್ತೊಮ್ಮೆ ಸಭೆ ನಡೆಸಲಾಗುವುದು. ಇದಕ್ಕೆ ಅನುಮತಿ ನೀಡಬೇಕು ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಚೆಸ್ಕಾಂ ಎಂಡಿ, ವಿದ್ಯುತ್ ಪೂರೈಕೆಯಲ್ಲಿ ಯಾವುದೇ ಬಗೆಯ ಅಭಿವೃದ್ಧಿ ಕಾರ್ಯವಾಗಬೇಕಾದರು ಬಂದು ಚರ್ಚಿಸಬಹುದು. ಹಾಗೆಯೇ ಚೆಸ್ಕಾಂನಿಂದ ಯಾವುದೇ ನಿರ್ಣಯ ತೆಗೆದುಕೊಂಡರು ಮೈಸೂರು ಕೈಗಾರಿಕೆಗಳ ಸಂಘಕ್ಕೆ ಮಾಹಿತಿ ನೀಡಲಾಗುವುದು ಎಂದರು. ಚೆಸ್ಕಾಂ ತಾಂತ್ರಿಕ ನಿರ್ದೇಶಕ ಉಮೇಶ್ ಚಂದ್ರ, ಮುಖ್ಯ ಆರ್ಥಿಕ ಅಧಿಕಾರಿ ಷೇಕ್ ಮಹಿ ಮುಲ್ಲಾ ಷರೀಫ್, ವಾಣಿಜ್ಯ ವಿಭಾಗದ ಪ್ರಧಾನ ವ್ಯವಸ್ಥಾಪಕಿ ಸ್ವರೂಪ ರಾಣಿ, ಕಂದಾಯ ಮತ್ತು ಬಿಲ್ಲಿಂಗ್ ವಿಭಾಗದ ಪ್ರಧಾನ ವ್ಯವಸ್ಥಾಪಕಿ ರೇಣುಕಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಗುಣಮಟ್ಟದ ವಿದ್ಯುತ್ ಪೂರೈಕೆಗೆ ಮನವಿ

ಮೈಸೂರು ಹೆಬ್ಬಾಳ ಕೈಗಾರಿಕಾ ಪ್ರದೇಶ ಸೇರಿದಂತೆ ವಿವಿಧೆಡೆ ವಿದ್ಯುತ್ ಪೂರೈಕೆಯಲ್ಲಿ ತೊಂದರೆಯಾಗುತ್ತಿದ್ದು, ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡುವಂತೆ ಮಾಡಿದ ಮನವಿಗೆ, ಸದ್ಯದಲ್ಲಿ ಮೈಸೂರಿನ ಕೈಗಾರಿಕಾ ಪ್ರದೇಶಗಳಿಗೆ ವಿದ್ಯುತ್ ಪೂರೈಕೆಯಾಗುತ್ತಿರುವ ಕುರಿತು ವರದಿ ತರಿಸಿಕೊಂಡು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಅವಶ್ಯಕತೆ ಇದ್ದರೆ ಖಂಡಿತವಾಗಿಯೂ ಬದಲಾವಣೆ ಮಾಡುವ ಮೂಲಕ ಗುಣಮಟ್ಟದ ವಿದ್ಯುತ್ ಪೂರೈಕೆಗೆ ಬೇಕಾದ ವಾತಾವರಣ ನಿರ್ಮಿಸಲಾಗುವುದು ಎಂದು ಭರವಸೆ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಯುಪಿ ಮಾಜಿ ಸಿಎಂ ಅಖಿಲೇಶ್ ಭೇಟಿಯಾದ ನಿಖಿಲ್ ಕುಮಾರಸ್ವಾಮಿ



ಮೈಸೂರು ಕಾಲೇಜು ದಿನಗಳ ಸ್ಮರಿಸಿದ ಯಾದವ್

ರಾಮನಗರ,ಜೂ.15–ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ಸಮಾಜವಾದಿ ಪಕ್ಷದ ನಾಯಕರಾದ ಅಖಿಲೇಶ್ ಯಾದವ್ ಅವರನ್ನು ಗುರುವಾರ ಲಕ್ನೋದಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ.

ನಿಖಿಲ್ ಅವರನ್ನು ತಮ್ಮ ನಿವಾಸಕ್ಕೆ ಆತ್ಮೀಯವಾಗಿ ಬರಮಾಡಿಕೊಂಡ ಅಖಿಲೇಶ್ ಯಾದವ್, ರಾಜಕೀಯ ವಿಚಾರಗಳ ಜೊತೆಗೆ ಮೈಸೂರಿನಲ್ಲಿ ತಮ್ಮ ಕಾಲೇಜು ದಿನಗಳನ್ನು ನೆನಪಿಸಿಕೊಂಡಿದ್ದಾರೆ.

ಅಖಿಲೇಶ್ ಯಾದವ್ ಭೇಟಿ ವಿಚಾರವನ್ನು ಮಾಧ್ಯಮಗಳೊಂದಿಗೆ ಹಂಚಿಕೊಂಡಿರುವ ನಿಖಿಲ್ ಕುಮಾರಸ್ವಾಮಿ, ಇದು ಅತ್ಯಂತ ವಿಶ್ವಾಸಪೂರ್ವಕ ಹಾಗೂ ಸಹೋದರ ವಾತ್ಸಲ್ಯದೊಂದಿಗೆ ಕೂಡಿದ ಭೇಟಿಯಾಗಿತ್ತು. ಲೋಕಸಭೆ ಚುನಾವಣೆ ಸೇರಿದಂತೆ ಭವಿಷ್ಯದ ರಾಜಕೀಯ ಬೆಳವಣಿಗೆಗಳ ಕುರಿತಂತೆ ಮಹತ್ವದ ಸಮಾಲೋಚನೆ ನಡೆಸಲಾಯಿತು ಎಂದಿದ್ದಾರೆ.

ಸಮಾಜವಾದಿ ಪಕ್ಷದ ಸಂಸ್ಥಾಪಕ ಅಧ್ಯಕ್ಷ ಮುಲಾಯಂ ಸಿಂಗ್ ಯಾದವ್ ಹಾಗೂ ಮಾಜಿ ಪ್ರಧಾನಮಂತ್ರಿಗಳಾದ ಹೆಚ್.ಡಿ.ದೇವೇಗೌಡರ ಕುಟುಂಬಗಳ ನಡುವಿನ ಬಾಂಧವ್ಯ ಹಾಗೂ ವಿಶೇಷ ನೆನಪುಗಳನ್ನು ಅಖಿಲೇಶ್ ಅವರು ಮೆಲುಕು ಹಾಕಿದರು. ದೇವೇಗೌಡರು ಮತ್ತು ಎಚ್.ಡಿ. ಕುಮಾರಸ್ವಾಮಿ ಅವರ ಕ್ಷೇಮ ವಿಚಾರಿಸಿದರು. ಕರ್ನಾಟಕ ವಿಧಾನಸಭೆ ಚುನಾವಣೆ ಹಾಗೂ ರಾಷ್ಟ್ರಮಟ್ಟದ ರಾಜಕೀಯ ಬೆಳವಣಿಗೆಗಳ ಬಗ್ಗೆಯೂ ಸಾಕಷ್ಟು ವಿಷಯಗಳನ್ನು ಚರ್ಚಿಸಿದರು. ಉತ್ತರಪ್ರದೇಶ ರಾಜಕಾರಣದಲ್ಲಾದ ಬೆಳವಣಿಗೆ ಬಗ್ಗೆಯೂ ಮುಕ್ತವಾಗಿ ಮಾತನಾಡಿದರು. ಮುಂಬರುವ ಲೋಕಸಭಾ ಚುನಾವಣೆ ಎದುರಿಸಲು ಅಖಿಲೇಶ್ ಅವರು ತಮ್ಮದೇ ಆದ ವಿಶೇಷ ಕಾರ್ಯಸೂಚಿ ರೂಪಿಸಿಕೊಂಡಿದ್ದಾರೆ. ಈಗಿನಿಂದಲೇ ಚುನಾವಣಾ ಸಿದ್ಧತೆ ನಡೆಸಿದ್ದಾರೆ ಎಂದರು.

ಅಖಿಲೇಶ್ ಅವರು ಮೈಸೂರಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ಹಾಗಾಗಿ ತಮ್ಮ ಕಾಲೇಜು ದಿನಗಳನ್ನು ಸ್ಮರಿಸಿಕೊಂಡರು. ಕರ್ನಾಟಕ ಮತ್ತು ಕನ್ನಡಿಗರ ಬಗ್ಗೆ ತಮಗಿರುವ ಅಪಾರ ಗೌರವ, ಅಭಿಮಾನವನ್ನು ಹೃದಯಪೂರ್ವಕವಾಗಿ ವ್ಯಕ್ತಪಡಿಸಿದರು. ಅವರ ನಾಡಿನ ಬಗ್ಗೆ ಅವರಿಗಿರುವ ಪ್ರೀತಿ ವಿಶ್ವಾಸಕ್ಕೆ ನಾನು ಅಭಿನಂದನೆ ಸಲ್ಲಿಸಿದೆ ಎಂದು ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ.

ಗುಜರಾತ್ ಕರಾವಳಿಗೆ ಅಪ್ಪಳಿಸಿದ ಬಿಪರ್‌ಜಾಯ್ ಚಂಡಮಾರುತ

● ರಾಜ್ಯದ 8 ಜಿಲ್ಲೆಗಳು ತತ್ತರ ● 6 ಮೀಟರ್ ಎತ್ತರದ ರಕ್ಕಸ ಅಲೆಗಳಿಗೆ ನಲುಗಿದ ತೀರ ಪ್ರದೇಶಗಳು ● ಮುನ್ನೆಚ್ಚರಿಕೆ ಕ್ರಮವಾಗಿ ಜನ–ಜಾನುವಾರು ಶಿಫ್ಟ್

ಕಛ್(ಗುಜರಾತ್), ಜೂ.15– ಬಿಪರ್‌ಜಾಯ್ ಚಂಡಮಾರುತ ಗುಜರಾತಿಗೆ ಅಪ್ಪಳಿಸಿದ್ದು, ರಾಜ್ಯದ 8 ಕರಾವಳಿ ಜಿಲ್ಲೆಗಳು ತತ್ತರಿಸಿವೆ. 150 ಕಿಮೀ ವೇಗದಲ್ಲಿ ಅಪ್ಪಳಿಸಿರುವ ಚಂಡಮಾರುತದ ಫಲವಾಗಿ ಸಮುದ್ರದ ಅಲೆಗಳು 6 ಮೀಟರ್ ಎತ್ತರಕ್ಕೆ ಸುಮಾರು 15 ರಿಂದ 20 ಕಿಮೀ ವೇಗದಲ್ಲಿ ಅಪ್ಪಳಿಸಿವೆ.

ಇದರ ಪರಿಣಾಮವಾಗಿ ಸಮುದ್ರದಂಚಿನ ನೂರಾರು ಮನೆಗಳು ನೆಲಸಮವಾಗಿವೆ. ಭಾರೀ ಬಿರುಗಾಳಿ ಮಳೆಗೆ ಸಾವಿರಕ್ಕೂ ಹೆಚ್ಚು ಮರಗಳು ಧರೆಗುರುಳಿವೆ. ಜಿಲ್ಲಾಡಳಿತವು ಈಗಾಗಲೇ 1 ಲಕ್ಷ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿವೆ. ಜನರು ಮಾತ್ರವಲ್ಲದೆ 20 ಸಾವಿರಕ್ಕೂ ಹೆಚ್ಚು ಸಾಕು ಪ್ರಾಣಿಗಳನ್ನೂ ಸ್ಥಳಾಂತರ ಮಾಡಲಾಗಿದ್ದು, ನಿರಾಶ್ರಿತ ಶಿಬಿರಗಳಿಗೆ ಸರ್ಕಾರದ ರಕ್ಷಣಾ ಪಡೆಗಳು ಮಾತ್ರವಲ್ಲದೆ, ಸ್ವಯಂ ಸೇವಾ ಸಂಸ್ಥೆಗಳು, ಆಹಾರ, ಔಷಧಿ ಮತ್ತಿತರ ಅಗತ್ಯ ವಸ್ತುಗಳನ್ನು ಪೂರೈಸುತ್ತಿವೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್), ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್), ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಮತ್ತು ಸೇನಾ ಘಟಕಗಳು ರಕ್ಷಣೆ ಹಾಗೂ ಪರಿಹಾರ ಕಾರ್ಯದಲ್ಲಿ ಸಮರೋಪಾದಿಯಲ್ಲಿ ತೊಡಗಿಸಿಕೊಂಡಿವೆ. ರಕ್ಷಣೆ ಹಾಗೂ ಪರಿಹಾರ ಕಾರ್ಯಗಳಿಗಾಗಿ 33 ವಿಶೇಷ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಕಛ್ ಜಿಲ್ಲಾಧಿಕಾರಿ ಅಮಿತ್ ಅರೋರಾ ತಿಳಿಸಿದ್ದಾರೆ.

ಜುನಾಘಡ್, ಕಛ್, ಜಾಮ್‌ನಗರ್, ಪೋರ್ ಬಂದರ್, ದೇವಭೂಮಿ ದ್ವಾರಕ, ಗಿರ್‌ಸೋಮ್ ಪ್ರದೇಶಗಳಲ್ಲಿ ಹೆಚ್ಚು ಹಾನಿಯಾಗಿದೆ. ಈ ಪ್ರದೇಶ ಗಳಲ್ಲಿ ಕಳೆದ ಮೂರು ದಿನಗಳಿಂದಲೂ ಭಾರೀ ಮಳೆಯಾಗುತ್ತಿದ್ದು, ಇಂದು ಸಂಜೆ ಬಿಪರ್‌ಜಾಯ್ ಚಂಡಮಾರುತ ಅಪ್ಪಳಿಸಿದ ಪರಿಣಾಮ ರಕ್ಕಸ ಅಲೆಗಳಿಗೆ ಮನೆಗಳು ಮಾತ್ರವಲ್ಲದೆ, ಕಡಲ ತೀರದಲ್ಲಿದ್ದ ಹಲವಾರು ದೋಣಿಗಳಿಗೆ ತೀವ್ರ ಹಾನಿಯಾಗಿದೆ. ಈಶಾನ್ಯ ಮತ್ತು ಪೂರ್ವ ಮಧ್ಯ ಅರಬ್ಬಿ ಸಮುದ್ರದಲ್ಲಿ ಮೀನುಗಾರಿಕೆ ಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಗಿತ್ತು. ಅವಶ್ಯಕತೆ ಬಿದ್ದರೆ ಬಳಸಿಕೊಳ್ಳಲು ಗೋವಾದ ಐಎನ್‌ಎಸ್ ಹಂಸ ಮತ್ತು ಮುಂಬೈನ ಐಎನ್‌ಎಸ್ ಶಿಕ್ರಾ ನೆಲೆಯಲ್ಲಿರುವ ಹೆಲಿಕಾಪ್ಟರ್‌ಗಳನ್ನು ಸಜ್ಜಾಗಿ ಇರಿಸಲಾಗಿದೆ.



ಮರಗಳು ಧರೆಗುರುಳುವುದು ಹಾಗೂ ರಸ್ತೆಗೆ ತೀವ್ರ ಹಾನಿಯಾಗುವುದು ಕಳೆದ ಮೂರು ದಿನಗಳಿಂದಲೂ ಸಂಭವಿಸುತ್ತಿತ್ತು. ಇಂದು ಚಂಡಮಾರುತ ಅಪ್ಪಳಿಸಿದ ನಂತರ ಅದರ ಪ್ರಮಾಣ ಹೆಚ್ಚಾಗಿದೆ. ಹೀಗಾಗಿ ರಸ್ತೆ ತೆರವು ಕಾರ್ಯಾಚರಣೆಗಾಗಿ 50 ತಂಡಗಳನ್ನು ನಿಯೋಜಿಸಲಾಗಿದೆ. ಅಲ್ಲದೆ, ಕಾಡು ಪ್ರಾಣಿಗಳ ಸುರಕ್ಷತೆಗಾಗಿ ಅರಣ್ಯ ಇಲಾಖೆಯ 180 ತಂಡಗಳನ್ನು ಸಜ್ಜುಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಿಪರ್‌ಜಾಯ್ ಚಂಡಮಾರುತದ ಅಬ್ಬರ ಗುರುವಾರ ಮಧ್ಯರಾತ್ರಿಯವರೆಗೂ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದ್ದು, ಗುಜರಾತ್ ಕರಾವಳಿ ಜಿಲ್ಲೆಯ ಜನರು ಮನೆಯಿಂದ ಹೊರಬಾರದಂತೆ ಎಚ್ಚರಿಕೆ ನೀಡಲಾಗಿದೆ. ಅಂಗಡಿ–ಮುಂಗಟ್ಟುಗಳು, ಸರ್ಕಾರಿ ಕಚೇರಿಗಳು ಹಾಗೂ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಬುಜ್, ಜಾಮ್‌ನಗರ್, ಗಾಂಧಿಧಾಮ, ನಲಿಯಾ, ದ್ವಾರಕ, ಮಾಂಡ್ವಿ ವಲಯದಲ್ಲಿ 27 ರಕ್ಷಣಾ ಪಡೆಗಳನ್ನು ಸೇನೆ ನಿಯೋಜಿಸಿದೆ. ಪರಿಹಾರ ಕಾರ್ಯಗಳಿಗೆ ಅಡ್ಡಿಯಾಗದಂತೆ ಪರಸ್ಪರ ಸಂಪರ್ಕ ಸಾಧಿಸಲು ರಕ್ಷಣಾ ತಂಡಗಳಿಗೆ ಸ್ಯಾಟಲೈಟ್ ಫೋನ್ ವಿತರಣೆ ಮಾಡಲಾಗಿದೆ. ಈ ಭಾಗದಲ್ಲಿ 76 ರೈಲುಗಳ ಸಂಚಾರವನ್ನು ಸಂಪೂರ್ಣವಾಗಿ ರದ್ದುಗೊಳಿಸಿದ್ದು, 36 ರೈಲುಗಳ ಅಂತರವನ್ನು ಪಶ್ಚಿಮ ರೈಲ್ವೆ ಕಡಿತ ಗೊಳಿಸಿದೆ. ಮುಂಜಾಗ್ರತಾ ಕ್ರಮವಾಗಿ ಗುಜರಾತ್‌ನ ಜಗತ್ ಮಂದಿರ್, ತ್ರಿಲೋಕ್ ಮಂದಿರ್ ಒಳಗೊಂಡಂತೆ ದ್ವಾರಕ ದೇವಸ್ಥಾನದ ಬಾಗಿಲು ಬಂದ್ ಮಾಡಲಾಗಿದೆ.

ಅಲೆಗಳ ಹೊಡೆತದಿಂದ ಪಾರಾದ ಕೇಂದ್ರ ಸಚಿವ



ಚಂಡಮಾರುತದ ಅಬ್ಬರಕ್ಕೆ ಗುಜರಾತ್ ಕರಾವಳಿ ತತ್ತರಿಸಿ ಹೋಗಿದೆ. ಈ ಮಧ್ಯೆ ಕೇಂದ್ರ ಸಚಿವ ಪುರುಷೋತ್ತಮ ರೂಪಾಲಾ ಸಮುದ್ರ ಅಲೆಗಳ ಹೊಡೆತದಿಂದ ಸ್ವಲ್ಪದರಲ್ಲೇ ಪಾರಾದ ಘಟನೆ ನಡೆದಿದೆ. ದ್ವಾರಕಾದ ಸಮುದ್ರ ತಟದಲ್ಲಿರುವ ಶಿವನ ದೇವಸ್ಥಾನಕ್ಕೆ ರೂಪಾಲಾ ಬಂದಿದ್ದರು. ಮೂರು ಕಡೆಯಲ್ಲೂ ಸಮುದ್ರವಿರುವ ಈ ದೇಗುಲದಲ್ಲಿ ಪ್ರಾರ್ಥನೆ ಮುಗಿಸಿ ಹೊರಬರುತ್ತಿದ್ದ ವೇಳೆ ಏಕಾಏಕಿ ಸಮುದ್ರದ ಬೃಹತ್ ಅಲೆಬಂದು ಅವರಿಗೆ ಅಪ್ಪಳಿಸಿದೆ. ಸ್ವಲ್ಪ ಬ್ಯಾಲೆನ್ಸ್ ಕಳೆದುಕೊಂಡರೂ ತಕ್ಷಣ ಸಾವರಿಸಿಕೊಂಡು ಬಚಾವಾದರು.

ಸಿರಿಕನ್ನಡ ವಾಹಿನಿ ವೀಕ್ಷಿಸಿ ಆಕರ್ಷಕ ಬಹುಮಾನ ಗೆಲ್ಲಿ

ಎಲ್ಲಾ ಕೇಬಲ್, ಡಿಟಿಹೆಚ್‌ಗಳಲ್ಲಿ ಉಚಿತ ವೀಕ್ಷಣೆಗೆ ವಾಹಿನಿ ಲಭ್ಯ: ವಾಹಿನಿ ಸಂಸ್ಥಾಪಕ ನಿರ್ದೇಶಕ ಸಂಜಯ್ ಶಿಂಧೆ

ಮೈಸೂರು,ಜೂ.15(ಪಿಎಂ)– ತಪ್ಪದೇ ಸಿರಿಕನ್ನಡ ವಾಹಿನಿ ವೀಕ್ಷಿಸುವ ಮೂಲಕ ಜೂ.15ರಿಂದ ಪ್ರತಿ ಅರ್ಧ ಗಂಟೆಗೊಮ್ಮೆ ಟಿವಿ, ರೆಫ್ರಿಜರೇಟರ್, ವಾಸಿಂಗ್ ಮೆಷಿನ್ ಇತ್ಯಾದಿ ಆಕರ್ಷಕ ಬಹುಮಾನಗಳನ್ನು ಕೇವಲ ಮಿಸ್ ಕಾಲ್ ಕೊಟ್ಟು ಸುಲಭವಾಗಿ ತಮ್ಮದಾಗಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ವಾಹಿನಿಯನ್ನು ವೀಕ್ಷಿಸಬೇಕೆಂದು ವಾಹಿನಿಯ ಸಂಸ್ಥಾಪಕ ನಿರ್ದೇಶಕ ಸಂಜಯ್ ಶಿಂಧೆ ಮತ್ತು ಮುಖ್ಯಸ್ಥ ರಾಜೇಶ್ ರಾಜಘಟ್ಟ ಕೋರಿದ್ದಾರೆ.

ಕನ್ನಡಿಗರ ಹೆಮ್ಮೆಯ ಸಿರಿಕನ್ನಡ ವಾಹಿನಿ ಕಳೆದ 5 ವರ್ಷಗಳಿಂದ ಕ್ರಿಯಾತ್ಮಕ ಕಾರ್ಯಕ್ರಮಗಳ ಮೂಲಕ ಕನ್ನಡಿಗರ ಮನರಂಜಿಸುತ್ತಿದೆ. ಅಲ್ಲದೆ, ಯುಗಾಂತರ, ರಜ್ಜಿಯಾರಾಮ್, ಮಾಯಾಮೃಗ, ವಿಜಯದಶಮಿಯಂತಹ ಧಾರಾವಾಹಿಗಳು, ನಾ ಕಂಡ ಸರಣಿ, ನಾರಿಗೊಂದು ಸೀರೆ, ಲೈಫ್ ಓಕೆ ಮತ್ತು ಹಾಸ್ಯ ದರ್ಬಾರ್ ನಂತಹ ಕಾರ್ಯಕ್ರಮಗಳ ಮೂಲಕ ವೀಕ್ಷಕರ ಮನಗೆದ್ದಿದೆ.

ಅಲ್ಲದೆ, ಅದ್ದೂರಿ ಸೆಟ್‌ನ ರಂಗು ರಂಗಿನ ವೇದಿಕೆಯಲ್ಲಿ ಹೆಸರಾಂತ ಹಾಸ್ಯ ಕಲಾವಿದ ಹಿತೇಶ್, ಜನಪ್ರಿಯ ನಿರೂಪಕಿ ಹೇಮಾ, ತ್ಯಾಗರಾಜ್ ಸಾರಥ್ಯದಲ್ಲಿ ಪ್ರತಿ ಸೋಮವಾರದಿಂದ ಶುಕ್ರವಾರದವರೆಗೆ ಸಂಜೆ 6 ಗಂಟೆಗೆ ಪ್ರಸಾರವಾಗುತ್ತಿರುವ 'ಸಖತ್ ಜೋಡಿ' ಕಾರ್ಯಕ್ರಮ ಈಗಾಗಲೇ ಹೆಂಗಳೆಯರ ಮನ ಗೆಲ್ಲುವಲ್ಲಿ ಯಶಸ್ವಿಯಾಗಿದೆ. 'ಸಖತ್ ಜೋಡಿ' ಕಾರ್ಯಕ್ರಮದಲ್ಲಿ ಎಲ್ಲಾ ಮಹಿಳೆಯರು ಭಾಗವಹಿಸಬಹುದು. ಈಗಾಗಲೇ ಸ್ಯಾಂಡಲ್‌ವುಡ್ ಮತ್ತು ಕಿರುತೆರೆಯ ಜನಪ್ರಿಯ ಕಲಾವಿದರು ಭಾಗವಹಿಸಿದ್ದಾರೆ.



ಕಲಾ ಸಾಮ್ರಾಟ್ ಎಸ್.ನಾರಾಯಣ್ ಅವರ ಪುತ್ರ ಪಂಕಜ್ ಕಿರುತೆರೆಯಲ್ಲಿ ಪ್ರಪ್ರಥಮ ಬಾರಿಗೆ ನಾಯಕ ನಟನಾಗಿ ಅಭಿನಯಿಸಿರುವ 'ಊರ್ಮಿಳ' ಧಾರಾವಾಹಿ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 8.30ಕ್ಕೆ ಪ್ರಸಾರವಾಗುತ್ತಿದೆ. ಜನಪ್ರಿಯ ನಿರ್ದೇಶಕ ರವಿಗರಣಿ ಅವರ ಕಥೆ, ಸಂಜೀವ್ ತಗಡೂರ್ ನಿರ್ದೇಶನದ ವಿಭಿನ್ನ ಕಥಾಹಂದರದ ಅದ್ದೂರಿ ಧಾರಾವಾಹಿ 'ಬ್ರಾಹ್ಮಿನ್ಸ್ ಕೆಫೆ' ರಾತ್ರಿ 9.30ಕ್ಕೆ ಪ್ರಸಾರವಾಗುತ್ತಿದ್ದು, ಈ ಧಾರಾವಾಹಿ ಕೆಲವೇ ದಿನಗಳಲ್ಲಿ ವೀಕ್ಷಕರ ಮನಸೂರೆಗೊಂಡಿದೆ. ಸಿರಿಕನ್ನಡ ವಾಹಿನಿಯು ಎಲ್ಲಾ ಕೇಬಲ್, ಡಿಟಿಹೆಚ್‌ಗಳಲ್ಲಿ ಲಭ್ಯವಿದ್ದು, ಉಚಿತವಾಗಿ ವೀಕ್ಷಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕದಂಬ ರಂಗವೇದಿಕೆ 60ರ ಸಂಭ್ರಮಕ್ಕೆ ಚಾಲನೆ

ನಾಲ್ಕು ದಿನಗಳ ಕಾಲ ನಾಟಕೋತ್ಸವ, ವಿಚಾರ ಸಂಕಿರಣ, ಛಾಯಾಚಿತ್ರ ಪ್ರದರ್ಶನದ ಮೂಲಕ ಸಾರ್ಥಕತೆ ಸಂದೇಶ

ಮೈಸೂರು, ಜೂ.15(ಎಂಕೆ)– ಮೈಸೂರು ಕಲಾಮಂದಿರದ ಕಿರುರಂಗಮಂದಿರದಲ್ಲಿ ಕದಂಬ ರಂಗವೇದಿಕೆ ವತಿಯಿಂದ ಆಯೋಜಿಸಿರುವ 4 ದಿನಗಳ ಕದಂಬ ರಂಗವೇದಿಕೆ 60ರ ಸಂಭ್ರಮ(ನಾಟಕೋತ್ಸವ, ವಿಚಾರ ಸಂಕಿರಣ, ಛಾಯಾಚಿತ್ರ ಪ್ರದರ್ಶನ)ಕ್ಕೆ ಗುರುವಾರ ಚಾಲನೆ ನೀಡಲಾಯಿತು.

ಕಿರುತರೆ ನಟ ಬಾಬು ಹಿರಣ್ಣಯ್ಯ ಚಂಡೆ ಬಾರಿಸುವ ಮೂಲಕ ಕದಂಬ ರಂಗವೇದಿಕೆ ಸಂಭ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಕದಂಬ ರಂಗ ವೇದಿಕೆ 6 ದಶಕಗಳನ್ನು ಮೀರಿ ರಂಗ ಸೇವೆಯಲ್ಲಿ ನಿರತವಾಗಿರುವುದು ಹರ್ಷದಾಯಕವಾದರೂ ನನಗೆ ಇದೇನು ಆಶ್ಚರ್ಯವೆನಿಸುತ್ತಿಲ್ಲ. ಯಾವುದೇ ಸಂಸ್ಥೆ 6 ದಶಕಕ್ಕೂ ಮೀರಿ ಕೆಲಸ ಮಾಡಿದೆ ಎಂದರೆ ಅದಕ್ಕೆ ಸಾಕ್ಷಿಯಾಗಿರುವುದು ಆ ಮಣ್ಣಿನ ಗುಣ. ಮೈಸೂರಿನ ಮಣ್ಣಿನ ಗುಣವೇ ಹಾಗೆ. ಹಾಗಾಗಿ ಒಂದು ರಂಗ ಸಂಸ್ಥೆ ಮೈಸೂರಿನಲ್ಲಿ ಜನ್ಮ ತಾಳಿದೆ ಎಂದರೆ ಆಶ್ಚರ್ಯ ಮತ್ತು ಅನುಮಾನವನ್ನೂ ಪಡಬೇಕಾಗಿಲ್ಲ. ಆ ಸಂಸ್ಥೆ ನೂರು ವರ್ಷ ಮುಟ್ಟೇ ಮುಟ್ಟುತ್ತದೆ ಎಂದರು.

ಕಲಾ ಮಾತೆ ಎಲ್ಲರನ್ನೂ ಕೈ ಬೀಸಿ ಕರೆಯುತ್ತಾಳೆ. ಕೆಲವರನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ ಎಂದು ಅನಕೃ ಅವರು ಹೇಳಿದಂತೆ ಕಲಾ ಸೇವೆಗೆ ಆಯ್ಕೆಯಾದವರನ್ನು ಕಾಣುವ ಸ್ಥಳ ಮೈಸೂರಾಗಿದೆ. ಯಾರು ತಪಸ್ಸು, ತ್ಯಾಗ, ನಿಷ್ಠೆಯಿಂದ ಅರ್ಪಣಾ ಮನೋಭಾವದಲ್ಲಿ ರಂಗಭೂಮಿಯಲ್ಲಿ ಸೇವೆ ಮಾಡಲು ಸಿದ್ಧರಾಗುವವರಿಗೆ ಮಾತ್ರ ಕಲಾಮಾತೆ ಒಲಿಯುತ್ತಾಳೆ ಎಂದು ನಮ್ಮಪ್ಪ ಮಾಸ್ಟರ್ ಹಿರಣ್ಣಯ್ಯ ನನಗೆ ಹೇಳಿದ್ದರು. ಕಾರಣ ಇಲ್ಲಿ ಯಾವುದೇ ಜಾತಿ, ಕುಲ, ಮತ ಎನ್ನದೆ ಸೇವೆ ಎಂಬುದು ರಂಗಭೂಮಿಯ ಜೀವಂತಿಕೆ ಉಳಿಯುತ್ತದೆ ಎಂದರು.

ರಂಗಭೂಮಿ ಕಲಾವಿದ ತನ್ನನ್ನೂ ತಾನು ಬದಲಾವಣೆ ಮಾಡಿಕೊಳ್ಳಲು ಅವಕಾಶವಿದೆ. ಅರ್ಪಣಾ ಮನೋಭಾವದಿಂದ ಬದಲಾವಣೆಯನ್ನು ಸ್ವೀಕರಿಸಬೇಕಾಗುತ್ತದೆ. ಬದಲಾವಣೆ ಇಲ್ಲದಿದ್ದರೆ ಅದು ಬರಿ ಚಿತ್ರವಾಗುತ್ತದೆಯೇ ಹೊರತು ನಾಟಕವಾಗುವುದಿಲ್ಲ. ರಂಗಭೂಮಿ ಯಾವತ್ತೂ ಪ್ರೇಕ್ಷಕರನ್ನು ಕಳೆದುಕೊಳ್ಳುವುದಿಲ್ಲ. ಕಳೆದುಕೊಳ್ಳುವುದಕ್ಕೂ ಸಾಧ್ಯವಿಲ್ಲ. ರಂಗಭೂಮಿಯನ್ನು ಬಳಸಿಕೊಂಡು ಇವತ್ತಿನ ಸಾಮಾಜಿಕ ಬದ್ಧತೆಗೆ ನಮ್ಮನ್ನು ಒಗ್ಗೂಡಿಸಿಕೊಂಡು ಸಮಾಜದ ಒಳಿತಿಗಾಗಿ ಜಾತ್ಯತೀತವಾಗಿ ಕೆಲಸ ಮಾಡುವ ಕಲಾವಿದರಿಗೆ ಗಮನ ಸಲ್ಲಿಸಬೇಕಾಗಿದೆ ಎಂದರು.

ರಂಗಭೂಮಿಗೆ ಬರುವ ಕಲಾವಿದರು ಕಷ್ಟಗಳನ್ನು ಹೊತ್ತುಕೊಂಡು ಬರುತ್ತಾರೆ ಎಂಬುದಕ್ಕೆ ನಮ್ಮಪ್ಪ ಒಂದು ಕತೆ ಹೇಳಿದ್ದರು. ಮೋಸ, ವಂಚನೆ ಮಾಡಿದ ವ್ಯಕ್ತಿಯೊಬ್ಬ ಸತ್ತು ಯಮಲೋಕಕ್ಕೆ ಹೋದಾಗ, ಯಮ ಆತನ ಎಲ್ಲಾ ಪಾಪ–ಪುಣ್ಯ ವಿಷಯಗಳನ್ನು ಸಂಪೂರ್ಣವಾಗಿ ಓದಿ ಈತನಿಗೆ ಏನು ಶಿಕ್ಷೆ ಕೊಡಬೇಕು ಎಂದುಕೊಂಡು ಕಡೆಗೆ ಮುಂದಿನ ಜನ್ಮದಲ್ಲಿ ನೀನು ಕರ್ನಾಟಕದಲ್ಲಿನ ರಂಗಭೂಮಿಯ ಕಲಾವಿದನಾಗು ಎಂದರಂತೆ. ಹಾಗೆಯೇ ಮತ್ತೊಬ್ಬ ಪರಮಪಾಪಿ ವ್ಯಕ್ತಿಗೆ ನೀನು ಹತ್ತಾರು ಕಲಾವಿದರಿರುವ ಕಂಪನಿಗೆ ಒಡೆಯನಾಗು ಎಂದು ವರ ಕೊಟ್ಟರಂತೆ. ಹಾಗಾಗಿ ರಂಗಭೂಮಿ ಕಲಾವಿದರು ಕಷ್ಟಗಳ ಮಧ್ಯದಲ್ಲಿಯೇ ಜೀವನ ಕಳೆಯಬೇಕು. ಪ್ರೇಕ್ಷಕ ವರ್ಗ ಇರುವವರೆಗೂ ರಂಗಭೂಮಿ ಇರುತ್ತೆ. ರಂಗಭೂಮಿ ಇರುವವರೆಗೂ ಸಂಸ್ಕೃತಿ ಇರುತ್ತೆ. ಹಾಗೆಯೇ ಸಂಸ್ಕೃತಿ ಇರುವವರೆಗೂ ರಾಷ್ಟ್ರ, ರಾಜ್ಯ ಉಳಿಯುತ್ತದೆ ಎಂದು ಹೇಳಿದರು.

ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ: ಇದೇ ವೇಳೆ ಕದಂಬ ರಂಗವೇದಿಕೆ ಪಕ್ಷಿನೋಟ ಛಾಯಾಚಿತ್ರ ಪ್ರದರ್ಶನಕ್ಕೆ ಅಂತಾರಾಷ್ಟ್ರೀಯ ಛಾಯಾಗ್ರಾಹಕ ಎಸ್. ತಿಪ್ಪೇಸ್ವಾಮಿ ಚಾಲನೆ ನೀಡಿದರು. ರಂಗ ನಿರ್ದೇಶಕ ಪ್ರೊ.ಹೆಚ್.ಎಸ್.ಉಮೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಂಗಕರ್ಮಿ ಮಂಡ್ಯ ರಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಕದಂಬ ರಂಗವೇದಿಕೆಯ ರಾಜಶೇಖರ ಕದಂಬ ಮತ್ತಿತರರು ಉಪಸ್ಥಿತರಿದ್ದರು.



ಕಲಾಮಂದಿರದ ಕಿರುರಂಗಮಂದಿರದಲ್ಲಿ ಕದಂಬ ರಂಗವೇದಿಕೆ ವತಿಯಿಂದ ಆಯೋಜಿಸಿರುವ 4 ದಿನಗಳ ಕದಂಬ ರಂಗವೇದಿಕೆ 60ರ ಸಂಭ್ರಮಕ್ಕೆ ಕಿರುತರೆ ನಟ ಬಾಬು ಹಿರಣ್ಣಯ್ಯ ಗುರುವಾರ ಚಾಲನೆ ನೀಡಿದರು. ರಂಗಕರ್ಮಿಗಳಾದ ಪ್ರೊ.ಹೆಚ್.ಎಸ್.ಉಮೇಶ್, ಮಂಡ್ಯ ರಮೇಶ್, ರಾಜಶೇಖರ ಕದಂಬ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ಮತ್ತಿತರರಿದ್ದರು.

ನಾಟಕ ಪ್ರದರ್ಶನ...

ಚಾಮರಾಜನಗರದ ಶಾಂತಲಾ ತಂಡ ಕಲಾವಿದರು 'ಮೈ ತೆನ್ನು ಫಿರ್ ಮಿಲಾಂಗಿ' ನಾಟಕ ಪ್ರದರ್ಶಿಸಿದರು. ರೇಣುಕಾ ನಿಡಗುಂದಿ ಹಾಗೂ ಹಸನ್ ನಯೀಮ್ ಸುಕೋಡ ಅವರ ಮೂಲಪಠ್ಯ, ರಾಘವೇಂದ್ರ ಬರಕನಾಳು ವಿನ್ಯಾಸ, ನಟರಾಜ್ ಹೊನ್ನಾವಳಿ ರಂಗಪಠ್ಯ ನಿರ್ದೇಶನದಲ್ಲಿ ಕಲಾವಿದೆ ಚಿತ್ರ ವೆಂಕಟರಾಜು ಅವರ ಅಭಿನಯ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಪಠ್ಯ ಪುಸ್ತಕ ಪರಿಷ್ಕರಣೆ

ಹಿಂದೂ ವಿರೋಧಿ ಸಿದ್ದರಾಮಯ್ಯ ಸರ್ಕಾರ

ಬೆಂಗಳೂರು, ಜೂ.15– ಶಾಲಾ ಪಠ್ಯ ಪುಸ್ತಕ ಪರಿಷ್ಕರಣೆಗೆ ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮವನ್ನು ಮಾಜಿ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಖಂಡಿಸಿದ್ದಾರೆ. ಚಕ್ರವರ್ತಿ ಸೂಲಿಬೆಲೆ, ವೀರ ಸಾವರ್ಕರ್ ಪಠ್ಯವನ್ನು ತೆಗೆಯುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ನಾಗೇಶ್, ಕಾಂಗ್ರೆಸ್ ಪಕ್ಷಕ್ಕೆ ಮುಸ್ಲಿಂ ಮತಗಳು ಬೇಕಾಗಿದ್ದು, ಸಿದ್ದರಾಮಯ್ಯ ಅವರದ್ದು ಹಿಂದೂ ವಿರೋಧಿ ಸರ್ಕಾರವಾಗಿದೆ. ಅಲ್ಪಸಂಖ್ಯಾತರ ಮತಗಳನ್ನು ಸೆಳೆಯಲು ಎಲ್ಲವನ್ನೂ ರಾಜಕೀಯಗೊಳಿಸಲು ಬಯಸಿದ್ದು, ಮತ್ತೆ ಹಿಜಾಬ್ ಜಾರಿಗೊಳಿಸಬಹುದು ಎಂದರು.



ಇದಕ್ಕೂ ಮುನ್ನ ಮಾತನಾಡಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಪಠ್ಯ ಕ್ರಮದಲ್ಲಿ ಹೆಡಗೇವಾರ್ ಅವರ ಪಠ್ಯವನ್ನು ಕೈಬಿಡಲಾಗಿದೆ. ಹಿಂದಿನ ಸರ್ಕಾರ ಏನೆಲ್ಲಾ ಬದಲಾವಣೆಗಳನ್ನು ಮಾಡಿದ್ದರೂ, ಅದನ್ನು ನಾವು ಬದಲಾಯಿಸುತ್ತಿದ್ದೇವೆ ಎಂದರು.

ನಾಳೆ ವಿದ್ಯುತ್ ಅದಾಲತ್

ಮೈಸೂರು,ಜೂ.15– ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತದ ವತಿಯಿಂದ ಮೈಸೂರು ವಿ.ವಿ ಮೊಹಲ್ಲಾ ಕಾರ್ಯ ಮತ್ತು ಪಾಲನೆ ವ್ಯಾಪ್ತಿಯ ಚಾ.ವಿ.ಸ.ನಿ.ನಿ ಉಪವಿಭಾಗಗಳಾದ ವಿ.ವಿ ಮೊಹಲ್ಲಾ, ಹೂಟಗಳ್ಳಿ, ಕುವೆಂಪುನಗರ ಮತ್ತು ರಾಮಕೃಷ್ಣನಗರ ಉಪವಿಭಾಗಗಳಲ್ಲಿ ವಿದ್ಯುತ್ ಇಲಾಖೆಗೆ ಸಂಬಂಧಿತ ಸಮಸ್ಯೆಗಳು ಹಾಗೂ ಗ್ರಾಹಕರಿಗೆ ವಿದ್ಯುತ್ ಸುರಕ್ಷತಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಅಧ್ಯಕ್ಷತೆಯಲ್ಲಿ ಜೂ.17ರಂದು ಬೆಳಗ್ಗೆ 11 ಗಂಟೆಗೆ ವಿದ್ಯುತ್ ಅದಾಲತ್ ಹಮ್ಮಿಕೊಳ್ಳಲಾಗಿದೆ ಎಂದು ವಿ.ವಿ ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣಕ್ಕೆ ಐಎಸ್‌ಐ ನಂಟು

ಎನ್‌ಐಎ ತನಿಖೆ ವೇಳೆ ಆತಂಕಕಾರಿ ವಿಷಯ ಬೆಳಕಿಗೆ

ಮೈಸೂರು, ಜೂ.15(ಆರ್‌ಕೆ)–ಮಂಗಳೂರಲ್ಲಿ ನಡೆದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಹಿಂದೆ ಪಾಕಿಸ್ತಾನ ಮೂಲದ ಗುಪ್ತಚರ ಸಂಸ್ಥೆ ಐಎಸ್‌ಐ ಕೈವಾಡವಿದೆ ಎಂಬ ಆತಂಕಕಾರಿ ವಿಷಯ ಬೆಳಕಿಗೆ ಬಂದಿದೆ.



ಪ್ರಕರಣದ ಪ್ರಮುಖ ಆರೋಪಿ ಶಾರೀಕ್‌ಗೆ ಪಾಕ್ ಗುಪ್ತಚರ ಸಂಸ್ಥೆಯೊಂದಿಗೆ ಸಂಪರ್ಕವಿದ್ದು, ಆತನಿಗೆ ಸಿಮ್ ಕಾರ್ಡ್ ನೀಡಿದ್ದು, ಒಡಿಶಾ ಮೂಲದ ವ್ಯಕ್ತಿ ಎಂಬುದು ವಿಚಾರಣೆ ವೇಳೆ ಎನ್‌ಐಎ ಅಧಿಕಾರಿಗಳಿಗೆ ಮಹತ್ವದ ಸುಳಿವು ಸಿಕ್ಕಿದೆ ಎಂದು ತಿಳಿದು ಬಂದಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಮೊಹಮ್ಮದ್ ಶಾರೀಕ್‌ಗೆ ಸಿಮ್ ಪೂರೈಸಿದ್ದ ಒಡಿಶಾ ಮೂಲದ ವ್ಯಕ್ತಿಯನ್ನು ಬಂಧಿಸಿ ವಿಚಾರಣೆಗೊಳಪಡಿಸಿದಾಗ ಈ ಸ್ಫೋಟಕ ಮಾಹಿತಿ ಹೊರಬಿದ್ದಿದೆ. ಒಡಿಶಾ ಸ್ಪೆಷಲ್ ಟಾಸ್ಕ್‌ಫೋರ್ಸ್ ಪೊಲೀಸರು ಬಬ್ಬೂರ ಜಿಲ್ಲೆಯ ಬುರುಂಗಾ ಗ್ರಾಮದ ಪ್ರೀತಂಕಾರ ಎಂಬಾತನನ್ನು ಬಂಧಿಸಿದ್ದರು. ಆತ ಪ್ರೀ ಆಕ್ಟಿವೇಟೆಡ್ ಸಿಮ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್ ಅನ್ನು ಮೊಹಮ್ಮದ್ ಶಾರೀಕ್‌ಗೆ ಪೂರೈಸಿದ್ದ ಎಂಬುದು ತಿಳಿದು ಬಂದಿದೆಯಲ್ಲದೇ, ಕುಕ್ಕರ್ ಬಾಂಬ್ ಬ್ಲಾಸ್ಟ್ ಪ್ರಕರಣದಲ್ಲಿ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಸಂಪರ್ಕವಿರುವುದಾಗಿ ತಿಳಿದು ಬಂದಿದೆ.

ಪ್ರೀತಂಕಾರ್ ಪಾಕಿಸ್ತಾನದ ಐಎಸ್‌ಐ ಏಜೆಂಟ್ ಒಬ್ಬನಿಗೆ ಸಿಮ್‌ಕಾರ್ಡ್ ಮತ್ತು ಡೆಬಿಟ್ ಕಾರ್ಡ್ ಪೂರೈಸಿದ್ದ ನಂತರ ಅದೇ ಸಿಮ್‌ಕಾರ್ಡ್ ಅನ್ನು ಉಗ್ರ ಶಾರೀಕ್‌ಗೆ ನೀಡಿದ್ದ ಎಂದು ರಾಷ್ಟ್ರೀಯ ತನಿಖಾ ದಳಕ್ಕೆ ಒಡಿಶಾ ಸ್ಪೆಷಲ್ ಟಾಸ್ಕ್‌ಫೋರ್ಸ್ ತಂಡವು ಮಾಹಿತಿ ನೀಡಿದೆ. ಪ್ರೀತಂಕಾರ್ ಭಾರತದಲ್ಲಿರುವ ಪಾಕಿಸ್ತಾನದ ಐಎಸ್‌ಐ ಏಜೆಂಟರುಗಳೊಂದಿಗೆ ಸಂಪರ್ಕ ಹೊಂದಿದ್ದು, ರಾಂಚಿ ಹಾಗೂ ಪಾಟ್ನಾದಲ್ಲಿ ಐಎಸ್‌ಐ ಏಜೆಂಟರುಗಳನ್ನು ಭೇಟಿಯಾಗಿ ಸಿಮ್ ಕಾರ್ಡ್ ನೀಡಿದ್ದನಲ್ಲದೆ, ಸೈಬರ್ ವಂಚನೆಗೆ ಓಟಿಪಿ ಯನ್ನೂ ಮಾರಾಟ ಮಾಡಿದ್ದ ಎನ್ನ ಲಾಗಿದೆ. ಉಗ್ರ ಶಾರೀಕ್ ಖಾತೆಗೆ ಬೇನಾಮಿ ಹೆಸರಲ್ಲಿ ಪಾಕಿಸ್ತಾನದಿಂದ ಹಣ ವರ್ಗಾವಣೆ ಮಾಡುತ್ತಿದ್ದ.

2022ರ ನವೆಂಬರ್ 19ರಂದು ಮಂಗಳೂರಿನ ನಾಗುರಿ ಬಳಿ ಹೋಗುತ್ತಿದ್ದ ಆಟೋದಲ್ಲಿ ಕುಕ್ಕರ್ ಬಾಂಬ್ ಸ್ಫೋಟವಾಗಿತ್ತು. ತನಿಖೆ ಕೈಗೊಂಡಿದ್ದ ಎನ್‌ಐಎ ಅಧಿಕಾರಿಗಳು ಶಿವಮೊಗ್ಗ ಮೂಲದ ಮೊಹಮದ್ ಶಾರೀಕ್‌ನನ್ನು ಬಂಧಿಸಿದ್ದರು. ಆತ ಮೈಸೂರಿನ ಮೇಟಗಳ್ಳಿ ಠಾಣಾ ವ್ಯಾಪ್ತಿಯ ಲೋಕನಾಯಕನಗರದ ಮನೆಯೊಂದರ ಕೊಠಡಿಯನ್ನು ಬಾಡಿಗೆಗೆ ಪಡೆದು ಕುಕ್ಕರ್ ಬಾಂಬ್ ತಯಾರಿಸಿ ಬಸ್ಸಿನಲ್ಲಿ ಮಂಗಳೂರಿಗೆ ಕೊಂಡೊಯ್ದಿದ್ದ ಎಂಬುದು ಆತನನ್ನು ವಿಚಾರಣೆಗೊಳಪಡಿಸಿದಾಗ ಬಹಿರಂಗವಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಎನ್‌ಐಎ ಹಾಗೂ ಮಂಗಳೂರು ಪೊಲೀಸರು ಮೈಸೂರಿಗೆ ಬಂದು ಶಾರಿಕ್ ವಾಸವಿದ್ದ ಲೋಕನಾಯಕನಗರದ ಕೊಠಡಿಯನ್ನು ಪರಿಶೀಲಿಸಿದಾಗ ಕುಕ್ಕರ್ ಬಾಂಬ್ ತಯಾರಿಸಲು ಬಳಸಿದ್ದ ರಸಾಯನಿಕ ಹಾಗೂ ಸಾಮಗ್ರಿಗಳು ಪತ್ತೆಯಾಗಿದ್ದವು. ಸ್ಥಳ ಮಹಜರು ನಡೆಸಿದ ಅಧಿಕಾರಿಗಳು ಅಲ್ಲಿ ದೊರೆತ ಸಾಮಗ್ರಿ ವಶಪಡಿಸಿಕೊಂಡಿದ್ದರು ಎಂದು ಮೇಟಗಳ್ಳಿ ಠಾಣೆ ಇನ್ಸ್‌ಪೆಕ್ಟರ್ ಪಿ.ಎಸ್. ದಿವಾಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಈಗ ಸದರಿ ಕೊಠಡಿಯನ್ನು ಮನೆ ಮಾಲೀಕರು ಬೇರೆಯವರಿಗೆ ಬಾಡಿಗೆಗೆ ನೀಡಿದ್ದಾರೆ. ಪ್ರಕರಣ ಸಂಬಂಧ ನಂತರ ಆ ಕೊಠಡಿಯಲ್ಲಿ ಪೊಲೀಸರು ಮತ್ತೆ ಮಹಜರು ನಡೆಸಿಲ್ಲ ಹಾಗೂ ಆರೋಪಿಗೆ ಐಎಸ್‌ಐ ಲಿಂಕ್ ಇರುವ ಬಗ್ಗೆ ಅಧಿಕಾರಿಗಳ್ಯಾರೂ ಮೈಸೂರಿಗೆ ಬಂದಿಲ್ಲ ಎಂದರು.

ಚೆಸ್ಕಾಂ ಸಾರ್ವಜನಿಕ ಸಂಪರ್ಕ ಸಭೆ

ಮೈಸೂರು, ಜೂ.15(ಬಿಎಲ್‌ಯು)– ಮೈಸೂರಿನ ವರುಣ ಗ್ರಾಮದಲ್ಲಿ ಜೂನ್ 17ರಂದು ಚೆಸ್ಕಾಂ ಸಾರ್ವಜನಿಕ ಸಂಪರ್ಕ ಸಭೆ ಆಯೋಜಿಸಿದೆ. ವರುಣ ಗ್ರಾಮದ ಡಾ.ಅಂಬೇಡ್ಕರ್ ಭವನದಲ್ಲಿ ಅಂದು ಬೆಳಗ್ಗೆ 11 ಗಂಟೆಗೆ ಸಾರ್ವಜನಿಕ ಸಂಪರ್ಕ ಸಭೆ ನಡೆಯಲಿದ್ದು, ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು ಸೇರಿದಂತೆ ಇತರೆ ಅಧಿಕಾರಿಗಳು ಭಾಗವಹಿಸಲಿದ್ದಾರೆ. ವರುಣ ವ್ಯಾಪ್ತಿಯ ವಿದ್ಯುತ್ ಸಮಸ್ಯೆಗಳನ್ನು ಸಾರ್ವಜನಿಕರು ಅಂದಿನ ಸಭೆಯಲ್ಲಿ ತಿಳಿಸಿ ಪರಿಹಾರ ಕಂಡುಕೊಳ್ಳಬಹುದು ಎಂದು ಚೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರೋತ್ಸಾಹ ಧನಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ಮೈಸೂರು,ಜೂ.15– 2023–24ನೇ ಸಾಲಿನಲ್ಲಿ ಪಿ.ಯು.ಸಿ, ಪದವಿ, ಸ್ನಾತಕೋತ್ತರ ಪದವಿ, ಕೃಷಿ, ಎಂಜಿನಿಯರಿಂಗ್, ಪಶು ವೈದ್ಯಕೀಯ ಕೋರ್ಸ್‌ಗಳಲ್ಲಿ ಮೆಟ್ರಿಕ್ ನಂತರದ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಮಂಜೂರು ಮಾಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂ.31 ಕೊನೆಯ ದಿನ. www.sw.kar.nic.in ಅರ್ಜಿ ಸಲ್ಲಿಸಿದ 4 ದಿನಗಳೊಳಗೆ ಡೌನ್ಲೋಡ್ ಮಾಡಿದ ಅರ್ಜಿ ಮತ್ತು ಅಗತ್ಯ ದಾಖಲೆಗಳ ಪ್ರತಿಯೊಂದಿಗೆ ಪಡುವಾರಹಳ್ಳಿಯಲ್ಲಿನ ಡಾ:ಬಾಬು ಜಗಜೀವನರಾಂ ಭವನ ಕಟ್ಟಡದ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಅಥವಾ ಸಂಬಂಧಿತ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂ:0821–2344661 ನ್ನು ಸಂಪರ್ಕಿಸಬಹುದು.

ನೀವು ಕೆಲಸ ಕೊಡಿ, ನಾನು ರಿಪೋರ್ಟ್ ಕಾರ್ಡ್ ನೀಡುತ್ತೇನೆ

ಅಭಿನಂದನಾ ಸಮಾರಂಭದಲ್ಲಿ ಕೆ.ಆರ್.ಕ್ಷೇತ್ರ ಶಾಸಕ ಶ್ರೀವತ್ಸ ಘೋಷಣೆ

ಮೈಸೂರು, ಜೂನ್ 15(ಸಿಎನ್)– ನೀವು ನನಗೆ ಕೆಲಸ ಕೊಡಿ, ಆ ಕೆಲಸವನ್ನು ಸಂಪೂರ್ಣವಾಗಿ ಮುಗಿಸಿ, ನಿಮ್ಮ ಮುಂದೆ ರಿಪೋರ್ಟ್ ಕಾರ್ಡ್ ತಂದಿಡುತ್ತೇನೆ. ನನ್ನಿಂದ ಕೆಲಸ ಮಾಡಿಸಿಕೊಳ್ಳುವ ಜವಾಬ್ದಾರಿ ಕ್ಷೇತ್ರದ ಜನರ ಮೇಲಿದೆ ಎಂದು ಕೆಆರ್ ವಿಧಾನಸಭಾ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು.

ನಗರದ ನಾರಾಯಣ ಶಾಸ್ತ್ರಿ ರಸ್ತೆಯ ಹೊಯ್ಸಳ ಕರ್ನಾಟಕ ಸಂಘದ ಶತಮಾನೋತ್ಸವ ಭವನದಲ್ಲಿ, ಹೊಯ್ಸಳ ಕರ್ನಾಟಕ ಸಂಘ, ಹೊಯ್ಸಳ ಕರ್ನಾಟಕ ಸಂಘ ಚಾರಿಟಬಲ್ ಟ್ರಸ್ಟ್ ಹಾಗೂ ವಿಪ್ರ ವಕೀಲರ ವೇದಿಕೆಯಿಂದ ಗುರುವಾರ ಶಾಸಕರಿಗೆ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

ಚುನಾವಣೆಯಲ್ಲಿ ಗೆಲುವು ಸಾಧಿಸಿ ನಿನ್ನೆಗೆ ಒಂದು ತಿಂಗಳಾಗಿದೆ. ಆದರೂ ಅಭಿನಂದನಾ, ಗೌರವ ಸಮರ್ಪಣಾ ಕಾರ್ಯಕ್ರಮ ಜರುಗುತ್ತಿವೆ. ಈ ಗೆಲುವಿನ ಶ್ರೇಯ ಕ್ಷೇತ್ರದ ಜನತೆ ಹಾಗೂ ವಿಪ್ರ ಸಮುದಾಯ ಮುಖಂಡ ಡಿ.ಟಿ.ಪ್ರಕಾಶ್ ಹಾಗೂ ಸಮುದಾಯದವರಿಗೆ ಸಲ್ಲಬೇಕು. ಚುನಾವಣೆ ಸಂದರ್ಭ ನಾನು ಸುಮಾರು 20 ಸಮುದಾಯದ ಪ್ರಮುಖರನ್ನ ಭೇಟಿ ಮಾಡಿ ನನ್ನನ್ನು ಗೆಲ್ಲಿಸುವಂತೆ ಕೋರಿದೆ. ಅವರು ಸಹ ನನ್ನ ಗೆಲುವಿಗೆ ಸಹಕರಿಸಿದ್ದಾರೆ ಎಂದು ಶ್ರೀವತ್ಸ ಸ್ಮರಿಸಿದರು.

ಕ್ಷೇತ್ರದ ಮತದಾರರ ನಿರೀಕ್ಷೆ ಸಾಕಷ್ಟಿದೆ, ಪ್ರಚಾರದ ವೇಳೆ ಅನೇಕ ರಸ್ತೆ ಹಾಳಾಗಿದ್ದನ್ನು ಗಮನಿಸಿದ್ದೇನೆ. ಜಿಲ್ಲಾಧಿಕಾರಿಗಳ ವಿಶೇಷ ಕಾಳಜಿಯಿಂದಾಗಿ ಸುಮಾರು 1.30 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾರ್ಯ ಆರಂಭಿಸಿದ್ದೇವೆ. ಮಳೆಗಾಲ ಆರಂಭವಾಗುವುದರಿಂದ ಹೂಳೆತ್ತುವ ಕೆಲಸ ಕೂಡ ಕೈಗೆತ್ತಿಕೊಂಡಿದ್ದೇವೆ ಎಂದು ಮಾಹಿತಿ ನೀಡಿದರು.

ಕ್ಷೇತ್ರ ವ್ಯಾಪ್ತಿಯ ಆರ್‌ಟಿಓ ಸರ್ಕಲ್‌ನಿಂದ ರಸ್ತೆ ಡಾಂಬರೀಕರಣಕ್ಕೆ ಚಾಲನೆ ನೀಡಲಾಗಿತ್ತು. ಅಧಿಕಾರಿಗಳು, ಸಿಬ್ಬಂದಿಗಳ ಚುರುಕು ಕಾರ್ಯ ಪ್ರಶಂಸೆಗೆ ವ್ಯಕ್ತವಾಗಿದೆ. ಎಲ್ಲಾ ರೀತಿಯಲ್ಲೂ ಉತ್ತಮ ಸ್ಪಂದನೆ ಸಿಗುತ್ತಿದೆ ಎಂದರು.

ಬಹು ಮುಖ್ಯವಾಗಿ ಕ್ಷೇತ್ರದ ಜೆ.ಪಿ ನಗರ ಭಾಗದಲ್ಲಿರುವ ತ್ಯಾಜ್ಯ ಸಂಗ್ರಹ ಘಟಕದಲ್ಲಿನ 70 ಟನ್ ಕಸ ತೆರವುಗೊಳಿಸಬೇಕಿದೆ. ಅಲ್ಲಿನ ನಿವಾಸಿಗಳಿಗೆ ಸಾಕಷ್ಟು ತೊಂದರೆಯಾಗುತ್ತಿದ್ದು, ಶೀಘ್ರದಲ್ಲೇ ತ್ಯಾಜ್ಯವನ್ನು ಸ್ಥಳಾಂತರ ಮಾಡಲಾಗುವುದು ಎಂದು ಶಾಸಕರು ಭರವಸೆ ನೀಡಿದರು.



ಸದ್ಯದಲ್ಲೇ ನನ್ನ ಕಚೇರಿ ಶಾಸಕರ ಭವನಕ್ಕೆ ಸ್ಥಳಾಂತರವಾಗುವ ಸಾಧ್ಯತೆ ಇದೆ. ದಯವಿಟ್ಟು ನಿಮ್ಮ ಕುಂದು–ಕೊರತೆ ಏನೇ ಇದ್ದರೂ ನನ್ನ ಗಮನಕ್ಕೆ ತಂದು ಕೆಲಸ ಮಾಡಿಸಿಕೊಳ್ಳಬೇಕು. ಅಲ್ಲದೇ ಹೊಯ್ಸಳ ಸಂಘದ ಸಭೆಯನ್ನು ಪ್ರತಿ 3 ತಿಂಗಳಿಗೊಮ್ಮೆ ಆಯೋಜಿಸಬೇಕು. ನಾನು ಮಾಡಿದ ಕೆಲಸದ ಬಗ್ಗೆ ರಿಪೋರ್ಟ್ ಕಾರ್ಡ್ ಸಹಿತ ನಿಮಗೆ ಮಾಹಿತಿ ನೀಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಎಚ್. ಆರ್.ಸುಂದರೇಶ್, ಹೊಯ್ಸಳ ಕರ್ನಾಟಕ ಚಾರಿಟಬಲ್ ಟ್ರಸ್ಟ್ ಮುಖ್ಯಸ್ಥ ನಾರಾಯಣ ಶಾಸ್ತ್ರಿ, ವಿಪ್ರ ವಕೀಲರ ವೇದಿಕೆ ಅಧ್ಯಕ್ಷ ಸಂಗಮೇಶ್, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹೊಯ್ಸಳ ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀನಿಧಿ, ಶಾಸಕ ಶ್ರೀವತ್ಸ ಸಹೋದರ ಲಕ್ಷ್ಮಿನಾರಾಯಣ್, ಶಿವಶಂಕರ್ ಮತ್ತಿತರರಿದ್ದರು.


ಕಾಂಗ್ರೆಸ್ ವಿರುದ್ಧ ಹೋರಾಟಕ್ಕೆ ಸಜ್ಜು

ರಾಜ್ಯದಲ್ಲಿ ಈಗಾಗಲೇ ವಿದ್ಯುತ್ ದರ ಹೆಚ್ಚಳದಿಂದ ಜನ ತತ್ತರಿಸಿದ್ದಾರೆ. ಇನ್ನು 15 ದಿನದೊಳಗೆ ಎರಡು ಪದಾರ್ಥಗಳ ಬೆಲೆ ಏರಿಕೆ ಆಗಲಿದೆ ಎಂಬ ಮಾಹಿತಿ ಇದೆ. ಕಾಂಗ್ರೆಸ್ ಉಚಿತ ಭಾಗ್ಯಗಳನ್ನೇನೋ ಘೋಷಿಸಿದೆ ಆದರೆ ಜಾರಿಗೊಳಿಸಲು ಸಾಧ್ಯವಾಗುತ್ತಿಲ್ಲ ಹಾಗಾಗಿ ಬೆಲೆ ಏರಿಕೆ ಮಾರ್ಗ ಅನುಸರಿಸಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಯಾದ ನಿರ್ಧಾರಗಳನ್ನು ಹಿಂಪಡೆಯುವ ಹುನ್ನಾರ ನಡೆಸಿದೆ. ಇದೇ ರೀತಿ ಮುಂದುವರಿದಲ್ಲಿ ಎರಡ್ಮೂರು ದಿನದಲ್ಲಿ ಹೋರಾಟದ ಬಗ್ಗೆ ಮಾಹಿತಿ ನೀಡಲಿದ್ದೇವೆ.

–ಟಿ.ಎಸ್.ಶ್ರೀವತ್ಸ, ಶಾಸಕ

ಮೈಸೂರು ಮಿತ್ರ ಶುಕ್ರವಾರ 16 ಜೂನ್ 2023

ಬೇಡಿಕೆ ಈಡೇರಿಕೆಗೆ ಜಿಪಂಗೆ ಕೃಷಿ ಕೂಲಿಕಾರರಿಂದ ಮುತ್ತಿಗೆ



ಮಂಡ್ಯ, ಜೂ.15– ನರೇಗಾ ಯೋಜನೆಯಡಿ ಕೆಲಸ ನೀಡಬೇಕು, ಬಾಕಿ ಕೂಲಿ ಪಾವತಿಸಬೇಕು, 94ಸಿ ಅಡಿ ಹಕ್ಕುಪತ್ರ ಹಾಗೂ ನಿವೇಶನ ರಹಿತರಿಗೆ ನಿವೇಶನ, ಕೂಲಿಕಾರರಿಗೆ ಬ್ಯಾಂಕ್ ಸಾಲ ನೀಡಬೇಕು ಎಂದು ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಸದಸ್ಯರು ಗುರುವಾರ ಜಿಪಂ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಸಂಜಯ ವೃತ್ತದಿಂದ ಜಿಪಂವರೆಗೆ ಬೃಹತ್ ಮೆರವಣಿಗೆಯಲ್ಲಿ ತೆರಳಿದ ಪ್ರತಿಭಟನಾಕಾರರು, ಅಧಿಕಾರಿಗಳು ಹಾಗೂ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ರಾಜ್ಯಾಧ್ಯಕ್ಷ ಎಂ.ಪುಟ್ಟಮಾದು ಮಾತನಾಡಿ, ನರೇಗಾ ಯೋಜನೆಯಡಿ ಜಿಲ್ಲೆಯ ಎಲ್ಲಾ ಕೂಲಿಕಾರರಿಗೆ ನಿಗದಿತ ಸಮಯದೊಳಗೆ ಕೆಲಸ ನೀಡಿ ಕಾಲಮಿತಿಯೊಳಗೆ ಕೂಲಿ ಪಾವತಿಸಬೇಕು. ಈಗ ನೀಡುತ್ತಿರುವ ಕೂಲಿ ಸಾಲದಾಗಿದ್ದು, 600 ರೂ. ಕೂಲಿ ನೀಡಬೇಕು. ನರೇಗಾದಲ್ಲಿ ಅನುಸರಿಸುತ್ತಿರುವ ಅವೈಜ್ಞಾನಿಕ ನೀತಿ ಕೈಬಿಟ್ಟು ಬಡವರಿಗೆ ಅನುಕೂಲವಾಗುವಂತೆ ಯೋಜನೆ ಅನುಷ್ಠಾನ ಮಾಡಬೇಕು. ಸರ್ಕಾರಿ ಭೂಮಿಯಲ್ಲಿ ವಾಸಿಸುತ್ತಿರುವ ಬಡವರಿಗೆ ತಕ್ಷಣ ಹಕ್ಕುಪತ್ರ ನೀಡಬೇಕು. ನಿವೇಶನ ರಹಿತರಿಗೆ ನಿವೇಶನ ಒದಗಿಸಬೇಕು. ಕೂಲಿಕಾರರ ಆರ್ಥಿಕಾಭಿವೃದ್ಧಿಗೆ ಬ್ಯಾಂಕುಗಳಿಂದ ಸಾಲ ಸಿಗುವಂತೆ ಮಾಡಿ, ಅವರಿಗೆ ಜೀವನ ಭದ್ರತೆ ಒದಗಿಸಬೇಕು. ಜಿಲ್ಲೆಯಲ್ಲಿ ಮೈಕ್ರೋ ಫೈನಾನ್ಸ್ ಹಾವಳಿ ಹೆಚ್ಚಾಗಿದ್ದು, ಅದನ್ನು ತಡೆಗಟ್ಟಬೇಕು. ಗ್ರಾಮೀಣ ಭಾಗದಲ್ಲಿ ಶಾಸಕರು, ಸಂಸದರು ಹಾಗೂ ವಿವಿಧ ಯೋಜನೆಗಳ ಅನುದಾನಗಳಲ್ಲಿ ನಿರ್ಮಾಣಗೊಂಡಿರುವ ಶುದ್ಧ ಕುಡಿಯುವ ನೀರಿನ ಘಟಕಗಳು ಕೆಟ್ಟು ನಿಂತಿದ್ದು, ಬಳಕೆಗೆ ಬಾರದಂತಾಗಿದೆ. ಅವುಗಳನ್ನು ದುರಸ್ತಿಗೊಳಿಸಬೇಕು ಎಂದು ಒತ್ತಾಯಿಸಿದರು.

ಜಲಜೀವನ್ ಮಿಷನ್ ಯೋಜನೆಯಡಿ ಮೀಟರಿಕರಣ ಮಾಡಬಾರದು. ವೃದ್ಧಾಪ್ಯ, ವಿಧವಾ, ಅಂಗವಿಕಲರ ವೇತನ ಸಮರ್ಪಕವಾಗಿ ಜಾರಿಯಾಗದೇ ಫಲಾನುಭವಿಗಳು ಪರಿತಪಿಸುವಂತಾಗಿದೆ. ಅವರ ಜೀವನ ನಿರ್ವಹಣೆ ಕಷ್ಟವಾಗಿದೆ. ಆದ್ದರಿಂದ ತಕ್ಷಣ ಸಾಮಾಜಿಕ ಭದ್ರತಾ ಯೋಜನೆ ಪಿಂಚಣಿ ವಿತರಿಸಬೇಕು. ಪ್ರತಿ ಹಳ್ಳಿಗೊಂದು ಸ್ಮಶಾನ ಕಲ್ಪಿಸಬೇಕು ಎಂದು ಆಗ್ರಹಿಸಿದರು.

2 ತಿಂಗಳ ಹಿಂದೆಯೇ ಜಿಪಂ ಸಿಇಓಗೆ ಕೂಲಿಕಾರರ ಬೇಡಿಕೆ ಈಡೇರಿಸುವಂತೆ ಮನವಿ ಸಲ್ಲಿಸಲಾಗಿತ್ತು. ಆದರೆ ಮನವಿಗೆ ಸ್ಪಂದಿಸದ ಅವರು ಕೂಲಿಕಾರರ ಸಮಸ್ಯೆಗಳನ್ನು ಕಡೆಗಣಿಸಿದ್ದಾರೆ. ತಕ್ಷಣ ಸಮಸ್ಯೆ ಬಗೆಹರಿಸದಿದ್ದರೆ ಪ್ರತಿ ಹಳ್ಳಿಗಳಲ್ಲೂ ತೀವ್ರ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಹನುಮೇಶ, ರಾಜ್ಯ ಸಮಿತಿ ಸದಸ್ಯ ಬಿ.ಎ.ಮಧುಕುಮಾರ್, ಮಳವಳ್ಳಿ ತಾಲೂಕು ಅಧ್ಯಕ್ಷ ಬಿ.ಎಂ. ಶಿವಮಲ್ಲಯ್ಯ, ತಾಲೂಕು ಕಾರ್ಯದರ್ಶಿ ಸರೋಜಮ್ಮ, ಮದ್ದೂರು ತಾಲೂಕು ಕಾರ್ಯದರ್ಶಿ ಟಿ.ಪಿ.ಅರುಣ್‌ಕುಮಾರ್, ಜಿಲ್ಲಾ ಉಪಾಧ್ಯಕ್ಷ ಕೆ.ಬಸವರಾಜು, ಎನ್.ಸುರೇಂದ್ರ, ಮಂಡ್ಯ ತಾಲೂಕು ಅಧ್ಯಕ್ಷ ಅಮಾಸಯ್ಯ, ಕಾರ್ಯದರ್ಶಿ ಆರ್.ರಾಜು, ಮುಖಂಡರಾದ ಶುಭಾವತಿ, ರಾಮಯ್ಯ, ಜಿ.ಎಚ್. ಗಿರೀಶ್, ಗೋಪಾಲ್, ಕೆ.ಎಚ್.ಪುಟ್ಟಮಾದೇಗೌಡ ಸೇರಿದಂತೆ ಇತರರಿದ್ದರು.

ಮೈಷುಗರ್: ಬಾಯ್ಲರ್‌ಗೆ ಇಂದು ಅಗ್ನಿಸ್ಪರ್ಶ

ಮಂಡ್ಯ, ಜೂ.15– ಮೈಸೂರು ಸಕ್ಕರೆ ಕಾರ್ಖಾನೆ(ಮೈಷುಗರ್)ಯಲ್ಲಿ ಪ್ರಸಕ್ತ ಸಾಲಿನ ಕಬ್ಬು ಅರೆಯುವ ಕಾರ್ಯಕ್ಕೆ ಜೂ.16ರಂದು ಸಾಂಕೇತಿಕ ಚಾಲನೆ ದೊರೆಯಲಿದೆ ಆಷಾಢ ಮಾಸದ ಹಿನ್ನೆಲೆಯಲ್ಲಿ ಕಾರ್ಖಾನೆ ಬಾಯ್ಲರ್‌ಗೆ ಬೆಂಕಿ ಹಾಕಲಾಗುತ್ತಿದ್ದು, ಮುಂದಿನ ಒಂದು ವಾರ ಅಥವಾ 15 ದಿನಗಳೊಳಗೆ ಕಬ್ಬು ಅರೆಯುವಿಕೆ ಕಾರ್ಯಾಚರಣೆ ವಿಧ್ಯುಕ್ತವಾಗಿ ಆರಂಭವಾಗಲಿದೆ.

ಗುರುವಾರವೇ ಮೈಷುಗರ್ ಬಾಯ್ಲರ್‌ಗೆ ಬೆಂಕಿ ಹಾಕುವ ಕಾರ್ಯಕ್ರಮ ನಿಗದಿಯಾಗಿತ್ತು ಕೊನೆ ಕ್ಷಣದಲ್ಲಿ ಕಾರ್ಯಕ್ರಮ ರದ್ದುಗೊಂಡಿತ್ತು. ಹಾಗಾಗಿ ಶುಕ್ರವಾರ ಸಕ್ಕರೆ ಸಚಿವ ಶಿವಾನಂದ ಪಾಟೀಲ್ ಅವರು ಬಾಯ್ಲರ್‌ಗೆ ಪೂಜೆ ಸಲ್ಲಿಸಿ ಬೆಂಕಿ ಹಾಕಲಿದ್ದಾರೆ. ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಜಿಲ್ಲೆಯ ಎಲ್ಲಾ ಶಾಸಕರು, ಇತರರಿರುವರು.

ನೀಟ್ ಪರೀಕ್ಷೆ: ಯಶ್ವಂತ್‌ಗೌಡ ಜಿಲ್ಲೆಗೆ ಟಾಪರ್



ಮಂಡ್ಯ, ಜೂ.15– 2023ರ ನೀಟ್ ಪರೀಕ್ಷೆಯಲ್ಲಿ ಯಶ್ವಂತ್ ಡಿ.ಗೌಡ ಮಂಡ್ಯ ಜಿಲ್ಲೆಗೆ ಟಾಪರ್ ಆಗಿ ಹೊರ ಹೊಮ್ಮಿದ್ದಾರೆ.

ಮದ್ದೂರು ತಾಲೂಕಿನ ಕೊಪ್ಪ ಗ್ರಾಮದ ಯಶ್ವಂತ್ ಮಂಡ್ಯ ಚೈತನ್ಯ ಶಾಲೆಯಲ್ಲಿ ಪ್ರೌಢಶಿಕ್ಷಣ ಪಡೆದು ಬೆಂಗಳೂರಿನ ಚೈತನ್ಯ ಕಾಲೇಜಿನಲ್ಲಿ ಪಿಯು ಶಿಕ್ಷಣ ಪಡೆದಿದ್ದು, ನೀಟ್ ಪರೀಕ್ಷೆಯಲ್ಲಿ 720ಕ್ಕೆ 675 ಅಂಕ ಪಡೆದು ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಯನ್ನು ಶಾಲೆ ಆಡಳಿತ ಪರವಾಗಿ ಪ್ರಾಂಶುಪಾಲೆ ಮೇರಿ ಸ್ಟೇಲಾ ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಯಶ್ವಂತ್, ಚೈತನ್ಯ ಶಾಲೆಯಲ್ಲಿ 6ರಿಂದ 10ನೇ ತರಗತಿವರೆಗೆ ದೊರಕುತ್ತಿರುವ ಟೆಕ್ನೋ ಪಠ್ಯಕ್ರಮದಿಂದ ಈ ವರ್ಷದ ನೀಟ್ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಲು ಸಾಧ್ಯವಾಯಿತು ಎಂದರು.

ಯಶ್ವಂತ್‌ನನ್ನು ಚೈತನ್ಯ ಸಂಸ್ಥೆ ಸಿಇಓ ಸುನೀಲ್, ಎಜಿಎಂ ವಂಶಿಕೃಷ್ಣ, ಸಂಚಾಲಕ ಅನುಷ್, ಚೈತನ್ಯ ಕಾಲೇಜಿನ ಪ್ರಾಂಶುಪಾಲ ಸಂದೀಪ್ ಅಭಿನಂದಿಸಿದರು.

ನಾಳೆ ಸಂಪರ್ಕ ಸಭೆ

ಮಂಡ್ಯ, ಜೂ.15– ಮಂಡ್ಯ ತಾಲೂಕು ವ್ಯಾಪ್ತಿಯ ವಿದ್ಯುತ್ ಸಮಸ್ಯೆಗಳಿಗೆ ತಕ್ಷಣ ಪರಿಹಾರ ನೀಡಲು ಜೂ.17 ರಂದು ಬೆಳಗ್ಗೆ 11 ಗಂಟೆಗೆ ತಾಲೂಕಿನ ಮರಡಿಪುರದಲ್ಲಿ ವಿದ್ಯುತ್ ಸಮಸ್ಯೆಗಳ ಗ್ರಾಹಕರ ಸಂಪರ್ಕ ಸಭೆ ಹಮ್ಮಿಕೊಳ್ಳಲಾಗಿದೆ.

ಮಂಡ್ಯ ಸೆಸ್ಕ್ ವಿಭಾಗದ ಕಾರ್ಯಪಾಲಕ ಅಭಿಯಂತರ ರಮೇಶ್ ನೇತೃತ್ವದಲ್ಲಿ ಗ್ರಾಹಕರ ಸಂಪರ್ಕ ಸಭೆ ನಡೆಯಲಿದ್ದು, ವಿದ್ಯುತ್ ಗ್ರಾಹಕರು, ಸಾರ್ವಜನಿಕರು ಸಭೆಗೆ ಹಾಜರಾಗಿ ವಿದ್ಯುತ್ ಸಮಸ್ಯೆಗಳ ಬಗ್ಗೆ ಚರ್ಚಿಸಿ ಬಗೆಹರಿಸಿಕೊಳ್ಳಿ ಎಂದು ಸೆಸ್ಕ್ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನದ ಮೀಸಲು ಪ್ರಕಟ



ಪಾಂಡವಪುರ, ಜೂ.15– ಪಟ್ಟಣದ ಲಾಲ್ ಬಹದ್ದೂರ್ ಚಿತ್ರಮಂದಿರದಲ್ಲಿ ಗುರುವಾರ ಮಧ್ಯಾಹ್ನ ತಾಲೂಕಿನ 24 ಗ್ರಾಪಂಗಳ 2ನೇ ಅವಧಿಯ ಬಾಕಿ 30 ತಿಂಗಳ ಅಧಿಕಾರವಧಿಗಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳ ಮೀಸಲು ಪ್ರಕ್ರಿಯೆ ನಡೆಸಲಾಯಿತು.

ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ, ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜು ಹಾಗೂ ಉಪ ವಿಭಾಗಾಧಿಕಾರಿ ನಂದೀಶ್ ನೇತೃತ್ವದಲ್ಲಿ ನಡೆದ ಮೀಸಲಾತಿ ನಿಗದಿ ಕಾರ್ಯಕ್ರಮದಲ್ಲಿ ತಾಲೂಕಿನ 24 ಗ್ರಾಪಂಗಳ ಪೈಕಿ ಶೇ.50ರಷ್ಟು ಮಹಿಳೆಯರಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷ ಸ್ಥಾನ ಮೀಸಲಿರಿಸಿ, ಗ್ರಾಪಂ ಸದಸ್ಯರ ಸಮಕ್ಷಮದಲ್ಲಿ ಮೀಸಲಾತಿ ನಿಗದಿಪಡಿಸಲಾಯಿತು.

ರಾಜ್ಯ ಚುನಾವಣಾ ಆಯೋಗ ಅಭಿವೃದ್ಧಿ ಪಡಿಸಿರುವ ಜಿಪಿಪಿವಿಪಿ ಅಪ್ಲಿಕೇಷನ್ ತಂತ್ರಾಂಶದಲ್ಲಿ ಜಿಪಂ ರಾಷ್ಟ್ರೀಯ ಮಾಹಿತಿ ಕೇಂದ್ರ ಮೂಲಕ 1993ರ ರಿಂದ 2020ರವರೆಗಿನ 9 ಅವಧಿಗಳಲ್ಲಿ ನಿಗದಿಪಡಿರುವ ಮೀಸಲು ವಿವರಗಳನ್ನು ಅಪ್‌ಲೋಡ್ ಮಾಡಿ ಅದರಂತೆ ಮೀಸಲಾತಿ ಪ್ರಕಟಿಸಲಾಯಿತು.

ತಾಲೂಕಿನಲ್ಲಿ ಪರಿಶಿಷ್ಟ ಪಂಗಡದವರು ಇಲ್ಲದ ಕಾರಣ ಅವರನ್ನು ಹೊರತುಪಡಿಸಿ ಮೀಸಲಾತಿ ನಿಗದಿ ಪಡಿಸಲಾಯಿತು. ಅನುಸೂಚಿತ ಜಾತಿ 3 ಗ್ರಾಪಂಗಳ ಪೈಕಿ 2 ಮಹಿಳೆಯರಿಗೆ, ಹಿಂದುಳಿದ ವರ್ಗ 'ಎ' 6 ಗ್ರಾಪಂ ಪೈಕಿ 3 ಮಹಿಳೆಯರಿಗೆ, ಹಿಂದುಳಿದ ವರ್ಗ'ಬಿ' ಮೀಸಲಾತಿ 2 ಗ್ರಾಪಂಗಳ ಪೈಕಿ 1 ಮಹಿಳೆಯರಿಗೆ, ಸಾಮಾನ್ಯ ವರ್ಗ 13 ಗ್ರಾಪಂಗಳ ಪೈಕಿ 6 ಮಹಿಳೆಯರಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನ ಮೀಸಲಿಡಲಾಯಿತು.

ಮೀಸಲಾತಿಗೆ ಆಯ್ಕೆಯಾದ ಗ್ರಾಪಂಗಳು

ಗ್ರಾಪಂ	ಅಧ್ಯಕ್ಷ ಸ್ಥಾನ	ಉಪಾಧ್ಯಕ್ಷ ಸ್ಥಾನ
ಅರಳಕುಪ್ಪೆ	ಸಾಮಾನ್ಯ	ಬಿಸಿಎಂ(ಎ)
ಬಳಘಟ್ಟ	ಸಾಮಾನ್ಯ ಮಹಿಳೆ	ಸಾಮಾನ್ಯ
ಬನ್ನಂಗಾಡಿ	ಸಾಮಾನ್ಯ	ಸಾಮಾನ್ಯ ಮಹಿಳೆ
ಚಿಕ್ಕಾಡೆ	ಸಾಮಾನ್ಯ ಮಹಿಳೆ	ಎಸ್ಸಿ
ಚಿನಕುರಳಿ	ಎಸ್ಸಿ ಮಹಿಳೆ	ಬಿಸಿಎಂ(ಎ)
ಡಿಂಕಾ	ಸಾಮಾನ್ಯ	ಸಾಮಾನ್ಯ ಮಹಿಳೆ.
ದೊಡ್ಡಬ್ಯಾಡರಹಳ್ಳಿ	ಸಾಮಾನ್ಯ	ಸಾಮಾನ್ಯ ಮಹಿಳೆ
ಗುಮ್ಮನಹಳ್ಳಿ	ಸಾಮಾನ್ಯ	ಎಸ್ಸಿ ಮಹಿಳೆ
ಹಳೇಬೀಡು	ಸಾಮಾನ್ಯ	ಸಾಮಾನ್ಯ ಮಹಿಳೆ
ಹರವು	ಬಿಸಿಎಂ(ಎ)ಮಹಿಳೆ	ಸಾಮಾನ್ಯ ಮಹಿಳೆ
ಹಿರೇಮರಳಿ	ಬಿಸಿಎಂ(ಎ)ಮಹಿಳೆ	ಸಾಮಾನ್ಯ
ಹೊನಗನಹಳ್ಳಿ	ಸಾಮಾನ್ಯ ಮಹಿಳೆ	ಸಾಮಾನ್ಯ
ಜಕ್ಕನಹಳ್ಳಿ	ಬಿಸಿಎಂ(ಬಿ)	ಬಿಸಿಎಂ(ಎ) ಮಹಿಳೆ
ಕನಗನಮರಡಿ	ಬಿಸಿಎಂ(ಬಿ)ಮಹಿಳೆ	ಸಾಮಾನ್ಯ
ಕಟ್ಟೇರಿ	ಬಿಸಿಎಂ(ಎ)	ಎಸ್ಸಿ ಮಹಿಳೆ
ಕೆನ್ನಾಳು	ಬಿಸಿಎಂ(ಎ)	ಸಾಮಾನ್ಯ ಮಹಿಳೆ
ಕೆ.ಬೆಟ್ಟಹಳ್ಳಿ	ಎಸ್ಸಿ ಮಹಿಳೆ	ಬಿಸಿಎಂ(ಎ)
ಕ್ಯಾತನಹಳ್ಳಿ	ಬಿಸಿಎಂ(ಎ)ಮಹಿಳೆ	ಸಾಮಾನ್ಯ
ಲಕ್ಷ್ಮೀಸಾಗರ	ಸಾಮಾನ್ಯ ಮಹಿಳೆ	ಬಿಸಿಎಂ(ಬಿ)
ಮಾಣಿಕ್ಯನಹಳ್ಳಿ	ಎಸ್ಸಿ	ಬಿಸಿಎಂ(ಎ) ಮಹಿಳೆ
ಮೇಲುಕೋಟೆ	ಸಾಮಾನ್ಯ ಮಹಿಳೆ	ಸಾಮಾನ್ಯ
ನಾರಾಯಣಪುರ	ಸಾಮಾನ್ಯ	ಬಿಸಿಎಂ(ಎ) ಮಹಿಳೆ
ಸುಂಕಾತೊಣ್ಣೂರು	ಸಾಮಾನ್ಯ ಮಹಿಳೆ	ಸಾಮಾನ್ಯ
ಟಿ.ಎಸ್.ಛತ್ರ	ಬಿಸಿಎಂ(ಎ)	ಬಿಸಿಎಂ(ಬಿ)

ಮೀಸಲಾಯಿತಿಯನ್ನು ಲಾರಿ ಮೂಲಕ ಆಯ್ಕೆ ಮಾಡಲಾಯಿತು. ಲಾರಿ ಮೂಲಕ ಆಯ್ಕೆ ಮಾಡಲು ಗ್ರಾಪಂ ಸದಸ್ಯರನ್ನು ಕರೆದು ಅವರ ಎದುರೇ ಚೀಟಿ ಬರೆದು ಖಾಲಿ ಬಾಕ್ಸ್‌ಗೆ ಹಾಕಿ, ಸದಸ್ಯರಿಂದ ಚೀಟಿ ತೆಗೆಸುವ ಮೂಲಕ ಮೀಸಲಾತಿ ನಿಗದಿಪಡಿಸಿದರು. ತಹಸೀಲ್ದಾರ್ ಸೌಮ್ಯ, ಇಓ ಲೋಕೇಶ್‌ಮೂರ್ತಿ, ಚುನಾವಣಾ ಶಿರಸ್ತೇದಾರ ವರುಣ್, ಮೋಹನ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ನಾಳೆ ಗುದ್ದಲಿ ಪೂಜೆ

ಮಂಡ್ಯ, ಜೂ.15– ಪಾಂಡವಪುರ ತಾಲೂಕು ಆಡಳಿತ, ತಾಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕ್ಯಾತನಹಳ್ಳಿ ಕ್ರೀಡಾ ಒಕ್ಕೂಟದ ಸಹಯೋಗದಲ್ಲಿ ದಿ.ಕೆ.ಎಸ್. ಪುಟ್ಟಣ್ಣಯ್ಯ ಸ್ಮರಣಾರ್ಥ ಕ್ರೀಡಾ ಸಮುಚ್ಚಯ ನಿರ್ಮಾಣ ಕಾಮಗಾರಿ (ವೆಚ್ಚರೂ.115.00ಲಕ್ಷ)ಗೆ ಗುದ್ದಲಿ ಪೂಜೆ ಕಾರ್ಯಕ್ರಮ ಜೂ.17ರಂದು ಬೆಳಗ್ಗೆ 11 ಗಂಟೆಗೆ ಪಾಂಡವಪುರ ತಾಲೂಕಿನ ಕ್ಯಾತನಹಳ್ಳಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಕ್ರೀಡಾ ಸಮುಚ್ಚಯ ನಿರ್ಮಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯ ಸ್ವಾಮಿ ಗುದ್ದಲಿ ಪೂಜೆ ನೆರವೇರಿಸುವರು. ಶಾಸಕ ದರ್ಶನ್ ಅಧ್ಯಕ್ಷತೆ ವಹಿಸುವರು. ಸಂಸದೆ ಸುಮಲತಾ, ಎಂಎಲ್‌ಸಿ ಗಳಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಕ್ಯಾತನಹಳ್ಳಿ ಗ್ರಾಪಂ ಅಧ್ಯಕ್ಷ ಕೆ.ಜೆ. ಚಿದಾನಂದ, ಉಪಾಧ್ಯಕ್ಷೆ ಯಮುನಾ, ಜಿಲ್ಲೆ ಉಸ್ತುವಾರಿ ಕಾರ್ಯದರ್ಶಿ ಜಯರಾಂ ರಾಯಪುರ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಆಲಂಬಾಡಿಕಾವಲು ಗ್ರಾಪಂಗೆ ಭಾಗ್ಯಮ್ಮ ಅಧ್ಯಕ್ಷೆ



ಕೆ.ಆರ್.ಪೇಟೆ, ಜೂ.15– ತಾಲೂಕಿನ ಆಲಂಬಾಡಿಕಾವಲು ಗ್ರಾಪಂ ನೂತನ ಅಧ್ಯಕ್ಷೆಯಾಗಿ ಭಾಗ್ಯಮ್ಮ ಸ್ವಾಮಿಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಚಂದ್ರಕಲಾ ಬಸವರಾಜು ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಭಾಗ್ಯಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ತಾಪಂ ಇಓ ಸತೀಶ್ ಘೋಷಿಸಿದರು. ಸಹ ಚುನಾವಣಾಧಿಕಾರಿಯಾಗಿ ತಾಪಂ ವ್ಯವಸ್ಥಾಪಕ ಅನಿಲ್ ಬಾಬು, ಪಿಡಿಓ ಶಿವಕುಮಾರ್ ಕಾರ್ಯ ನಿರ್ವಹಿಸಿದರು. ನೂತನ ಅಧ್ಯಕ್ಷೆ ಭಾಗ್ಯಮ್ಮ ಮಾತನಾಡಿ, ನನ್ನ ಅಧಿಕಾರವಧಿಯಲ್ಲಿ ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರು, ರಸ್ತೆ, ಚರಂಡಿ, ಬೀದಿದೀಪ ಸೇರಿದಂತೆ ಮೂಲ ಸೌಕರ್ಯ ಅಭಿವೃದ್ಧಿಗೆ ಒತ್ತು ನೀಡುವುದಾಗಿ ಭರವಸೆ ನೀಡಿದರು.

ಈ ವೇಳೆ ಉಪಾಧ್ಯಕ್ಷ ಎ.ಟಿ.ಕರಿಶೆಟ್ಟಿ, ಸಾಯಿ ಸಮಿತಿ ಅಧ್ಯಕ್ಷ ನಾಗೇಶ್, ಸದಸ್ಯರಾದ ಎ.ರಾಜು, ಜಿ.ಜೆ.ವೆಂಕಟೇಶ್, ಚಂದ್ರಕಲಾ, ವೇದಾಂಬ, ಸುಮ, ರೂಪ, ಮುಜೀಹಿದ್ ಖಾನ್, ಸಾಕಮ್ಮ, ಜೆಡಿಎಸ್ ಮುಖಂಡ ಎ.ಆರ್.ರಘು, ಮುಖಂಡರಾದ ತಾಪಂ ಮಾಜಿ ಸದಸ್ಯ ಸೋಮಶೇಖರ್, ಜೆಡಿಎಸ್ ಅಲ್ಪಸಂಖ್ಯಾತರ ತಾಲೂಕು ಅಧ್ಯಕ್ಷ ತನ್ವೀರ್ ಪಾಷ, ರಾಮಕೃಷ್ಣೇಗೌಡ, ಬಸವರಾಜು, ಬೋರಲಿಂಗೇಗೌಡ, ಜಿ.ಕೆ. ಮಂಜುನಾಥ್, ಪಿಡಿಓ ಶಿವಕುಮಾರ್, ಕಾರ್ಯದರ್ಶಿ ಇಮ್ರಾನ್ ಷರೀಫ್ ಸೇರಿದಂತೆ ಇತರರಿದ್ದರು.

ಹಣ ಗಳಿಸುವ ಆಸೆ ತೋರಿಸಿ; ಪಾರ್ಟ್‌ಟೈಮ್ ಜಾಬ್ ನೀಡುವುದಾಗಿ ನಂಬಿಸಿ ಲಕ್ಷಾಂತರ ರೂ. ವಂಚನೆ

ಮಹಿಳೆಗೆ ರೆಸಾರ್ಟ್ ಸದಸ್ಯತ್ವ ನವೀಕರಿಸಲು ನೆರವಾಗುವುದಾಗಿ ಹೇಳಿ ಹಣ ವರ್ಗಾಯಿಸಿಕೊಂಡು ಮೋಸ

ಮಡಿಕೇರಿ, ಜೂ.15–ರೆಸಾರ್ಟ್ ಸದಸ್ಯತ್ವ ನವೀಕರಿಸಿಕೊಳ್ಳುವಂತೆ ತಿಳಿಸಿ ಮಹಿಳೆಯ ಅಕೌಂಟ್‌ನಿಂದ ಆನ್‌ಲೈನ್ ಮೂಲಕ 5.98 ಲಕ್ಷ ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿರುವ ಬಗ್ಗೆ ವರದಿಯಾಗಿದೆ. ಗೋಣಿಕೊಪ್ಪ ನಿವಾಸಿ ಕೆ.ಡಿ.ಪೂರ್ಣಿಮಾ(44) ಹಣ ಕಳೆದುಕೊಂಡವರಾಗಿದ್ದು, ಜೂ.11ರಂದು ಸಂಜೆ ಇವರಿಗೆ ಕರೆ ಮಾಡಿರುವವರು ತಾವು 'ಸ್ಟರ್ಲಿಂಗ್ ಹಾಲಿಡೇಸ್' ರೆಸಾರ್ಟ್‌ನಿಂದ ಮಾತನಾಡುತ್ತಿರುವುದಾಗಿ ತಿಳಿಸಿ ಸದಸ್ಯತ್ವವನ್ನು ನವೀಕರಿಸಿಕೊಳ್ಳುವಂತೆ ಹೇಳಿದ್ದಾರೆ.

ಪೂರ್ಣಿಮಾ ಅವರು ಸ್ಟರ್ಲಿಂಗ್ ಹಾಲಿಡೇಸ್ ಸದಸ್ಯರಾಗಿರುವುದರಿಂದ ಕರೆ ಮಾಡಿದ ವ್ಯಕ್ತಿಗಳು ಹೇಳಿದ್ದನ್ನು ನಂಬಿ ಎನಿ ಡೆಸ್ಕ್ ಆ್ಯಪ್ ಅನ್ನು ಇನ್‌ಸ್ಟಾಲ್ ಮಾಡಿ ಕೊಂಡು ಆ ವ್ಯಕ್ತಿಗಳು ಹೇಳಿದಂತೆ ಒಟಿಪಿ ನಮೂದಿಸಿದ್ದಾರೆ. ನಂತರ ವಂಚಕರು ಇವರ ಬ್ಯಾಂಕ್ ಖಾತೆಯಿಂದ 5,98,674 ರೂ.ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿದ್ದಾರೆ.

ಹಣ ಗಳಿಸುವ ಆಸೆ ತೋರಿ ಮೋಸ: ಮತ್ತೊಂದು ಪ್ರಕರಣದಲ್ಲಿ ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚು ಹಣ ಗಳಿಸಬಹುದು ಎಂದು ನಂಬಿಸಿ ಕುಶಾಲನಗರ ತಾಲೂಕು ಗುಮ್ಮನಕೊಲ್ಲಿ ನಿವಾಸಿ ಕೆ.ಜಿ.ಗಿರೀಶ್(35) ಎಂಬುವರಿಂದ ಆನ್‌ಲೈನ್ ಮೂಲಕ 5,96,020 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಗಿರೀಶ್ ಅವರ ಟೆಲಿಗ್ರಾಂ ಆ್ಯಪ್‌ಗೆ ಬಂದ ಲಿಂಕ್‌ನಲ್ಲಿ ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ಹೆಚ್ಚು ಹಣ ಗಳಿಸಬಹುದು ಎಂಬ ವಿವರಗಳಿತ್ತು. ಅದನ್ನು ನಂಬಿದ ಅವರು, ಕಳೆದ ಏ.12ರಂದು ವಂಚಕರು ನೀಡಿದ ಟಾಸ್ಕ್‌ಗಳನ್ನು ಪೂರೈಸಿದಾಗ ಅವರ ಖಾತೆಗೆ 9,900 ರೂ. ಜಮೆ ಮಾಡಲಾಗಿದೆ. ಇದನ್ನು ಕಂಡು ಲಾಭ ಬರುತ್ತದೆ ಎಂದು ನಂಬಿದ ಅವರು, ಏ.12 ರಿಂದ ಮೇ 30ರವರೆಗೆ ಹಂತ ಹಂತವಾಗಿ 5,96,020 ರೂ. ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿದ್ದು, ಅವರಿಗೆ ಲಾಭಾಂಶವಾಗಲೀ, ಅವರು ವರ್ಗಾವಣೆ ಮಾಡಿದ ಹಣವಾಗಲೀ ವಾಪಸ್ಸಾಗಿಲ್ಲ.

ಪಾರ್ಟ್ ಟೈಮ್ ಜಾಬ್ ಆಸೆ ತೋರಿಸಿ 9.06 ಲಕ್ಷ ವಂಚನೆ: ಇನ್ನೊಂದು ಪ್ರಕರಣದಲ್ಲಿ ಪಾರ್ಟ್‌ಟೈಮ್ ಜಾಬ್ ಕೊಡುವುದಾಗಿ ನಂಬಿಸಿ ಯುವತಿಯಿಂದ 9.06 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಮಡಿಕೇರಿಯ ತ್ಯಾಗರಾಜನಗರ ನಿವಾಸಿ ದಿವ್ಯಜ್ಯೋತಿ ಎಂಬುವರ ಮೊಬೈಲ್‌ಗೆ ಮೇ 5ರಂದು ಪಾರ್ಟ್‌ಟೈಮ್ ಜಾಬ್ ಬಗ್ಗೆ ಸಂದೇಶ ಬಂದಿದೆ. ಸಂದೇಶ ಬಂದ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಲಾಗಿ ಅವರಿಗೆ ಟೆಲಿಗ್ರಾಂ ಆ್ಯಪ್‌ನ ಲಿಂಕ್‌ವೊಂದನ್ನು ಕಳುಹಿಸಿ ಕೆಲವು ಟಾಸ್ಕ್‌ಗಳನ್ನು ನೀಡಲಾಗಿದೆ. ಹಣ ವರ್ಗಾವಣೆ ಮಾಡಿ ಟಾಸ್ಕ್ ಪೂರೈಸಿದಾಗ ಮೊದಲಿಗೆ ಸಣ್ಣ ಪ್ರಮಾಣದ ಲಾಭಾಂಶ ಅವರ ಖಾತೆಗೆ ಜಮೆ ಆಗಿದೆ. ಇದನ್ನು ನಂಬಿದ ದಿವ್ಯಜ್ಯೋತಿ ಮೇ 31ರಿಂದ ಜೂ.10ರವರೆಗೆ ಹಂತ ಹಂತವಾಗಿ 9.06 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾರೆ. ಈ ಮೂರೂ ಪ್ರಕರಣಗಳು ಕೊಡಗು ಜಿಲ್ಲಾ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಚಲಿಸುವ ಬಸ್‌ನಿಂದ ಬಿದ್ದು ಪ್ರಯಾಣಿಕ ಸಾವು; ಡ್ರೈವರ್, ಕಂಡಕ್ಟರ್ ವಿರುದ್ಧ ಪ್ರಕರಣ ದಾಖಲು

ಬನ್ನೂರು, ಜೂ.15– ಚಲಿಸುವ ಬಸ್‌ನಿಂದ ಬಿದ್ದು ಪ್ರಯಾಣಿಕ ಸಾವನ್ನಪ್ಪಿರುವ ಬಗ್ಗೆ ಬನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮರಣೋತ್ತರ ಪರೀಕ್ಷಾ ವರದಿಯಲ್ಲಿ ಮೃತ ವ್ಯಕ್ತಿ ಬಸ್‌ನಿಂದ ಕೆಳಗೆ ಬಿದ್ದಾಗ ತಲೆಗೆ ಪೆಟ್ಟು ಬಿದ್ದು ಸತ್ತಿರಬಹುದು ಎಂದು ವೈದ್ಯರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಆಧರಿಸಿ ಘಟನೆ ನಡೆದು ಎರಡು ತಿಂಗಳ ನಂತರ ಪ್ರಕರಣ ದಾಖಲಿಸಲಾಗಿದೆ.

ವಿವರ: ಮಳವಳ್ಳಿಯ ಸಿದ್ದಪ್ಪ(50) ಎಂಬುವರು ಮಳವಳ್ಳಿಯಿಂದ ತಿ.ನರಸೀಪುರ ತಾಲೂಕು ಸಿದ್ದನಹುಂಡಿ ಗ್ರಾಮದಲ್ಲಿರುವ ಮಗಳ ಮನೆಗೆ ಫೆ.18ರಂದು ಉದಯರಂಗ ಖಾಸಗಿ ಬಸ್‌ನಲ್ಲಿ (ಕೆಎ 54 9099) ಪ್ರಯಾಣಿಸಿದ್ದಾರೆ. ಅಂದು ಸಂಜೆ 7.25ರಲ್ಲಿ ಸೋಸಲೆ ಗ್ರಾಮದ ಭಾರತ್ ಪೆಟ್ರೋಲ್ ಬಂಕ್ ಮುಂಭಾಗ ರಸ್ತೆಯ ತಿರುವಿನಲ್ಲಿ ಬಸ್ ಅತೀ ವೇಗವಾಗಿ ಚಲಿಸುತ್ತಿದ್ದಾಗ ಸಿದ್ದಪ್ಪ ಬಸ್‌ನ ಹಿಂಬಾಗಿಲಿನಿಂದ ಹೊರಗೆ ಎಸೆಯಲ್ಪಟ್ಟಿದ್ದಾರೆ. ಅದನ್ನು ಗಮನಿಸದೇ ಚಾಲಕ ಬಸ್ಸನ್ನು ಚಾಲನೆ ಮಾಡಿಕೊಂಡು ಹೋಗಿದ್ದು, ಈ ವೇಳೆ ವ್ಯಾಸರಾಜಮಠದ ರಂಗನಾಥ ಮತ್ತು ಅವರ ಸ್ನೇಹಿತ ರಾಘವೇಂದ್ರ ಎಂಬುವರು ಬಸ್ಸನ್ನು ಅಡ್ಡಗಟ್ಟಿ ನಿಲ್ಲಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಬಸ್ ಚಾಲಕ ಮತ್ತು ನಿರ್ವಾಹಕ ಕೇಸ್ ದಾಖಲಿಸುವುದು ಬೇಡ. ಗಾಯಗೊಂಡಿರುವ ಸಿದ್ದಪ್ಪನವರಿಗೆ ನಾವೇ ಚಿಕಿತ್ಸೆ ಕೊಡಿಸುತ್ತೇವೆ ಎಂದು ಹೇಳಿದ ಹಿನ್ನೆಲೆಯಲ್ಲಿ ಅಂದು ಠಾಣೆಯಲ್ಲಿ ಪ್ರಕರಣ ದಾಖಲಿಸಿಲ್ಲ ಎಂದು ತಿಳಿಸಿರುವ ಸಿದ್ದಪ್ಪ ಪುತ್ರಿ, ಫೆ.28ರಂದು ಸಂಜೆ 5.30ರಲ್ಲಿ ತಮ್ಮ ತಂದೆ ಸಿದ್ದಪ್ಪ ಮೃತಪಟ್ಟಿದ್ದು, ಬಸ್‌ನಿಂದ ಬಿದ್ದ ಪರಿಣಾಮ ಅವರು ಸಾವನ್ನಪ್ಪಿರಬಹುದು ಎಂದು ನೀಡಿದ ದೂರನ್ನು, ಬನ್ನೂರು ಪೊಲೀಸರು ಯುಡಿಆರ್ ಕಲಂ 174(ಸಿ) ಸಿಆರ್‌ಪಿಸಿಯಂತೆ ಪ್ರಕರಣ ದಾಖಲಿಸಿಕೊಂಡು ದೇಹವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿದ್ದರು.

ಮರಣೋತ್ತರ ಪರೀಕ್ಷಾ ವರದಿಯಲ್ಲಿ ವೈದ್ಯರು ತಲೆಗೆ ಬಿದ್ದ ಪೆಟ್ಟಿನಿಂದ ಸಾವು ಸಂಭವಿಸಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಲ್ಲದೇ, ಪೊಲೀಸರ ಮನವಿಗೆ ಸಿದ್ದಪ್ಪ ಬಸ್‌ನಿಂದ ಬಿದ್ದ ಸ್ಥಳವು ಡಾಂಬರು ರಸ್ತೆಯಾಗಿದ್ದು, ಅಲ್ಲಿಗೆ ತಲೆ ಬಡಿದಿದ್ದರಿಂದ ಪೆಟ್ಟಾಗಿ ಮೃತಪಟ್ಟಿರುವ ಸಾಧ್ಯತೆಯಿದೆ ಎಂದು ಸ್ಪಷ್ಟ ಅಭಿಪ್ರಾಯ ನೀಡಿದ ಹಿನ್ನೆಲೆಯಲ್ಲಿ ಬಸ್ ಚಾಲಕನ ವಿರುದ್ಧ ಜೂ.14ರಂದು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಐರಾವತ ಕ್ಯಾರಿಯರ್‌ನ ಟ್ರಾಲಿಬ್ಯಾಗ್‌ನಲ್ಲಿದ್ದ 4.75 ಲಕ್ಷ ಮೌಲ್ಯದ ಚಿನ್ನಾಭರಣ, 8 ವಾಚ್‌ಗಳ ಕಳವು

ಮೈಸೂರು, ಜೂ.15– ಐರಾವತ ಬಸ್‌ನ ಲಗೇಜ್ ಕ್ಯಾರಿಯರ್‌ನಲ್ಲಿದ್ದ ಟ್ರಾಲಿಬ್ಯಾಗ್‌ನ ಜಿಪ್ ತೆರೆದು 4.75 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ 8 ಸಾವಿರ ರೂ. ಮೌಲ್ಯದ ವಾಚ್‌ಗಳನ್ನು ಕಳವು ಮಾಡಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ರಾಜರಾಜೇಶ್ವರಿ ನಗರದ ಬೆಮೆಲ್ ಲೇಔಟ್ ಎರಡನೇ ಹಂತದಲ್ಲಿ ವಾಸಿಸುತ್ತಿರುವ ಇಂಜಿನಿಯರ್ ಪಿ.ಮಾಂತೇಶ್(31) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಪತ್ನಿ ಡಾ. ಸ್ವಾತಿ ಪಾಟೀಲ್ ಅವರೊಂದಿಗೆ ಚಿತ್ರದುರ್ಗಕ್ಕೆ ಸ್ನೇಹಿತರ ಮದುವೆಯಲ್ಲಿ ಭಾಗವಹಿಸಲು ಜೂ.11 ರಂದು ತೆರಳಿದ್ದರು. ಅಂದು ರಾತ್ರಿ 11.40ರಲ್ಲಿ ಚಿತ್ರದುರ್ಗ ಬಸ್ ನಿಲ್ದಾಣದಲ್ಲಿ ಕೆಎಸ್‌ಆರ್‌ಟಿಸಿ ಐರಾವತ ಬಸ್ (ಕೆಎ 57 ಎಫ್ 1829)ನ ಲಗೇಜ್ ಕ್ಯಾರಿಯರ್‌ನಲ್ಲಿ ಅವರ ಟ್ರಾಲಿಬ್ಯಾಗ್ ಇಟ್ಟು ಅದೇ ಬಸ್‌ನಲ್ಲಿ ಮೈಸೂರಿಗೆ ಪ್ರಯಾಣಿಸಿದ್ದಾರೆ. ಜೂ.12 ರಂದು ಬೆಳಗಿನ ಜಾವ ಮೈಸೂರು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಬಸ್ ಆಗಮಿಸಿದಾಗ ಇವರ ಕ್ಯಾರಿಬ್ಯಾಗ್ ಜಿಪ್ ತೆರೆದಿರುವುದು ಕಂಡುಬಂದಿದೆ. ಅದರಲ್ಲಿರುವ 4.75 ಲಕ್ಷ ರೂ. ಮೌಲ್ಯದ 140 ಗ್ರಾಂ ಚಿನ್ನಾಭರಣ ಮತ್ತು 8 ಸಾವಿರ ರೂ. ಮೌಲ್ಯದ 2 ಲೇಡೀಸ್ ವಾಚ್ ಹಾಗೂ ಕೃತಕ ಆಭರಣಗಳನ್ನು ಕಳವು ಮಾಡಲಾಗಿದೆ. ಈ ಸಂಬಂಧ ಲಷ್ಕರ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ವಿದ್ಯುತ್ ದರ ಏರಿಕೆಗೆ ತಡೆಗೆ ಎಸ್‌ಡಿಪಿಐ ಆಗ್ರಹ



ಮೈಸೂರು, ಜೂ.15(ಪಿಎಂ)– ವಿದ್ಯುತ್ ದರ ಏರಿಕೆ ಸಂಬಂಧ ಹಿಂದಿನ ರಾಜ್ಯ ಬಿಜೆಪಿ ಸರ್ಕಾರ ಮಾಡಿದ ಜನದ್ರೋಹದ ಮರೆಯಲ್ಲಿ ಪ್ರಸ್ತುತದ ರಾಜ್ಯ ಕಾಂಗ್ರೆಸ್ ಸರ್ಕಾರ ರಕ್ಷಣೆ ಪಡೆಯುವ ಕೆಲಸ ಮಾಡದೇ ಕೂಡಲೇ ವಿದ್ಯುತ್ ದರ ಏರಿಕೆಗೆ ತಡೆ ನೀಡಬೇಕು ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆಯಲ್ಲಿ ಸೋಲುವುದು ಖಚಿತವೆಂದು ಮನಗೊಂಡಿದ್ದ ಬಿಜೆಪಿ, ಆಡಳಿತದಿಂದ ನಿರ್ಗಮಿಸುವ ಸಂದರ್ಭದಲ್ಲಿ ಅದಾನಿ ಮತ್ತು ಇತರೆ ವಿದ್ಯುತ್ ಉತ್ಪಾದನಾ ಖಾಸಗಿ ಕಂಪನಿಗಳಿಗೆ ಲಾಭ ಮಾಡಿಕೊಡುವ ದುರುದ್ದೇಶದಿಂದ ಕೆಇಆರ್‌ಸಿ ಮೂಲಕ ವಿದ್ಯುತ್ ದರವನ್ನು ಗರಿಷ್ಠ ಮಟ್ಟದಲ್ಲಿ ಏರಿಸುವ ಮೂಲಕ ರಾಜ್ಯದ ಜನತೆಗೆ ದ್ರೋಹ ಬಗೆದಿದೆ ಎಂದು ಆರೋಪಿಸಿದರು.

ಈ ಜನವಿರೋಧಿ ಏರಿಕೆಯನ್ನು ಸರಿಪಡಿಸಿ ಜನರ ಹೊರೆ ಇಳಿಸಬೇಕಿದ್ದ ಕಾಂಗ್ರೆಸ್ ಸರ್ಕಾರ ಬಿಜೆಪಿಯ ಜನದ್ರೋಹದ ಮರೆಯಲ್ಲಿ ರಕ್ಷಣೆ ಪಡೆಯಲು ಹೊರಟಿದೆ ಎಂದು ದೂರಿದರು. ವಿದ್ಯುತ್ ಉತ್ಪಾದನಾ ಕಂಪನಿಗಳು ತಮಗೆ ಸದ್ಯದ ದರದಿಂದ ವಾರ್ಷಿಕ ಸುಮಾರು ಶೇ.13ರಷ್ಟು ನಷ್ಟವಾಗುತ್ತಿದೆ ಎಂದು ಕೆಇಆರ್‌ಸಿ ಮುಂದೆ ವಾದ ಮಂಡಿಸಿದ್ದವು. ಇದಕ್ಕೆ ಪ್ರತಿಯಾಗಿ ವಿದ್ಯುತ್ ದರಗಳಲ್ಲಿ ಶೇ.16ರಷ್ಟು ಏರಿಕೆ ಮಾಡಬೇಕೆಂದು ಪ್ರಸ್ತಾವ ಸಲ್ಲಿಸಿದ್ದವು. ಇದಕ್ಕೆ ಪ್ರತಿಯಾಗಿ ಸೂಕ್ತ ವಾದ ಮಂಡಿಸದ ಅಂದಿನ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ, ಕೆಇಆರ್‌ಸಿ ಮೂಲಕ ಶೇ.16ರಷ್ಟು ದರ ಏರಿಕೆಗೆ ಅನುಕೂಲ ಆಗುವಂತೆ ನಡೆದು ಕೊಂಡಿತು ಎಂದು ಆರೋಪಿಸಿದರು.

ಶೇ.13ರಷ್ಟು ನಷ್ಟವಾಗುತ್ತಿದ್ದರೆ ಸಬ್ಸಿಡಿ ಹೆಚ್ಚಿಸುವ ಮೂಲಕ ಶೇ.13ಕ್ಕಿಂತಲೂ ಕಡಿಮೆ ಮಟ್ಟದಲ್ಲಿ ದರ ಹೆಚ್ಚಳಕ್ಕೆ ಅಂದಿನ ಬಿಜೆಪಿ ಸರ್ಕಾರ ಪಟ್ಟು ಹಿಡಿಯಬೇಕಿತ್ತು. ಆದರೆ ಅದಕ್ಕೆ ಬದಲಾಗಿ ಹೆಚ್ಚುವರಿಯಾಗಿ ಇನ್ನೂ ಶೇ.3ರಷ್ಟು ದರ ಏರಿಕೆಗೆ ಬೊಮ್ಮಾಯಿ ಸರ್ಕಾರ ಅನುವು ಮಾಡಿಕೊಟ್ಟಿದ್ದು, ಇದರ ಹಿಂದೆ ಖಾಸಗಿ ಕಂಪನಿಗಳಿಗೆ ಅದರಲ್ಲೂ ಮುಖ್ಯವಾಗಿ ಅದಾನಿ ಕಂಪನಿಗೆ ಲಾಭ ಮಾಡಿಕೊಡುವ ದುರುದ್ದೇಶವಿದೆ ಎಂದು ದೂರಿದರು.


ಈಗ ಪ್ರತಿ ಯೂನಿಟ್‌ಗೆ 7 ರೂ. ನಿಗದಿ ಮಾಡಿದ್ದು, ಇದರ ಜೊತೆಗೆ ಇಂಧನ ಹೊಂದಾಣಿಕೆ ಶುಲ್ಕವನ್ನು ಯೂನಿಟ್‌ಗೆ 53 ಪೈಸೆಯಿಂದ 2.42 ರೂ.ಗೆ ಹೆಚ್ಚಳ ಮಾಡಲಾಗಿದೆ. ಆ ಮೂಲಕ ಐದು ಪಟ್ಟು ಹೆಚ್ಚಳ ಮಾಡಿದ್ದು, ಇದು ಹಗಲು ದರೋಡೆ. ಅದಾನಿಗೆ ಲಾಭ ಮಾಡಿಕೊಡುವ ಉದ್ದೇಶದಿಂದ ಕೇಂದ್ರ ಸರ್ಕಾರ ವಿದ್ಯುತ್ ಕಾರ್ಖಾನೆಗಳು ಕೇವಲ ಅದಾನಿ ಕಂಪನಿಯಿಂದ ಮಾತ್ರ ಕಲ್ಲಿದ್ದಲು ಖರೀದಿಸುವಂತೆ ನಿಯಮ ರೂಪಿಸಿದೆ ಇದರ ವಿರುದ್ಧ ಎಲ್ಲಾ ವಿರೋಧ ಪಕ್ಷಗಳು ಒಗ್ಗಟ್ಟಾಗಿ ಧ್ವನಿ ಎತ್ತುವ ಮೂಲಕ ಜನತೆಗೆ ಅಗತ್ಯವಾಗಿ ಬೇಕಿರುವ ವಿದ್ಯುತ್ ಕ್ಷೇತ್ರವನ್ನು ಖಾಸಗಿಯವರ ಹಿಡಿತದಿಂದ ಮುಕ್ತಗೊಳಿಸಬೇಕು ಎಂದು ಹೇಳಿದರು. ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ದೇವ ನೂರು ಪುಟ್ಟನಂಜಯ್ಯ, ಜಿಲ್ಲಾ ಉಪಾಧ್ಯಕ್ಷ ಎಸ್. ಸ್ವಾಮಿ, ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಸಫಿಉಲ್ಲಾ ಗೋಷ್ಠಿಯಲ್ಲಿದ್ದರು.

'ಪೇ ಅಂಡ್ ಪಾರ್ಕ್' ಪ್ರಸ್ತಾಪ ಕೈಬಿಡಲು ಯುವ ಕಾಂಗ್ರೆಸ್ ಮುಖಂಡರ ಆಗ್ರಹ



ಮೈಸೂರು, ಜೂ.15– ಮೈಸೂರಿನ ಪ್ರಮುಖ ವಾಣಿಜ್ಯ ರಸ್ತೆಗಳಲ್ಲಿ ಪೇ ಅಂಡ್ ಪಾರ್ಕ್ ಜಾರಿಗೊಳಿಸುವ ಚಿಂತನೆಯನ್ನೇ ಕೈಬಿಡಬೇಕೆಂದು ಕಾಂಗ್ರೆಸ್ ಯುವ ಮುಖಂಡ ಅಜಯ್‌ರಾಜ್ ಆಗ್ರಹಿಸಿದ್ದಾರೆ. ವಸ್ತುಗಳ ಬೆಲೆ ಗಗನಕ್ಕೇರಿರುವುದರಿಂದ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ತೊಂದರೆಯಾಗಿದೆ. ಇದರೊಂದಿಗೆ ರಸ್ತೆ ಬದಿಯಲ್ಲಿ ವಾಹನ ನಿಲ್ಲಿಸುವುದಕ್ಕೂ ಶುಲ್ಕ ತೆರಬೇಕಾಗಿ ಬಂದರೆ ಇನ್ನೂ ಹೊರೆಯಾಗುತ್ತದೆ. ಹಾಗಾಗಿ ಮೇಯರ್ ಶಿವಕುಮಾರ್ ಅವರು ಪೇ ಅಂಡ್ ಪಾರ್ಕ್ ಚಿಂತನೆಯನ್ನೇ ಕೈಬಿಡಬೇಕು ಎಂದು ಒತ್ತಾಯಿಸಿದ್ದಾರೆ.

ಚಾಮುಂಡಿಬೆಟ್ಟದ ಅಭಿವೃದ್ಧಿಗೆ ಸಿಕ್ಕಿತು 45.70 ಕೋಟಿ ರೂ. ಅನುದಾನದ 'ಪ್ರಸಾದ'





ಮೈಸೂರು. ಜೂ.15.(ಬಿಎಲ್‌ಯು)–ದೇಶ ವಿದೇಶದ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಅತ್ಯಾಕರ್ಷಿಸುವ ಪ್ರವಾಸಿ ಹಾಗೂ ಧಾರ್ಮಿಕ ಶ್ರದ್ಧಾ ಭಕ್ತಿ ಕೇಂದ್ರ ಮೈಸೂರಿನ ಚಾಮುಂಡಿಬೆಟ್ಟದ ಅಭಿವೃದ್ಧಿಗೆ ಕೇಂದ್ರ ಸರ್ಕಾರ "ಪ್ರಸಾದ್" ಯೋಜನೆಯಡಿ 45.70 ಕೋಟಿ ರೂ. ನೀಡಲು ಅನುಮೋದನೆ ಕೊಟ್ಟಿದೆ.

ಈ ವಿಷಯ ತಿಳಿಸಿರುವ ಮೈಸೂರು ಕೊಡಗು ಸಂಸದ ಪ್ರತಾಪ್ ಸಿಂಹ, ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬರುವ ಭಕ್ತಾದಿಗಳ ಅನುಕೂಲಕ್ಕಾಗಿ ವಿವಿಧ ಮೂಲ ಸೌಕರ್ಯಗಳನ್ನು ಕಲ್ಪಿಸುವ ಅಭಿವೃದ್ಧಿ ಕಾಮಗಾರಿಗಳಿಗಾಗಿ ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದ "ಪ್ರಸಾದ್" ಯೋಜನೆಯಡಿಯಲ್ಲಿ 45.70 ಕೋಟಿ ರೂಪಾಯಿ ನೀಡಲು ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ತಿಳಿಸಿದ್ದಾರೆ.

ಚಾಮುಂಡಿಬೆಟ್ಟದ ದೇವಸ್ಥಾನ ಹಾಗೂ ಸುತ್ತಮುತ್ತಲು ಕುಡಿಯುವ ನೀರಿನ ವ್ಯವಸ್ಥೆ, ಬಿಸಿಲು ಮಳೆಯಿಂದ ಭಕ್ತರಿಗೆ ತೊಂದರೆ ಆಗದಂತೆ ಚಾವಣಿ ನಿರ್ಮಾಣ, ಮೆಟ್ಟಿಲುಗಳ ನವೀಕರಣವನ್ನು ಈ ಯೋಜನೆಯಲ್ಲಿ ಮಾಡಲಾಗುತ್ತದೆ. ದೇವಸ್ಥಾನದ ಬಳಿ ಲ್ಯಾಂಡ್ ಸ್ಕೇಪಿಂಗ್, ವಿದ್ಯುತ್ ದೀಪ, ಪಾರಂಪರಿಕ ಶೈಲಿ ಮಂಟಪಗಳ ನವೀಕರಣ, ಮಹಿಷಾಸುರ ವೃತ್ತದಲ್ಲಿ ನೇಮ್ ಬೋರ್ಡ್, ಫೌಂಟೇನ್, ಪೋಲಿಸ್ ಬೂತ್, ಕಂಟ್ರೋಲ್ ರೂಂ, ಆಸನಗಳ ಹಾಗೂ ಶೌಚಾಲಯಗಳನ್ನು ನಿರ್ಮಾಣ ಮಾಡ ಲಾಗುವುದು. ಜೊತೆಗೆ ನಂದಿ ವಿಗ್ರಹದ ಸ್ಥಳವನ್ನು ಕೂಡ ಅಭಿವೃದ್ಧಿ ಮಾಡಲಾಗುತ್ತಿದೆ.

ನಾಡದೇವತೆ ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯಲು ದೇಶ– ವಿದೇಶದ ಲಕ್ಷಾಂತರ ಭಕ್ತರು ಆಗಮಿಸಲಿದ್ದು, "ಪ್ರಸಾದ" ಯೋಜನೆಯ ಅಭಿವೃದ್ಧಿಯಿಂದ ಚಾಮುಂಡಿಬೆಟ್ಟ ಮತ್ತಷ್ಟು ಪ್ರವಾಸಿಗರು ಹಾಗೂ ಭಕ್ತರನ್ನು ಆಕರ್ಷಿಸುತ್ತದೆ.

ಜೂನ್ 21ಕ್ಕೆ ದೆಹಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನಿ ಭೇಟಿ ಸಾಧ್ಯತೆ



ಬೆಂಗಳೂರು. ಜೂ.15.(ಬಿಎಲ್‌ಯು)– ಕಾಂಗ್ರೆಸ್ ಸರ್ಕಾರದ ಅನ್ನಭಾಗ್ಯ ಯೋಜನೆಗೆ ಅಕ್ಕಿ ನೀಡುವಂತೆ ಮನವಿ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೇರವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನೇ ಭೇಟಿ ಮಾಡಲಿದ್ದಾರೆ.

ಸಿದ್ದರಾಮಯ್ಯ ಅವರು ಜೂನ್ 21 ರಂದು ದೆಹಲಿಗೆ ತೆರಳುತ್ತಿದ್ದಾರೆ. ಆ ವೇಳೆ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲು ಪ್ರಧಾನಮಂತ್ರಿ ಕಚೇರಿಯಲ್ಲಿ ಸಮಯಾವಕಾಶ ಕೇಳಿದ್ದಾರೆ. ಆದರೆ ನರೇಂದ್ರ ಮೋದಿ ಭೇಟಿಗೆ ಅಧಿಕೃತವಾಗಿ ಅವರ ಕಚೇರಿಯಿಂದ ಇನ್ನು ಮಾಹಿತಿ ಬಂದಿಲ್ಲ.

ಅನ್ನಭಾಗ್ಯ ಯೋಜನೆಗೆ 2.28 ಲಕ್ಷ ಟನ್ ಅಕ್ಕಿ ಬೇಕಿದೆ. ಎಫ್‌ಸಿಐ ಮೊದಲು ಅಕ್ಕಿ ಕೊಡುತ್ತೇವೆ ಎಂದು ಹೇಳಿ ನಂತರ ಉಲ್ಟಾ ಹೊಡೆದಿದೆ. ಈ ಕಾರಣದಿಂದ ನೀವು ಆದೇಶ ಮಾಡಿ ಅಕ್ಕಿ ಕೊಡಿಸುವಂತೆ ಸಿದ್ದರಾಮಯ್ಯ ಅವರು ನರೇಂದ್ರ ಮೋದಿ ಬಳಿ ಮನವಿ ಮಾಡಿಕೊಳ್ಳಲಿದ್ದಾರೆ ಎನ್ನಲಾಗಿದೆ.

ಅಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲು ಸಮಯಾವಕಾಶ ಕೇಳಿದ್ದಾರೆ. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಇದು ಸೌಜನ್ಯದ ಭೇಟಿ ಎಂದು ಹೇಳುತ್ತಿದ್ದಾರೆ. ಆದರೂ ಈ ಭೇಟಿ ಮೂಲ ಉದ್ದೇಶ ಎಫ್‌ಸಿಐನಿಂದ ಅಕ್ಕಿ ತರಿಸುವುದಾಗಿದೆ ಎಂದು ತಿಳಿದುಬಂದಿದೆ. ಪ್ರಧಾನಮಂತ್ರಿ ಮತ್ತು ರಾಷ್ಟ್ರಪತಿ ಭೇಟಿಗೂ ಮೊದಲು ಸಿದ್ದರಾಮಯ್ಯ ಅವರು ಸೋನಿಯಾ ಗಾಂಧಿ ಸೇರಿದಂತೆ ಕಾಂಗ್ರೆಸ್ ಪಕ್ಷದ ಕೆಲವು ರಾಷ್ಟ್ರ ನಾಯಕರನ್ನು ಭೇಟಿ ಮಾಡುವ ಕಾರ್ಯಕ್ರಮವಿದೆ.

ಯೋಗ ದಿನಾಚರಣೆ: ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ



ಮೈಸೂರು,ಜೂ.15(ಎಂಟಿವೈ)– ಅಂತಾರಾಷ್ಟ್ರೀಯ ಯೋಗ ದಿನದ ಹಿನ್ನೆಲೆಯಲ್ಲಿ ಗುರುವಾರ ನಡೆದ ಪೂರ್ವಾಭ್ಯಾಸದಲ್ಲಿ ಹಲವು ವಿದ್ಯಾರ್ಥಿಗಳು ಯೋಗ ಪ್ರದರ್ಶಿಸಿದರು.

ಮೈಸೂರಿನ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರವು ಗೋಪಾಲಸ್ವಾಮಿ ಶಿಶುವಿಹಾರದ ಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಯೋಗಾಭ್ಯಾಸ ತರಬೇತಿಯಲ್ಲಿ ಯೋಗ ದಿನಾಚರಣೆಯಂದು ಮಾಡಬೇಕಾದ ಆಸನಗಳ ಬಗ್ಗೆ ಮಾಹಿತಿ ನೀಡಿ, ಅಭ್ಯಾಸ ಮಾಡಿಸಲಾಯಿತು.

ಈ ಕಾರ್ಯಕ್ರಮವನ್ನು ಮೈಸೂರಿನ ಹಿರಿಯ ಯೋಗಪಟು ಮೈಸೂರು ಯೋಗ ಒಕ್ಕೂಟದ ಕಾರ್ಯಾಧ್ಯಕ್ಷ ಜಲೇಂದ್ರ ಕುಮಾರ್ ಉದ್ಘಾಟಿಸಿದರು. ಗೋಪಾಲಸ್ವಾಮಿ ಸಂಸ್ಥೆಯ ಮಂಜುನಾಥ್, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣೈ ಹಾಗೂ ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರಾದ ಕೃಷ್ಣರಾಜ, ಅಂತಾರಾಷ್ಟ್ರೀಯ ಯೋಗ ಶಿಕ್ಷಕ ರಂಗನಾಥ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಬಳಿಕ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ 'ಮಾನವತೆಗಾಗಿ ಯೋಗ' ಎಂಬ ವಿಷಯದ ಬಗ್ಗೆ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಪ್ರಬಂಧ ಸ್ಪರ್ಧೆ ಹಾಗೂ ಯೋಗ ರಸಪ್ರಶ್ನೆ ನಡೆಸಲಾಯಿತು. ಯೋಗ ರಸಪ್ರಶ್ನೆಯಲ್ಲಿ ಗೋಪಾಲಸ್ವಾಮಿ ಶಿಶುವಿಹಾರದ ಶೃತಿ.ಎಸ್. ಹಿರೇಮಠ್ ಪ್ರಥಮ ಬಹುಮಾನ, ಅನಿರುದ್ಧ್ ದ್ವಿತೀಯ ಬಹುಮಾನ ಹಾಗೂ ಮೇಘನ ಎಸ್.ರಾಜ್ ಮತ್ತು ಎಸ್.ಶರಣ್ ತೃತೀಯ ಬಹುಮಾನವನ್ನು ಪಡೆದರು. ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಶೃತಿ ಎಸ್. ಹಿರೇಮಠ್ ಪ್ರಥಮ, ಇಂಗ್ಲೀಷ್ ಪ್ರಬಂಧ ಸ್ಪರ್ಧೆಯಲ್ಲಿ ಎಸ್.ವರ್ಷಿತ ಪ್ರಥಮ ಬಹುಮಾನ ಹಾಗೂ ಗೋಪಾಲಸ್ವಾಮಿ ಹಿರಿಯ ಪ್ರಾಥಮಿಕ ಶಾಲೆಯ ಸುಲ್ತಾನಿ ಪ್ರಥಮ ಬಹುಮಾನ ಹಾಗೂ ಎ.ಕೀರ್ತನಾ ದ್ವಿತೀಯ ಬಹುಮಾನವನ್ನು ಪಡೆದು ಗಮನ ಸೆಳೆದರು.

ಆಷಾಢ ಮಾಸದ ಅಮಾವಾಸ್ಯೆ ದಿನ ನಾಗಮಲೆ ಕ್ಷೇತ್ರದಲ್ಲಿ ಅನ್ನಸಂತರ್ಪಣೆ

● ಮೈಸೂರು, ಬೆಂಗಳೂರು, ಚಾಮರಾಜನಗರ ಜಿಲ್ಲೆಗಳ ಭಕ್ತರ ತಂಡದಿಂದ ಅನ್ನಸಂತರ್ಪಣೆ ● ಇಂಡಿಗನತ್ತ ಶಾಲೆ ವಿದ್ಯಾರ್ಥಿಗಳಿಗೆ ಪಠ್ಯ ಸಾಮಗ್ರಿ ವಿತರಣೆ

ಮೈಸೂರು,ಜೂ.15(ಎಂಟಿವೈ)– ಚಾಮರಾಜನಗರ ಜಿಲ್ಲೆಯ ಸುಪ್ರಸಿದ್ಧ ಧಾರ್ಮಿಕ ಕ್ಷೇತ್ರ ಮಲೆ ಮಹದೇಶ್ವರ ಸ್ವಾಮಿ ಬೆಟ್ಟದ ನಾಗಮಲೆ ಕ್ಷೇತ್ರಕ್ಕೆ ಜೂ.18ರಂದು ಅಮಾವಾಸ್ಯೆ ದಿನ ಬರುವ ಭಕ್ತರಿಗಾಗಿ ಅನ್ನಸಂತರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಶ್ರೀ ನಾಗಮಲೆ ಮಹದೇಶ್ವರ ಸ್ವಾಮಿ ಸೇವಾ ಸಂಘದ ಅಧ್ಯಕ್ಷ ಶಿವಕುಮಾರ್ ಹಾಗೂ ಉಪಾಧ್ಯಕ್ಷ ರವಿಚಂದ್ರ ತಿಳಿಸಿದ್ದಾರೆ.

ಮೈಸೂರು, ಬೆಂಗಳೂರು, ಚಾಮರಾಜನಗರ ಜಿಲ್ಲೆಗಳ ಕೆಲ ಭಕ್ತರು ಒಂದುಗೂಡಿ ಕಳೆದ 8 ವರ್ಷದಿಂದ ಅಷಾಢ ಮಾಸದ ಅಮಾವಾಸ್ಯೆ ದಿನದಂದು ನಾಗಮಲೆಗೆ ಬರುವ ಭಕ್ತರಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗುತ್ತಿದೆ. ನಾಗಮಲೆಗೆ ತೆರಳುವ ಮಾರ್ಗ ಇಂಡಿಗನತ್ತ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಶ್ರೀ ನಾಗಮಲೆ ಮಹದೇಶ್ವರ ಸ್ವಾಮಿ ಸೇವಾ ಸಂಘದ ವತಿಯಿಂದ 5000 ಮಂದಿ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ಜೂ.18ರಂದು ಮಣ್ಣೆತ್ತಿನ ಅಮಾವಾಸ್ಯೆಯ ವಿಶೇಷ ಪೂಜೆ ಜರುಗಲಿದ್ದು, ಅಂದು ಶಿವನ ದರ್ಶನ ಪಡೆದರೆ ಒಳಿತಾಗಲಿದೆ ಎಂಬ ಪ್ರತೀತಿ ಇದೆ. ಈ ಹಿನ್ನೆಲೆಯಲ್ಲಿ ನಾಗಮಲೆಯ ಮಹದೇಶ್ವರ ಸ್ವಾಮಿಯ ದರ್ಶನ ಪಡೆಯಲು ಬರುವ ಭಕ್ತರಿಗೆ ಅಂದು ಬೆಳಗ್ಗೆ 9 ಗಂಟೆಯಿಂದಲೇ ಅನ್ನಸಂತರ್ಪಣೆ ಆರಂಭವಾಗಲಿದೆ. ಇದೇ ವೇಳೆ ಇಂಡಿಗನತ್ತ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತವಾಗಿ ಬ್ಯಾಗ್ ವಿತರಿಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಉಚಿತ ಬಂಜೆತನ ತಪಾಸಣಾ ಶಿಬಿರ

ಮೈಸೂರು,ಜೂ.15(ಪಿಎಂ)– ಬೆಂಗಳೂರಿನ ಗರ್ಭಗುಡಿ ಐವಿಎಫ್ ಸೆಂಟರ್



ವತಿಯಿಂದ ಜೂ.17ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಲಯನ್ಸ್ ಜೀವಧಾರ ರಕ್ತನಿಧಿ ಕೇಂದ್ರದಲ್ಲಿ ಉಚಿತ ಬಂಜೆತನ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಗರ್ಭಗುಡಿ ಐವಿಎಫ್ ಸೆಂಟರ್‌ನ ಮಾರ್ಕೆಟಿಂಗ್ ಪ್ರತಿನಿಧಿ ಡಾರ್ವಿನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಜ್ಞವೈದ್ಯೆ ಡಾ.ಆಶಾ ಎಸ್.ವಿಜಯ್ ಮತ್ತು ಅವರ ತಂಡದಿಂದ ತಪಾಸಣೆ ನಡೆಯಲಿದೆ. ಶಿಬಿರದಲ್ಲಿ ಉಚಿತ ವೈದ್ಯಕೀಯ ಸಲಹೆ, ತಪಾಸಣೆ, ವೀರ್ಯ ವಿಶ್ಲೇಷಣೆ ನಡೆಸಲಾಗುವುದು. ಮಕ್ಕಳಾಗದ ದಂಪತಿಗಳು ಶಿಬಿರದ ಪ್ರಯೋಜನ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೊ.ಸಂ. 95918 23332 ಸಂಪರ್ಕಿಸಬಹುದು ಎಂದರು. ಲಯನ್ಸ್ ಜೀವಧಾರ ರಕ್ತನಿಧಿ ಕೇಂದ್ರದ ಆಡಳಿತಾಧಿಕಾರಿ ರಶ್ಮಿ ಗೋಷ್ಠಿಯಲ್ಲಿದ್ದರು.


ಜೂ.27ರೊಳಗೆ ಪಡಿತರಗಳನ್ನು ಪಡೆಯುವಂತೆ ಸೂಚನೆ

ಮೈಸೂರು,ಜೂ.15– ಮೈಸೂರು ನಗರ ಮಹಾನಗರಪಾಲಿಕೆ ವ್ಯಾಪ್ತಿಗೆ ಒಳಪಡುವ ಎಲ್ಲಾ ರೇಷನ್ ಕಾರ್ಡುದಾರರು ಜೂನ್–2023ರ ಮಾಹೆಯಲ್ಲಿ ನ್ಯಾಯಬೆಲೆ ಅಂಗಡಿಗಳಿಂದ ಅಂತ್ಯೋದಯ ಅನ್ನ ಯೋಜನೆಯ ಪಡಿತರ ಕಾರ್ಡುಗಳಿಗೆ 21 ಕೆ.ಜಿ. ಅಕ್ಕಿ ಹಾಗೂ 14 ಕೆ.ಜಿ. ರಾಗಿಯಂತೆ ಮತ್ತು ಆದ್ಯತಾ (ಬಿ.ಪಿ.ಎಲ್.) ಪಡಿತರ ಚೀಟಿದಾರರ ಪ್ರತಿ ಸದಸ್ಯರಿಗೆ 4 ಕೆ.ಜಿ. ಅಕ್ಕಿ ಮತ್ತು 2 ಕೆ.ಜಿ. ರಾಗಿಯನ್ನು ನೀಡಲಾಗುತ್ತಿದೆ.

ಜೂನ್ ತಿಂಗಳ ಕೊನೆ ಮೂರು ದಿನಗಳಾದ 28, 29 ಹಾಗೂ 30 ರಂದು ಕೇಂದ್ರ ಕಚೇರಿಗಳಿಂದ ಸಂಬಂಧಿತ ಜಾಲತಾಣ ನಿರ್ವಹಣಾ ಕಾರ್ಯ ಇರುವುದರಿಂದ ಪಡಿತರ ಕಾರ್ಡುದಾರರಿಗೆ ವಿತರಣೆ ಸೌಕರ್ಯ ಸ್ಥಗಿತಗೊಳಿಸಲಿದ್ದಾರೆ. ಆದ್ದರಿಂದ ಎಲ್ಲಾ ಪಡಿತರ ಚೀಟಿದಾರರು ಈ ತಿಂಗಳು 27/6/2023ರ ಒಳಗಾಗಿ ಪಡಿತರಗಳನ್ನು ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿಗಳಲ್ಲಿ ಪಡೆದುಕೊಳ್ಳಲು ಸೂಚಿಸಲಾಗಿದ್ದು, ಪಡಿತರ ಚೀಟಿದಾರರು ಇಲಾಖೆಯ ನಿರ್ಣಯಕ್ಕೆ ಸಹಕರಿಸಬೇಕೆಂದು ಅನೌಪಚಾರಿಕ ಪಡಿತರ ಪ್ರದೇಶ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನ್ನಭಾಗ್ಯಕ್ಕೆ ರಾಜ್ಯದಲ್ಲೇ ಧಾನ್ಯ ಖರೀದಿಸಿ

ಮೈಸೂರು, ಜೂ 15(ಜಿಎ)–ರಾಜ್ಯದ ರೈತರಿಂದಲೇ ಭತ್ತ, ರಾಗಿ, ಜೋಳ ಖರೀದಿಸಿ ಅನ್ನಭಾಗ್ಯಕ್ಕೆ ಉಪಯೋಗಿಸಿಕೊಳ್ಳುವ ಮೂಲಕ ರಾಜ್ಯದ ರೈತರನ್ನ ರಕ್ಷಿಸಿ ಎಂದು ಮುಖ್ಯಮಂತ್ರಿಗಳಿಗೆ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಪತ್ರ ಬರೆಯುವ ಮೂಲಕ ಮನವಿ ಮಾಡಿದ್ದಾರೆ.



ರಾಜ್ಯ ಸರ್ಕಾರವು ಕೇಂದ್ರ ಸರ್ಕಾರ ಹಾಗೂ ಬೇರೆ ರಾಜ್ಯಗಳಿಗೆ ಅಕ್ಕಿ ಖರೀದಿಗೆ ಬೇಡಿಕೆ ಸಲ್ಲಿಸಲಾಗಿದ್ದು, ಅದಕ್ಕೆ ಕೇಂದ್ರ ಸರ್ಕಾರ ಸಮ್ಮತಿ ನೀಡಿಲ್ಲ ಎಂದು ಹೇಳುತ್ತಿದ್ದಾರೆ. ರಾಜ್ಯದ ಜನರ ತೆರಿಗೆ ಹಣವನ್ನು ಕೇಂದ್ರ ಸರ್ಕಾರಕ್ಕೆ ಕೊಡುವ ಬದಲು ರಾಜ್ಯದ ರೈತರಿಂದಲೇ ನೇರವಾಗಿ ಭತ್ತ, ರಾಗಿ, ಜೋಳ ಖರೀದಿ ಮಾಡಿ ಅದನ್ನ ಬಡವರಿಗೆ ಅನ್ನಭಾಗ್ಯ ಯೋಜನೆಯಲ್ಲಿ ವಿತರಿಸುವ ಯೋಜನೆ ಕೈಗೆತ್ತಿಕೊಂಡರೆ ಖಂಡಿತವಾಗಿ ರಾಜ್ಯದ ರೈತರಿಗೂ ಅನುಕೂಲವಾಗುತ್ತದೆ. ಬಡವರಿಗೂ ಅನುಕೂಲವಾಗುತ್ತದೆ. ಈ ದಿಕ್ಕಿನಲ್ಲಿ ತಾವು ಚಿಂತನೆ ನಡೆಸುವುದು ಬಹಳ ಮುಖ್ಯವಾಗಿದೆ. ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳಿ ಎಂದು ಸಲಹೆ ನೀಡಿದ್ದಾರೆ.

ಬಡವರಿಗೆ 200 ಯೂನಿಟ್ ಉಚಿತ ವಿದ್ಯುತ್ ನೀಡುವ ಯೋಜನೆ ಘೋಷಣೆ ಮಾಡಿದ್ದೀರಿ ಅದರ ಉತ್ಪಾದನೆಗೆ ತಗಲುವ ವೆಚ್ಚ ಎಷ್ಟು? ಸರ್ಕಾರದಿಂದ ಆಗುವ ಖರ್ಚು ಎಷ್ಟು? ಲೆಕ್ಕ ಹಾಕಬೇಕು. ಅದರ ಬದಲು ಸಣ್ಣಮಟ್ಟದ ಒಂದು ಕೆವಿ ಸಾಮರ್ಥ್ಯದ ಸೋಲಾರ್ ವಿದ್ಯುತ್ ಯೋಜನೆಯನ್ನು ಪ್ರತಿ ಮನೆಗೆ ಕಲ್ಪಿಸಿದರೆ ಶಾಶ್ವತವಾದ ಯೋಜನೆಯಾಗುತ್ತದೆ. ಇದರಿಂದ ಪರಿಸರ ಸಂರಕ್ಷಣೆಯಾಗುತ್ತದೆ. ಸರ್ಕಾರಕ್ಕೂ ಪ್ರತಿ ವರ್ಷ ಹೊರೆಯಾಗುವುದು ಕಡಿಮೆಯಾಗುತ್ತದೆ. ಈ ಬಗ್ಗೆಯೂ ತಾವು ಗಂಭೀರವಾಗಿ ಚಿಂತನೆ ನಡೆಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಬಾರಿ ದಾಖಲೆಯಿಲ್ಲದ 'ಯೋಗ ದಿನಾಚರಣೆ'ಗೆ ಸಿದ್ಧತೆ

● ಜೂ.21ರಂದು ಅರಮನೆ ಆವರಣದಲ್ಲಿ 10–15 ಸಾವಿರ ಯೋಗಪಟುಗಳಿಂದ ಯೋಗ ಪ್ರದರ್ಶನ ● ಜೂ.18ರಂದು ತಾಲೀಮು ನಡೆಸಲು ನಿರ್ಧಾರ



ಸಾಂದರ್ಭಿಕ ಚಿತ್ರ

ಮೈಸೂರು,ಜೂ.15(ಎಂಟಿವೈ)– ಅಂತಾರಾಷ್ಟ್ರೀಯ ಯೋಗ ದಿನದಂದು ಯಾವುದಾದರೂ ದಾಖಲೆ ಮಾಡಲೇಬೇಕೆಂದು ಉದ್ದೇಶಿಸುತ್ತಿದ್ದ ಮೈಸೂರಿನ ಯೋಗ ಸಂಸ್ಥೆಗಳು, ಈ ಬಾರಿ ಜಿಲ್ಲಾಡಳಿತದ ಸಮ್ಮತಿಯೊಂದಿಗೆ 10 ರಿಂದ 15 ಸಾವಿರ ಯೋಗಪಟುಗಳಿಂದ ಸಾಂಕೇತಿಕ ಯೋಗ ಪ್ರದರ್ಶನ ನಡೆಸುವುದಕ್ಕೆ ಮುಂದಾಗಿದೆ.

ಪ್ರತಿ ವರ್ಷದಂತೆ ಈ ಬಾರಿಯೂ ಜೂ.21ರಂದು ಜಿಲ್ಲಾಡಳಿತ ಹಾಗೂ ಜಿಲ್ಲಾ ಆಯುಷ್ ಇಲಾಖೆಯ ನೇತೃತ್ವದಲ್ಲಿಯೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಗುತ್ತಿದ್ದು, ಅರಮನೆ ಮುಂಭಾಗದ ಆವರಣವನ್ನು ಪ್ರದರ್ಶನಕ್ಕೆ ಆಯ್ಕೆ ಮಾಡಲಾಗಿದೆ. ಆಯುಷ್ ಇಲಾಖೆಗೆ ಮೈಸೂರು ಯೋಗ ಫೆಡರೇಷನ್ ಸಹಕಾರ ನೀಡುತ್ತಿದ್ದು, ಇದರೊಂದಿಗೆ ಮೈಸೂರಿನ ವಿವಿಧೆಡೆ ಕಾರ್ಯನಿರ್ವಹಿಸುತ್ತಿರುವ 500ಕ್ಕೂ ಹೆಚ್ಚು ಯೋಗ ಶಾಲೆಗಳು ಸಾಥ್ ನೀಡಲು ಮುಂದಾಗಿವೆ. ಇದರಿಂದ ಈ ಬಾರಿ ಸಾಂಕೇತಿಕ ಪ್ರದರ್ಶನ ನಡೆಸುತ್ತಿದ್ದರೂ, ಯೋಗಪಟುಗಳ ಶಕ್ತಿ ಪ್ರದರ್ಶನಕ್ಕೆ ಸದ್ದಿಲ್ಲದೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಈ ಬಾರಿ 'ಹರ್ ಘರ್ ಅಂಗಣ್ ಯೋಗ' ಎಂಬ ಶೀರ್ಷಿಕೆಯೊಂದಿಗೆ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲು ನಿರ್ಧರಿಸಿರುವುದರಿಂದ ಮೈಸೂರಿನ ಹಿರಿಮೆಗಾದರೂ ಹೆಚ್ಚು ಜನರನ್ನು ಸೇರಿಸಬೇಕೆಂದು ಹಠಕ್ಕೆ ಬಿದ್ದಿರುವ ಯೋಗ ಸಂಸ್ಥೆಗಳು ತಮ್ಮದೇ ಆದ ರೀತಿಯಲ್ಲಿ ಸಿದ್ಧತೆ ಮಾಡಿಕೊಳ್ಳುತ್ತಿವೆ.

ಯೋಗ ದಿನಾಚರಣೆಯ ಯಶಸ್ವಿಗಾಗಿ ಜಿಲ್ಲಾಡಳಿತ ಈಗಾಗಲೇ ಯೋಗ ಒಕ್ಕೂಟ ಹಾಗೂ ವಿವಿಧ ಯೋಗ ಸಂಸ್ಥೆಗಳ ಮುಖಂಡರೊಂದಿಗೆ ಸಭೆ ನಡೆಸಿದ್ದು, ಯೋಗ ಪ್ರದರ್ಶನ ಯಶಸ್ಸಿಗೆ ಕೈಗೊಳ್ಳಬೇಕಾದ ಕ್ರಮ ಕುರಿತಂತೆ ಚರ್ಚಿಸಿದೆ. ಸಾಧ್ಯವಾದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಯೋಗಪಟುಗಳನ್ನು ಸೇರಿಸಲು ಯೋಗಶಾಲೆಗಳು ಪ್ರಯತ್ನಿಸುವಂತೆ ಸಲಹೆ ನೀಡಲಾಗಿದೆ.

ವಿವಿಧೆಡೆ ತರಬೇತಿ: ಜಿಲ್ಲಾಡಳಿತದ ಮನವಿ ಮೇರೆಗೆ ಈಗಾಗಲೇ ವಿವಿಧ ಶಾಲಾ–ಕಾಲೇಜುಗಳಲ್ಲಿ ಯೋಗಪಟುಗಳಿಂದ ಯೋಗ ಪ್ರದರ್ಶನದ ತರಬೇತಿ ಆರಂಭಿಸಲಾಗಿದೆ. ಯೋಗ ದಿನಾಚರಣೆಯ ಪ್ರೊಟೋಕಾಲ್‌ನಂತೆ ಯೋಗ ತರಬೇತಿಯಲ್ಲೂ ಯೋಗಪಟುಗಳಿಗೆ ಯೋಗಾಸನದ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.

2014ರಲ್ಲಿ ವಿಶ್ವಸಂಸ್ಥೆ, ಜೂ.21ರಂದು ಅಂತಾರಾಷ್ಟ್ರೀಯ ಯೋಗ ದಿನವೆಂದು ಘೋಷಿಸಿದ ಬಳಿಕ ಜಾಗತಿಕ ಮಟ್ಟದಲ್ಲಿ ಯೋಗಕ್ಕೆ ಹೆಚ್ಚಿನ ಪ್ರಾಮುಖ್ಯತೆ ದೊರೆಯುತ್ತಿದೆ. ವರ್ಷದಿಂದ ವರ್ಷಕ್ಕೆ ಮೈಸೂರು ಸೇರಿದಂತೆ ವಿವಿಧೆಡೆ ಯೋಗ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿರುವುದು ಯೋಗ ಶಿಕ್ಷಣ ಸಂಸ್ಥೆಗಳ ಉತ್ಸಾಹ ಇಮ್ಮಡಿಗೊಳಿಸಿದೆ. ಕಳೆದ ವರ್ಷ ಮೈಸೂರಲ್ಲಿ ಯೋಗಾ ದಿನಾಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡಿದ್ದರು. ಆ ವೇಳೆ 17 ಸಾವಿರ ಯೋಗಪಟುಗಳು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು. ಈ ಬಾರಿ 12 ರಿಂದ 15 ಸಾವಿರ ಯೋಗ ಪಟುಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಶಾಲಾ–ಕಾಲೇಜು ವಿದ್ಯಾರ್ಥಿಗಳು ಭಾಗಿ: ಯೋಗ ದಿನದಂದು ವಿದ್ಯಾರ್ಥಿಗಳನ್ನು ಅರಮನೆ ಆವರಣಕ್ಕೆ ಕಳುಹಿಸಿಕೊಡುವಂತೆ ಡಿಡಿಪಿಯು ಹಾಗೂ ಡಿಡಿಪಿಐಗೆ ಜಿಲ್ಲಾಡಳಿತ ಸೂಚಿಸಿದೆ. ಆ ಮೂಲಕ ಮೈಸೂರಿನ ಎಲ್ಲಾ ಶಾಲಾ–ಕಾಲೇಜಿಗೆ ಸೂಚನಾ ಪತ್ರ ರವಾನಿಸಲಾಗಿದ್ದು, ಯೋಗಾಭ್ಯಾಸ ಮಾಡುವ ವಿದ್ಯಾರ್ಥಿಗಳು ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಸೂಚನೆ ನೀಡಲಾಗಿದೆ.

ಜೂ.21ರಂದು ಬೆಳಗ್ಗೆ 6.30 ರಿಂದ 7 ಗಂಟೆವರೆಗೆ ಯೋಗ ದಿನದ ಸಭಾ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಶ್ರೀವತ್ಸ, ಮೇಯರ್ ಶಿವ ಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಜಿ.ಪಂ ಸಿಇಓ ಕೆ.ಎಂ. ಗಾಯತ್ರಿ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಆಯುಷ್ ಅಧಿಕಾರಿ ಪುಷ್ಪ ಸೇರಿದಂತೆ ಹಲವರು ಪಾಲ್ಗೊಳ್ಳಲಿದ್ದಾರೆ.

ಪ್ರೋಟೋಕಾಲ್‌ನಲ್ಲಿನ ಆಸನಗಳು

ಸಭಾ ಕಾರ್ಯಕ್ರಮ ಮುಗಿದ ನಂತರ ಬೆಳಗ್ಗೆ 7 ರಿಂದ 7.45ರವರೆಗೆ ಯೋಗ ಪ್ರದರ್ಶನ ಆರಂಭವಾಗಲಿದೆ. 4 ನಿಮಿಷ ಲಘು ವ್ಯಾಯಾಮ ಮಾಡಿ ಯೋಗಾಸನಕ್ಕೆ ಸಿದ್ಧತೆ ಮಾಡಿಕೊಳ್ಳಲಿದ್ದಾರೆ. ತಾಡಾಸನ, ವೃಕ್ಷಾಸನ, ಪಾದ ಹಸ್ತಾಸನ, ಅರ್ಧ ಚಕ್ರಾಸನ, ತ್ರಿಕೋಣಾಸನ, ಸಮದಂಡಾಸನವನ್ನು ಮಾಡಲಿದ್ದಾರೆ. ನಂತರ ಭದ್ರಾಸನ, ವಜ್ರಾಸನ, ಅರ್ಧ ಉಷ್ಟ್ರಾಸನ, ಉಷ್ಟ್ರಾಸನ, ಶಶಂಕಾಸನ, ಉತ್ಥಾನ ಮಂಡೂಕಾಸನ, ವಕ್ರಾಸನ, ಮಕರಾಸನ ಹೀಗೆ ವಿವಿಧ ಆಸನಗಳನ್ನು 25 ನಿಮಿಷ ಕಾಲ ಮಾಡಬೇಕಾಗುತ್ತದೆ. ಬಳಿಕ ಕಪಾಲಭಾತಿ, ನಾಡಿಶೋಧ ಪ್ರಾಣಾಯಾಮ, ಶೀತಲಿ ಪ್ರಾಣಾಮಯ, ಭ್ರಾಮರಿ ಪ್ರಾಣಾಯಾಮದ ನಂತರ ಧ್ಯಾನದೊಂದಿಗೆ ಯೋಗ ದಿನಾಚರಣೆಯ ಕಾರ್ಯಕ್ರಮ ಸಮಾಪ್ತಿಯಾಗಲಿದೆ.

'ಪೇ ಅಂಡ್ ಪಾರ್ಕ್' ಕೈಬಿಡಲು ಒತ್ತಾಯಿಸಿ ಪ್ರತಿಭಟನೆ



ಮೈಸೂರು,ಜೂ.15(ಪಿಎಂ)– ಮೈಸೂರು ನಗರದ ಪ್ರಮುಖ ವಾಣಿಜ್ಯ ರಸ್ತೆಗಳಲ್ಲಿ ವಾಹನಗಳ ನಿಲುಗಡೆಗೆ ಶುಲ್ಕ ವಸೂಲಿ (ಪೇ ಅಂಡ್ ಪಾರ್ಕ್) ಜಾರಿಗೊಳಿಸಬೇಕೆಂಬ ಮೈಸೂರು ಮಹಾನಗರ ಪಾಲಿಕೆ ಕೌನ್ಸಿಲ್ ನಿರ್ಣಯ ಕೈಬಿಡಬೇಕೆಂದು ಒತ್ತಾಯಿಸಿ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ/ಸಿಪಿಐ–ಎಂ) ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಪಾಲಿಕೆ ಪ್ರಧಾನ ಕಚೇರಿಯ ಮುಖ್ಯ ದ್ವಾರದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಇದೇ ಜೂ.9ರಂದು ನಡೆದ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ 'ಪೇ ಅಂಡ್ ಪಾರ್ಕ್' ಜಾರಿಗೊಳಿಸಲು ಕೈಗೊಂಡಿರುವ ನಿರ್ಣಯ ಸೂಕ್ತವಲ್ಲ. ಈ ವ್ಯವಸ್ಥೆಯು ಜನತೆಗೆ ಹೊರೆಯಾಗಲಿದ್ದು, ಪೇ ಅಂಡ್ ಪಾರ್ಕ್ ವ್ಯವಸ್ಥೆಯನ್ನು ಗುತ್ತಿಗೆ ಪಡೆಯುವ ಖಾಸಗಿ ವ್ಯಕ್ತಿಗಳು ಸುಲಿಗೆ ಮಾಡಲು ಅವಕಾಶವಾಗಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮೀಣ ಭಾಗದಿಂದ ಅಗತ್ಯ ಪದಾರ್ಥಗಳನ್ನು ಖರೀದಿಸಲು ನಗರಕ್ಕೆ ಬರುವ ವಾಹನ ಸವಾರರು ಶೋಷಣೆಗೆ ಗುರಿಯಾಗಬೇಕಾಗುತ್ತದೆ. ನಗರದಲ್ಲಿ ವಾಹನ ನಿಲುಗಡೆಗೆ ಸೂಕ್ತ ಸ್ಥಳಗಳೇ ಇಲ್ಲ. ಪುರಭವನದಲ್ಲಿ ನಡೆಯುತ್ತಿರುವ ಕಾಮಗಾರಿ ಇನ್ನೂ ಪೂರ್ಣವಾಗಿಲ್ಲ. ಪ್ರತಿನಿತ್ಯ ಒಂದಲ್ಲಾ ಒಂದು ರಸ್ತೆಯಲ್ಲಿ ಕಾಮಗಾರಿ ನಡೆಯುತ್ತಿರುತ್ತವೆ. ಹೀಗಿರುವಾಗ ವಾಹನ ನಿಲುಗಡೆಗೆ ಶುಲ್ಕ ವಿಧಿಸಲು ಮುಂದಾಗಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ಸಾರ್ವಜನಿಕರ ವಾಹನಗಳ ನಿಲುಗಡೆಗೆ ಸಮರ್ಪಕ ಸ್ಥಳಗಳ ವ್ಯವಸ್ಥೆಯಾಗಬೇಕು. ಕೂಡಲೇ ಪೇ ಅಂಡ್ ಪಾರ್ಕ್ ನಿರ್ಣಯವನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದರು. ಸಿಪಿಐ (ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಜಿಲ್ಲಾ ಸಮಿತಿ ಸದಸ್ಯರಾದ ಕೆ.ಬಸವರಾಜ್, ಎಲ್.ಜಗನ್ನಾಥ್, ಜಿ.ಜಯರಾಂ, ಬಿ.ಎಂ.ಶಿವಣ್ಣ, ಸುಬ್ರಹ್ಮಣ್ಯ, ಕೃಷ್ಣ ಮೂರ್ತಿ, ಬಲರಾಂ, ಪುಟ್ಟಮಲ್ಲಯ್ಯ, ಸುರೇಶ್, ಆನಂದ್ ನಾಯಕ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬಿಜೆಪಿ ಮುಖಂಡ ಅಪ್ಪಣ್ಣರ ಜಾತಿ ಪ್ರಮಾಣಪತ್ರ ರದ್ದು

ಮೈಸೂರು ತಹಸೀಲ್ದಾರ್ ಕಚೇರಿ ಆದೇಶ ; ಎಸ್.ಹೆಚ್.ಸುಭಾಷ್ ಮಾಹಿತಿ

ಮೈಸೂರು,ಜೂ.15(ಪಿಎಂ)– ಅರಣ್ಯ ವಸತಿ ಹಾಗೂ ವಿಹಾರಧಾಮಗಳ ಸಂಸ್ಥೆ ಮಾಜಿ ನಿರ್ದೇಶಕ ಹಾಗೂ ಬಿಜೆಪಿ ಮುಖಂಡ ಅಪ್ಪಣ್ಣ ಅವರ ಪರಿಶಿಷ್ಟ ವರ್ಗದ ನಾಯಕ ಜಾತಿ ಪ್ರಮಾಣ ಪತ್ರವನ್ನು ಮೈಸೂರು ತಹಸೀಲ್ದಾರ್ ಕಚೇರಿ ರದ್ದುಪಡಿಸಿದೆ ಎಂದು ರಾಜ್ಯ ಬುಡಕಟ್ಟು ಹಿತರಕ್ಷಣಾ ಸಂಘದ ರಾಜ್ಯಾಧ್ಯಕ್ಷ ಎಸ್.ಹೆಚ್.ಸುಭಾಷ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇವರು ಮತ್ತು ಇವರ ಕುಟುಂಬದವರು ನಾಯಕ ಸಮುದಾಯಕ್ಕೆ ಸೇರಿದವರಲ್ಲ. ಬದಲಿಗೆ ಹಿಂದುಳಿದ ವರ್ಗದ 'ಪರಿವಾರ' ಸಮುದಾಯಕ್ಕೆ ಸೇರಿದ್ದಾರೆ. ಆದರೆ ಸುಳ್ಳು ದಾಖಲೆ ನೀಡಿ ಹಾಗೂ ಪ್ರಭಾವ ಬೀರಿ ಮೈಸೂರು ತಹಸೀಲ್ದಾರ್ ಕಚೇರಿಯಿಂದ ಪರಿಶಿಷ್ಟ ವರ್ಗದ ನಾಯಕ ಜಾತಿ ಪ್ರಮಾಣ ಪತ್ರ ಪಡೆದಿದ್ದರು. ಈ ಸಂಬಂಧ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಎಡಿಜಿಪಿ ಅವರಿಗೆ ದೂರು ನೀಡಿದ್ದೆ ಎಂದರು.

ದೂರಿನ ಹಿನ್ನೆಲೆಯಲ್ಲಿ ತನಿಖೆ ನಡೆಸಿದಾಗ ಇವರು ಮತ್ತು ಕುಟುಂಬಸ್ಥರು 'ಪರಿವಾರ' ಹಿಂದುಳಿದ ವರ್ಗಕ್ಕೆ ಸೇರಿದ್ದಾ ರೆಂದು ಸಾಬೀತು ಆಗಿದ್ದು, ಸಂಬಂಧಿಸಿದ ದಾಖಲೆಗಳನ್ನು ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ವಿಚಾರಣೆ ನಡೆಸಿ, ಇವರ ಕುಟುಂಬಸ್ಥರು ಹಿಂದುಳಿದ ವರ್ಗದ ಪರಿವಾರ ಸಮುದಾಯಕ್ಕೆ ಸೇರಿದ್ದಾರೆಂದು ತೀರ್ಮಾನಿಸಿದೆ. ಸದರಿ ಸಮಿತಿ ನಡಾವಳಿ ಆಧಾರದಲ್ಲಿ ಜೂ.12ರಂದು ಮೈಸೂರು ತಹಸೀಲ್ದಾರ್ ಅವರು ಅಪ್ಪಣ್ಣ ಅವರ ಪರಿಶಿಷ್ಟ ವರ್ಗದ ಜಾತಿ ಪ್ರಮಾಣ ಪತ್ರ ರದ್ದುಪಡಿಸಿ ಆದೇಶ ಹೊರಡಿಸಿದ್ದಾರೆ ಎಂದು ವಿವರಿಸಿದರು.

ಹೊಸ ಸರ್ಕಾರ ಬರುವ ಮುನ್ನವೇ ವಿದ್ಯುತ್ ದರ ಪರಿಷ್ಕರಣೆ ಸಂಬಂಧ ಅಧಿಸೂಚನೆ; ಈ ದರ ಏ.1ರಿಂದ ಪೂರ್ವಾನ್ವಯ

ದರ ಗೊಂದಲಕ್ಕೆ ಚೆಸ್ಕಾಂ ಸ್ಪಷ್ಟನೆ

ಮೈಸೂರು, ಜೂ.15– ಗೃಹಜ್ಯೋತಿ ಯೋಜನೆ ಪ್ರಯೋಜನ ಪಡೆಯಲು ಕಾತುರರಾಗಿದ್ದ ರಾಜ್ಯದ ಜನತೆಗೆ ಮೇ ತಿಂಗಳ ವಿದ್ಯುತ್ ಬಿಲ್ ಶಾಕ್ ನೀಡಿದ್ದಲ್ಲದೆ, ಇದು ರಾಜಕೀಯ ಕೆಸರೆರಚಾಟಕ್ಕೂ ಕಾರಣವಾಗಿದೆ. ಈ ಬಗ್ಗೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಚೆಸ್ಕಾಂ) ವತಿಯಿಂದ ವಿದ್ಯುತ್ ದರ ಪರಿಷ್ಕರಣೆ ಬಗ್ಗೆ ಸಾರ್ವಜನಿಕರಿಗೆ ಸ್ಪಷ್ಟೀಕರಣ ನೀಡಲಾಗಿದೆ.

ಭಾರತೀಯ ವಿದ್ಯುಚ್ಛಕ್ತಿ ಕಾಯ್ದೆ ಅನ್ವಯ ರಾಜ್ಯದ ಎಲ್ಲಾ 5 ವಿದ್ಯುತ್ ಸರಬರಾಜು ಕಂಪನಿಗಳಿಗೆ ವಿದ್ಯುತ್ ದರ ನಿಗದಿಪಡಿಸಲು 2002ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ (ಕೆಇಆರ್‌ಸಿ)ವನ್ನು ರಚಿಸಲಾಗಿದೆ. ಅಂತೆಯೇ ಎಲ್ಲಾ ಎಸ್ಕಾಂಗಳು ತಮ್ಮ ವೆಚ್ಚದ ಮೇಲಿನ ನಿರೀಕ್ಷಿತ ಆದಾಯದ ವಿವರಗಳನ್ನು (ಇಆರ್‌ಸಿ ಫೈಲಿಂಗ್) ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ಕೆಇಆರ್‌ಸಿಗೆ ಸಲ್ಲಿಸುತ್ತವೆ. ಇದನ್ನು ಪರಿಶೀಲಿಸುವುದರ ಜೊತೆಗೆ ಎಲ್ಲಾ ಎಸ್ಕಾಂಗಳು ಮತ್ತು ಸಾರ್ವಜನಿಕರ ಅಹವಾಲು ಆಲಿಸಿ ಕೆಇಆರ್‌ಸಿಯು ಆರ್ಥಿಕ ವರ್ಷದ ಮಾರ್ಚ್ ಅಂತ್ಯದಲ್ಲಿ ವಿದ್ಯುತ್ ದರ ಪರಿಷ್ಕರಿಸಿ, ಏಪ್ರಿಲ್ 1ರಿಂದ ಅನ್ವಯವಾಗುವಂತೆ ದರ ನಿಗದಿಪಡಿಸುತ್ತದೆ.

ಆದರೆ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಕೆಇಆರ್‌ಸಿ ಪ್ರಸಕ್ತ ವರ್ಷದ ವಿದ್ಯುತ್ ದರ ಪರಿಷ್ಕರಣೆ ಅಧಿಸೂಚನೆಯನ್ನು ಮೇ 12ರಂದು ಹೊರಡಿಸಿತು. ರಾಜ್ಯದಲ್ಲಿ ಮೇ 20ರಂದು ಹೊಸ ಸರ್ಕಾರ ರಚಿಸಲಾಯಿತು. (ಮೇ 10ಕ್ಕೆ ಮತದಾನ, 13ಕ್ಕೆ ಫಲಿತಾಂಶ). ಅಂದರೆ ವಿದ್ಯುತ್ ದರ ಪರಿಷ್ಕರಣೆ ಅಧಿಸೂಚನೆಯನ್ನು ನೂತನ ಸರ್ಕಾರ ಅಸ್ತಿತ್ವಕ್ಕೆ ಬರುವ ಮುನ್ನವೇ ಘೋಷಿಸಲಾಗಿತ್ತು.

ವಿದ್ಯುತ್ ದರ ಪರಿಷ್ಕರಣೆ ಜೂನ್ ತಿಂಗಳ ಬಿಲ್ಲಿಂಗ್‌ನಿಂದ ಅನ್ವಯವಾಗುವಂತೆ ಜಾರಿಗೆ ಬಂದಿದೆ. ಏಪ್ರಿಲ್ ಮತ್ತು ಮೇ ತಿಂಗಳ ವಿದ್ಯುತ್ ದರ ಹೆಚ್ಚಳದ ಜೊತೆಗೆ ಮಾರ್ಚ್ ತಿಂಗಳ ಹೆಚ್ಚಿನ ವಿದ್ಯುತ್ ಖರೀದಿ ವೆಚ್ಚ ಎರಡೂ ಸೇರಿರುವುದರಿಂದ ಜೂನ್ ತಿಂಗಳ ಬಿಲ್‌ನಲ್ಲಿ ವಿದ್ಯುತ್ ಶುಲ್ಕ ಹೆಚ್ಚಾಗಿರುವಂತೆ ಕಂಡುಬರುತ್ತದೆ. ನಂತರದಲ್ಲಿ ಬರುವ ವಿದ್ಯುತ್ ಬಿಲ್ ತುಲನಾತ್ಮಕವಾಗಿ ಕಡಿಮೆಯಾಗಬಹುದು ಎಂದು ನಿರೀಕ್ಷಿಸಲಾಗಿದೆ.

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗೃಹಜ್ಯೋತಿ ಯೋಜನೆಯಡಿಯಲ್ಲಿ ಜುಲೈ ತಿಂಗಳ ವಿದ್ಯುತ್ ಬಳಕೆಗೆ ಆಗಸ್ಟ್ ತಿಂಗಳ ಬಿಲ್‌ನಲ್ಲಿ ಸಹಾಯ ಧನವನ್ನು ಗ್ರಾಹಕರಿಗೆ ನೀಡಲು ನಿರ್ಧರಿಸಲಾಗಿದೆ ಗ್ರಾಹಕರ ನ್ಯಾಯಯುತ ದೂರುಗಳನ್ನು ಬಗೆಹರಿಸಲು ಎಲ್ಲಾ ಎಸ್ಕಾಂಗಳಿಗೆ ನಿರ್ದೇಶನ ನೀಡಲಾಗಿದೆ ಗೃಹಜ್ಯೋತಿ ಯೋಜನೆಯಡಿಯಲ್ಲಿ ಗೃಹಬಳಕೆ ಗ್ರಾಹಕರಿಗೆ ಹಿಂಬಾಕಿ ಪಾವತಿಸಲು ಸೆಪ್ಟೆಂಬರ್‌ವರೆಗೆ ಕಾಲಾವಕಾಶ ನೀಡಲಾಗಿದೆ ಎಂದು ಸೆಸ್ಕ್ ಸ್ಪಷ್ಟಪಡಿಸಿದೆ.

ದೆಹಲಿಯಲ್ಲಿ ಬೆಂಕಿ ಅವಘಡ; ಕಟ್ಟಡದಿಂದ ಜಿಗಿದು ಪಾರಾದ ವಿದ್ಯಾರ್ಥಿಗಳು

ಹೊಸದಿಲ್ಲಿ : ದೆಹಲಿಯ ಮುಖರ್ಜಿ ನಗರದಲ್ಲಿ ಗುರುವಾರ ಕಟ್ಟಡವೊಂದರಲ್ಲಿ ಅಗ್ನಿ ಅವಘಡ ಸಂಭವಿಸಿದ ನಂತರ ಕೋಚಿಂಗ್ ಸೆಂಟರ್‌ನ ಒಳಗಿದ್ದ ವಿದ್ಯಾರ್ಥಿಗಳು ಕಟ್ಟಡದಿಂದ ಜಿಗಿದು ಪ್ರಾಣ ಉಳಿಸಿಕೊಂಡಿದ್ದಾರೆ. ಮಧ್ಯಾಹ್ನ 12.30ಕ್ಕೆ ಬೆಂಕಿ ಕಾಣಿಸಿಕೊಂಡಿದ್ದು, ಕಟ್ಟಡದ ಮೇಲಿನ ಮಹಡಿಯಿಂದ ಹೊಗೆ ಹೊರಬರುತ್ತಿರುವುದನ್ನು ನೋಡಿ ವಿದ್ಯಾರ್ಥಿಗಳು ತಮ್ಮ ಬೆನ್ನಿನ ಮೇಲೆ ಬ್ಯಾಗ್‌ಗಳನ್ನು ಹಾಕಿಕೊಂಡು ತಂತಿಗಳನ್ನು ಬಳಸಿ ಕೆಳಗೆ ಹಾರಿದ್ದಾರೆ. ನಾಲ್ವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ವಿದ್ಯಾರ್ಥಿಗಳು ಕೆಳಗಿಳಿಯುವಾಗ ಇತರ ಮಹಡಿಗಳಲ್ಲಿ ಅಳವಡಿಸಲಾದ ಎಸಿಗಳನ್ನೂ ಸಹ ಬಳಸಿಕೊಂಡು ಪ್ರಾಣ ಉಳಿಸಿಕೊಂಡರು. 11 ಅಗ್ನಿಶಾಮಕ ವಾಹನಗಳನ್ನು ಸ್ಥಳಕ್ಕೆ ಕಳುಹಿಸಲಾಗಿದ್ದು, ಅಧಿಕಾರಿಗಳು ವಿದ್ಯಾರ್ಥಿಗಳನ್ನು ಅಪಾಯದಿಂದ ಪಾರು ಮಾಡಲು ಸಹಾಯ ಮಾಡಿದರು. ಬೆಂಕಿಯನ್ನು ನಿಯಂತ್ರಣಕ್ಕೆ ತರಲಾಗಿದೆ ಎಂದು ದಿಲ್ಲಿ ಅಗ್ನಿಶಾಮಕ ಸೇವೆಗಳ ನಿರ್ದೇಶಕ ಅತುಲ್ ಗಾರ್ಗ್ ತಿಳಿಸಿದ್ದಾರೆ.



ಸಿಇಟಿ ಫಲಿತಾಂಶ ಪ್ರಕಟ: 2,03,381 ವಿದ್ಯಾರ್ಥಿಗಳು ಬಿಇ ವ್ಯಾಸಂಗಕ್ಕೆ ಅರ್ಹರು

ಇಂಜಿನಿಯರಿಂಗ್‌ನಲ್ಲಿ ಬೆಂಗಳೂರಿನ ವಿಘ್ನೇಶ್ ನಟರಾಜ್ ಕುಮಾರ್, ಬಿಎಸ್ಸಿ ಕೃಷಿ ವಿಭಾಗದಲ್ಲಿ ಮಂಗಳೂರಿನ ಎಸ್.ಎಚ್.ಭೈರೇಶ್, ನ್ಯಾಚುರೋಪತಿ, ಯೋಗ ವಿಜ್ಞಾನದಲ್ಲಿ ಬೆಂಗಳೂರಿನ ಕೆ.ಪ್ರತೀಕ್ಷಾ, ಬಿಎಸ್ಸಿ ವೆಟರ್ನರಿಯಲ್ಲಿ ಬೆಂಗಳೂರಿನ ಮಾಳವಿಕಾ ಕಪೂರ್ ಪ್ರಥಮ

ಬೆಂಗಳೂರು, ಜೂ.15(ಕೆಎಂಶಿ)– ಎಂಜಿನಿಯರಿಂಗ್ ಸೇರಿದಂತೆ ಹಲವು ವೃತ್ತಿಪರ ಕೋರ್ಸುಗಳ ಪ್ರವೇಶಾತಿಗೆ ನಡೆಸಿದ 2023ನೇ ಸಾಲಿನ ಸಿಇಟಿ ಫಲಿತಾಂಶ ಹೊರಬಿದ್ದಿದ್ದು, 2,03,381 ವಿದ್ಯಾರ್ಥಿಗಳು ಬಿ.ಇ. ವ್ಯಾಸಂಗಕ್ಕೆ ಅರ್ಹತೆ ಗಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸಿಇಟಿ ಫಲಿತಾಂಶದ ವಿವರಗಳನ್ನು ನೀಡಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಮೇ 20 ಮತ್ತು 21ರಂದು ರಾಜ್ಯದ 592 ಪರೀಕ್ಷಾ ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ ನಡೆಸಲಾಗಿತ್ತು. 1,14,565 ಬಾಲಕರು ಮತ್ತು 1,29,780 ಬಾಲಕಿಯರು ಸೇರಿದಂತೆ ಒಟ್ಟು 2,44,345 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು.

ಬಿ.ಎಸ್ಸಿ (ಕೃಷಿ) ಕೋರ್ಸಿಗೆ 1,64,187, ಪಶುಸಂಗೋಪನಾ ವಿಜ್ಞಾನಕ್ಕೆ 1,66,756, ಯೋಗ ಮತ್ತು ನ್ಯಾಚುರೋಪತಿಗೆ 1,66,746, ಬಿ.ಫಾರ್ಮಾಗೆ 2,06,191 ಮತ್ತು ಫಾರ್ಮಾ.ಡಿ ಕೋರ್ಸಿಗೆ 2,06,340 ಅಭ್ಯರ್ಥಿಗಳು ಅರ್ಹತೆ ಸಂಪಾದಿಸಿಕೊಂಡಿದ್ದಾರೆ. ಈ ವರ್ಷದಿಂದ ಬಿ.ಎಸ್ಸಿ (ನರ್ಸಿಂಗ್) ಕೋರ್ಸಿಗೂ ಸಿಇಟಿ ಪರೀಕ್ಷೆ ನಡೆಸಲಾಗುತ್ತಿದ್ದು, ಇದಕ್ಕೆ 1,66,808 ಮಂದಿ ನಿಗದಿತ ಅರ್ಹತೆ ಗಳಿಸಿಕೊಂಡಿದ್ದಾರೆ ಎಂದು ಅವರು ವಿವರಿಸಿದರು.

ಫಲಿತಾಂಶವು ಪ್ರಾಧಿಕಾರದ ವೆಬ್‌ಸೈಟ್



http://kea.kar.nic.inನ ಲ್ಲಿ ಲಭ್ಯವಿದ್ದು, ಅಭ್ಯರ್ಥಿಗಳು ವಿಷಯವಾರು ಅಂಕಗಳ ವಿವರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಯಾವುದಾದರೂ ಅಭ್ಯರ್ಥಿಗಳ ರ್‍ಯಾಂಕ್ ತಡೆಹಿಡಿಯಲ್ಪಟ್ಟಿದ್ದರೆ, ಅಂಥವರು ತಮ್ಮ ಅರ್ಹತಾ ಪರೀಕ್ಷೆಯ ಅಂಕಪಟ್ಟಿಯ ಪ್ರತಿಯನ್ನು keauthority-ka@nic.inಗೆ ಇ–ಮೇಲ್ ಮಾಡಿ ಅಥವಾ ಪ್ರಾಧಿಕಾರಕ್ಕೆ ಖುದ್ದಾಗಿ ಸಲ್ಲಿಸಿ, ರ್‍ಯಾಂಕಿಂಗ್ ಪಡೆದುಕೊಳ್ಳಬಹುದು ಎಂದು ಅವರು ಹೇಳಿದರು.

ಮಿಕ್ಕಂತೆ 2023ರ ಯು.ಜಿ.ನೀಟ್ ಪರೀಕ್ಷೆಯ ಫಲಿತಾಂಶ ಬಂದ ಬಳಿಕ, ಅಲ್ಲಿ ಗಳಿಸಿರುವ ಅಂಕಗಳ ಆಧಾರದ ಮೇಲೆ ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ ಮತ್ತು ಹೋಮಿಯೋಪತಿ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳನ್ನು ಅರ್ಹತೆಗೆ ಅನುಗುಣವಾಗಿ ಪರಿಗಣಿಸಲಾಗುವುದು. ಹಾಗೆಯೇ, ಈ ವರ್ಷದ 'ನಾಟಾ' ಅಂಕಗಳ ಆಧಾರದ ಮೇಲೆ ಆರ್ಕಿಟೆಕ್ಚರ್ ಕೋರ್ಸುಗಳ ಪ್ರವೇಶಕ್ಕೆ ರ್‍ಯಾಂಕನ್ನು ಪ್ರಕಟಿಸಲಾಗುವುದು ಎಂದು ಸಚಿವರು ತಿಳಿಸಿದರು.

ದಾಖಲೆಗಳ ಆನ್‌ಲೈನ್ ಪರಿಶೀಲನೆ ನಂತರ ಕೌನ್ಸೆಲಿಂಗ್ ನಡೆಸಲಾಗುವುದು ಎಂದು ಸಚಿವರು ತಿಳಿಸಿದರು. ಸಿಇಟಿ ಬರೆದ ಅಭ್ಯರ್ಥಿಗಳಲ್ಲಿ ಎಂಜಿನಿಯರಿಂಗ್ ವಿಭಾಗದಲ್ಲಿ ಬೆಂಗಳೂರಿನ ಶ್ರೀಕುಮಾರನ್ಸ್ ಚಿಲ್ಡ್ರನ್ಸ್ ಹೋಮ್ ಕಾಲೇಜಿನ ವಿದ್ಯಾರ್ಥಿ ವಿಘ್ನೇಶ್ ನಟರಾಜ್‌ಕುಮಾರ್ (ಶೇ.97.899), ಬಿ.ಎಸ್ಸಿ (ಕೃಷಿ) ವಿಭಾಗದಲ್ಲಿ ಮಂಗಳೂರಿನ ಎಕ್ಸ್‌ಪರ್ಟ್ ಪಿಯು ಕಾಲೇಜಿನ ಎಸ್.ಎಚ್. ಭೈರೇಶ್ (ಶೇ.96.75), ನ್ಯಾಚುರೋಪತಿ ಮತ್ತು ಯೋಗವಿಜ್ಞಾನ ವಿಭಾಗದಲ್ಲಿ ಶ್ರೀಕುಮಾರನ್ಸ್ ಚಿಲ್ಡ್ರನ್ಸ್ ಹೋಂ ಸಂಯುಕ್ತ ಪಿಯು ಕಾಲೇಜಿನ ಕೆ.ಪ್ರತೀಕ್ಷಾ (ಶೇ.98.611) ಮತ್ತು ಬಿ.ಎಸ್ಸಿ (ವೆಟರ್ನರಿ) ವಿಭಾಗದಲ್ಲಿ ಬೆಂಗಳೂರಿನ ಮಹೇಶ್ ಪಿಯು ಕಾಲೇಜಿನ ಮಾಳವಿಕಾ ಕಪೂರ್ (ಶೇ 97.222) ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.

ಶೇ.10ರಷ್ಟು ಶುಲ್ಕ ಹೆಚ್ಚಳ: ಹಿಂದಿನ ಸರ್ಕಾರವೇ ಈ ವರ್ಷದ ಎಂಜಿನಿಯರಿಂಗ್ ಕೋರ್ಸುಗಳಿಗೆ ಶೇ.10ರಷ್ಟು ಶುಲ್ಕ ಹೆಚ್ಚಳ ಮಾಡಿತ್ತು. ಅದನ್ನು ನಿಯಮಗಳ ಪ್ರಕಾರ ಮಾಡಿದ್ದಾರೆ ಎನ್ನುವುದು ದಾಖಲೆಗಳನ್ನು ಪರಿಶೀಲಿಸಿದ ನಂತರ ಗೊತ್ತಾಗಿದೆ.

ಹೀಗಾಗಿ ಈ ವಿಷಯದಲ್ಲಿ ಯಾವುದೇ ಗೊಂದಲ ಇಲ್ಲ. ಇದೇ ವ್ಯವಸ್ಥೆ ಈ ವರ್ಷವೂ ಮುಂದುವರಿಯುತ್ತದೆ ಎಂದು ಸಚಿವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯ ಫಲಿತಾಂಶ ಬಂದ ನಂತರ ಅವರಿಗೂ ರ್‍ಯಾಂಕ್ ನೀಡಲಾಗುವುದು. ರಾಜ್ಯದಲ್ಲಿ ಈ ಬಾರಿ ಒಟ್ಟು 1.11 ಲಕ್ಷ ಎಂಜಿನಿಯರಿಂಗ್ ಸೀಟುಗಳು ಲಭ್ಯವಿದ್ದು, ಇದರಲ್ಲಿ 53,248 ಸೀಟುಗಳನ್ನು ಸರ್ಕಾರಿ ಕೋಟಾದಲ್ಲಿ ಹಂಚಿಕೆ ಮಾಡಲಾಗುವುದು ಎಂದು ಸಚಿವ ಡಾ. ಸುಧಾಕರ್ ತಿಳಿಸಿದರು.

ಇದಲ್ಲದೆ, ಕಾಮೆಡ್–ಕೆ ಮೂಲಕ 25,171 ಸೀಟು, ಮ್ಯಾನೇಜ್ಮೆಂಟ್ ಕೋಟಾದಡಿ 33,463 ಎಂಜಿನಿಯರಿಂಗ್ ಸೀಟುಗಳು ಲಭ್ಯವಿದೆ ಎಂದು ಅವರು ವಿವರಿಸಿದರು.

ಕಳೆದ ಸಾಲಿನ ಅಥವಾ ಅದರ ಹಿಂದಿನ ವರ್ಷಗಳಲ್ಲಿ ದ್ವಿತೀಯ ಪಿಯುಸಿ ಬರೆದ ವಿದ್ಯಾರ್ಥಿಗಳ ಹಾಗೂ ಸಿಬಿಎಸ್‌ಇ, ಐಸಿಎಸ್‌ಇ ಬೋರ್ಡ್ ಪರೀಕ್ಷೆ ಬರೆದ ಅಭ್ಯರ್ಥಿಗಳ ಸಿಇಟಿ ರ್‍ಯಾಂಕ್ ಪ್ರಕಟಣೆ ಆಗದಿದ್ದಲ್ಲಿ ಪ್ರಾಧಿಕಾರದ ಈ ಲಿಂಕ್‌ನಲ್ಲಿ ttps://cetonline.Karnataka.gov.in/marksentry2023/forms/login.aspx ಭೌತ ವಿಜ್ಞಾನ, ಗಣಿತ, ರಸಾಯನ ವಿಜ್ಞಾನ, ಜೀವ ವಿಜ್ಞಾನ ಹಾಗೂ ಇಂಗ್ಲಿಷ್ ಭಾಷೆಯ ಅಂಕಗಳನ್ನು ನಮೂದಿಸಲು ಅವಕಾಶ ನೀಡಲಾಗಿದೆ. ಇದು ಕೊನೆಯ ಅವಕಾಶವಾಗಿದ್ದು ಇದೇ 17ರ ಸಂಜೆ 5 ಗಂಟೆಯವರೆಗೆ ಅಂಕ ದಾಖಲಿಸಲು ಅನುಮತಿ ನೀಡಲಾಗಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸುಂಟಿಕೊಪ್ಪ: ಡೆಂಗ್ಯೂ ಜ್ವರ, ಹೈರಾಣಾಗಿರುವ ಗ್ರಾಮಸ್ಥರು



● ಗ್ರಾಮಗಳಿಗೆ, ವಾರ್ಡ್‌ಗಳಿಗೆ ಕೊಡಗು ಜಿಪಂ ಸಿಇಓ, ಡಿಹೆಚ್‌ಓ ಭೇಟಿ ● ಮುಂಜಾಗ್ರತಾ ಕ್ರಮ ಕೈಗೊಳ್ಳಲು ಪಂಚಾಯಿತಿಗೆ ಸೂಚನೆ



ಸುಂಟಿಕೊಪ್ಪ, ಜೂ.15– ಸುಂಟಿಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಡೆಂಗ್ಯೂ ಜ್ವರ ಕಾಣಿಸಿಕೊಂಡು ಜನ ಸಾಮಾನ್ಯರು ಹೈರಾಣಾಗಿರುವುದನ್ನು ಗಮನಿಸಿದ ಕೊಡಗು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ಆಕಾಶ್ ಹಾಗೂ ಡಿಹೆಚ್‌ಓ ಡಾ.ಸತೀಶ್‌ಕುಮಾರ್ ಅವರುಗಳು ವಿವಿಧ ವಾರ್ಡ್‌ಗಳಿಗೆ ತೆರಳಿ ಸ್ಥಳ ಪರಿಶೀಲಿಸಿ ಮುಂಜಾಗ್ರತ ಕ್ರಮ ಕೈಗೊಳ್ಳಲು ಸ್ಥಳೀಯ ಪಂಚಾಯಿತಿಗೆ ಸೂಚಿಸಿದ್ದಾರೆ.

ಸುಂಟಿಕೊಪ್ಪ ಪಟ್ಟಣದಲ್ಲಿ ಕಳೆದ 1 ತಿಂಗಳಿನಿಂದ ಡೆಂಗ್ಯೂ ಜ್ವರದಿಂದ ಬಳಲಿದ ನೂರಾರು ಮಂದಿ ಮಡಿಕೇರಿ ಜಿಲ್ಲಾಸ್ಪತ್ರೆ, ಕುಶಾಲನಗರ ಆರೋಗ್ಯ ಸಮುದಾಯ ಕೇಂದ್ರ ಹಾಗೂ ಕುಶಾಲನಗರದ ಕೆಲ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸುಂಟಿಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲೂ ಜ್ವರದಿಂದ ಬಳಲುತ್ತಿರುವವರು ಪ್ರತಿನಿತ್ಯ ನೂರಾರು ಮಂದಿ ಹೊರ ರೋಗಿಗಳಾಗಿ ಬಂದು ಪ್ರಥಮ ಚಿಕಿತ್ಸೆ ಪಡೆದುಕೊಂಡು ಹೆಚ್ಚಿನ ಚಿಕಿತ್ಸೆ ಜಿಲ್ಲಾಸ್ಪತ್ರೆಗೆ ತೆರಳುತ್ತಿರುವ ಬಗ್ಗೆ 'ಮೈಸೂರು ಮಿತ್ರ' ವರದಿ ಮೂಲಕ ಜಿಲ್ಲಾಡಳಿತದ ಗಮನ ಸೆಳೆದಿತ್ತು.

ಈ ವರದಿಯನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾಡಳಿತ ಮುಖ್ಯಸ್ಥರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸುಂಟಿಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಡೆಂಗ್ಯೂ ಜ್ವರದ ಕುರಿತು ಮಾಹಿತಿ ಪಡೆದುಕೊಂಡರು. ಮಾತ್ರವಲ್ಲದೇ ಕೆಲವು ವಾರ್ಡ್‌ಗಳಿಗೆ ತೆರಳಿ ಪರಿಶೀಲಿಸಿದರು.

ಗ್ರಾಪಂಗೆ ಸಿಇಓ ಭೇಟಿ: ಸುಂಟಿಕೊಪ್ಪ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಆಕಾಶ್, ಪಂಚಾಯಿತಿಯಿಂದ ಶುಚಿತ್ವ ಕಾಪಾಡಲು ಆದ್ಯತೆ ನೀಡಬೇಕು. ಚರಂಡಿಯಲ್ಲಿ ನೀರು ನಿಂತಿರುವುದನ್ನು ತೆರವುಗೊಳಿಸಬೇಕು. ಸೊಳ್ಳೆಗಳು ನೀರು ನಿಂತಿರುವ ಸ್ಥಳವನ್ನು ಅವಾಸಸ್ಥಾನವಾಗಿ ಪರಿವರ್ತಿಸುವುದರಿಂದ ಡೆಂಗ್ಯೂ ಕಾಣಿಸಿಕೊಳ್ಳಬಹುದು. ಈ ಬಗ್ಗೆ ಪಂಚಾ ಯಿತಿಯಿಂದ ತಕ್ಷಣ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಅಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಸೂಚಿಸಿದರು.

ಗ್ರಾ.ಪಂ. ಸದಸ್ಯರಾದ ರಫೀಕ್‌ಖಾನ್ ಮಾತನಾಡಿ, ಶುಚಿತ್ವಕ್ಕಾಗಿ ಈಗಾಗಲೇ ಔಷಧಿ ಸಿಂಪಡಿಸುವ ಕಾರ್ಯ ಪೌರ ಕಾರ್ಮಿಕರಿಂದ ನಿರ್ವಹಿಸಲಾಗಿದೆ ಎಂದು ಸಿಇಓ ಅವರಿಗೆ ಮಾಹಿತಿ ನೀಡಿದರು. ಪಿ.ಆರ್. ಸುನಿಲ್ ಕುಮಾರ್ ಸುಂಟಿಕೊಪ್ಪ ಗ್ರಾ.ಪಂ.ಗೆ ಕಸ ವಿಲೇವಾರಿಗಾಗಿ ಮತ್ತೊಂದು ವಾಹನದ ಅವಶ್ಯಕತೆ ಇದೆ. ಇರುವ 1 ವಾಹನದಿಂದ ಎಲ್ಲಾ ವಾರ್ಡ್‌ಗಳಿಗೆ ತೆರಳಿ ಕಸ ಸಂಗ್ರಹ ಮಾಡಲು ಸಾಧ್ಯವಾಗುತ್ತಿಲ್ಲ, ಹೀಗಾಗಿ ಮತ್ತೊಂದು ವಾಹನದ ವ್ಯವಸ್ಥೆ ಕಲ್ಪಿಸಿಕೊಡುವಂತೆ ಮನವಿ ಮಾಡಿದರು.

ಮನೆಗಳಲ್ಲಿ ಸಂಗ್ರಹವಾಗುವ ಕಸ 2,3 ದಿನ ವಾರಗಟ್ಟಲೇ ಅಲ್ಲೇ ಉಳಿಯುತ್ತಿದೆ. ಇದು ಸಾಂಕ್ರಾಮಿಕ ರೋಗ ಹರಡಲು ಪ್ರಮುಖ ಕಾರಣವಾಗಿದೆ. 7 ವಾರ್ಡ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಬೋರ್‌ವೆಲ್ ಕೆಟ್ಟು ಹೋಗಿದೆ ಎಂದು ಸಮಸ್ಯೆಗಳನ್ನು ವಿವರಿಸಿದರು.

ಮನವಿಗೆ ಸ್ಪಂದಿಸಿದ ಜಿ.ಪಂ. ಸಿಇಓ ಡಾ.ಆಕಾಶ್, ಕಸ ವಿಲೇವಾರಿಗೆ ಬದಲಿ ವಾಹನ ವ್ಯವಸ್ಥೆ ಕಲ್ಪಿಸಿ ಕೊಡಲಾಗುವುದು. ಜಲಜೀವನ್ ಯೋಜನೆಯಡಿ ನೀರಿನ ಸೌಕರ್ಯ ಒದಗಿಸಲಾಗುವುದೆಂದು ಭರವಸೆ ನೀಡಿದರು.

ಸದಸ್ಯರಿಗೂ ಡೆಂಗ್ಯೂ

ಡೆಂಗ್ಯೂ ಜ್ವರ ಬಿಸಿ ಸುಂಟಿಕೊಪ್ಪ ಪಂಚಾಯಿತಿ ಆಡಳಿತ ಮಂಡಳಿಗೂ ತಟ್ಟಿದೆ. ಸುಂಟಿಕೊಪ್ಪ ಗ್ರಾಪಂ ಅಧ್ಯಕ್ಷೆ ಶಿವಮ್ಮ, ಪಿಡಿಓ ವೇಣುಗೋಪಾಲ್, ಸದಸ್ಯರುಗಳಾದ ಆಲಿಕುಟ್ಟಿ, ಶಬೀರ್ ಇವರುಗಳಿಗೂ ಡೆಂಗ್ಯೂ ಜ್ವರ ಕಾಣಿಸಿಕೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದಾರೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್‌ಕುಮಾರ್ ಈ ಬಗ್ಗೆ ಪ್ರತಿಕ್ರಿಯಿಸಿ, ಎಲ್ಲರಿಗೂ ಚಿಕಿತ್ಸೆ ನೀಡಲಾಗುತ್ತಿದೆ. ಆದರೂ ಸಾಂಕ್ರಾಮಿಕ ನಿಯಂತ್ರಣಕ್ಕೆ ಬರುತ್ತಿಲ್ಲ ಎಂದು ಮಾಹಿತಿ ನೀಡಿದರು. ಈ ಸಂದರ್ಭ ತಾಲೂಕು ಆರೋಗ್ಯ ಅಧಿಕಾರಿ ಡಾ.ಶ್ರೀನಿವಾಸ್, ಸುಂಟಿಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಪ್ರಗತಿ, ಹೆಲ್ತ್ ಇನ್ಸ್‌ಪೆಕ್ಟರ್‌ಗಳಾದ ಶೀನಿವಾಸ್, ಮುತ್ತುರಾಜ್, ಜನಾರ್ಧನ, ವಿಶ್ವಜ್ಞ, ಹಾಗೂ ಪಂಚಾಯಿತಿ ಸಿಬ್ಬಂದಿಗಳು ಹಾಜರಿದ್ದರು.

ನಾಗರಹೊಳೆಯ ಆದಿವಾಸಿ ಜಮ್ಮ-ಪಾಳೇ ಹಕ್ಕು ಸ್ಥಾಪನಾ ಸಮಿತಿಯ ಬೇಡಿಕೆಗೆ ಜಿಲ್ಲಾಡಳಿತ ಸ್ಪಂದನೆ

ತಿರಸ್ಕೃತಗೊಂಡಿರುವ 320 ಅರ್ಜಿ ಮರು ಪರಿಶೀಲನೆಗೆ ಡಾ.ಬಿ.ಸಿ.ಸತೀಶ ಸೂಚನೆ



ಮಡಿಕೇರಿ, ಜೂ.15– ನಾಗರಹೊಳೆಯ ಆದಿವಾಸಿ ಜಮ್ಮ-ಪಾಳೇ ಹಕ್ಕು ಸ್ಥಾಪನಾ ಸಮಿತಿಯ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸುತ್ತಿದ್ದು, ಈ ಹಿನ್ನೆಲೆ ಅರಣ್ಯ ಹಕ್ಕು ಕಾಯ್ದೆಯಡಿ ಮತ್ತೊಮ್ಮೆ ಪರಿಶೀಲಿಸಲು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಹಾಡಿಗಳ ಆದಿವಾಸಿ ಜನರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನಗರದ ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಹಾಡಿಯ ಜನರು ವಾಸಕ್ಕಾಗಿ ಮಾತ್ರ ಅರಣ್ಯ ಹಕ್ಕು ಪತ್ರ ನೀಡಿದ್ದು, ವ್ಯವಸಾಯಕ್ಕೆ ಭೂಮಿ ನೀಡಿಲ್ಲ. ಆದ್ದರಿಂದ ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ ಹಕ್ಕು ಕಾಯ್ದೆಯಡಿ ಉಳುಮೆ ಮಾಡುತ್ತಿರುವ ಕೃಷಿ ಭೂಮಿಯನ್ನು ಆದಿವಾಸಿಗಳಿಗೆ ನೀಡಬೇಕು ಎಂಬುದು ಆಗ್ರಹವಾಗಿದೆ.

ಆ ನಿಟ್ಟಿನಲ್ಲಿ ಈಗಾಗಲೇ ಅರಣ್ಯ ಹಕ್ಕು ಕಾಯ್ದೆಯಡಿ ಸಲ್ಲಿಕೆಯಾಗಿ ಎರಡು ಬಾರಿ ಗ್ರಾಮ ಅರಣ್ಯ ಹಕ್ಕು ಸಮಿತಿಯಲ್ಲಿ ತಿರಸ್ಕೃತವಾಗಿರುವ ವೈಯಕ್ತಿಕ 320 ಅರ್ಜಿಗಳನ್ನು ಪುನರ್ ಪರಿಶೀಲಿಸಿ ವರದಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಸೂಚಿಸಿದರು.

ನಾಗರಹೊಳೆ ವ್ಯಾಪ್ತಿಯಲ್ಲಿ ಅರಣ್ಯ ಹಕ್ಕು ಕಾಯ್ದೆಯಡಿ ಇದುವರೆಗೆ 1567 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಇದರಲ್ಲಿ 1247 ಅರ್ಜಿಗಳಿಗೆ ವೈಯಕ್ತಿಕ ಅರಣ್ಯ ಹಕ್ಕು ಪತ್ರ ನೀಡಲಾಗಿದೆ. ಉಳಿದಂತೆ 320 ಅರ್ಜಿಗಳು ಗ್ರಾಮ ಅರಣ್ಯ ಸಮಿತಿ ಸಭೆಯಲ್ಲಿ ಎರಡು ಬಾರಿ ತಿರಸ್ಕೃತಗೊಂಡಿದೆ. ಜೊತೆಗೆ 19 ಸಮುದಾಯ ಹಕ್ಕುಗಳ ಅರ್ಜಿಯನ್ನು ಪುನರ್ ಪರಿಶೀಲಿಸಬೇಕಿದೆ ಎಂದು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾಧಿಕಾರಿ ಹೊನ್ನೇಗೌಡ ಅವರು ಸಭೆಯ ಗಮನಕ್ಕೆ ತಂದರು.

ಈ ಸಂದರ್ಭದಲ್ಲಿ ಮಾತನಾಡಿದ ನಾಗರಹೊಳೆ ವ್ಯಾಪ್ತಿಯ ಆದಿವಾಸಿ ಪ್ರಮುಖರಾದ ತಿಮ್ಮ ಅವರು ಅನುಸೂಚಿತ ಬುಡಕಟ್ಟು ಕಾಯ್ದೆಯಡಿ ಅರಣ್ಯ ಹಕ್ಕಿಗಾಗಿ 2009 ರಿಂದ ಮನವಿ ಸಲ್ಲಿಸುತ್ತಾ ಬರಲಾಗಿದೆ. ಆದರೆ ಇದುವರೆಗೆ ಯಾವುದೇ ಸೌಲಭ್ಯಗಳು ತಲುಪಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಾಗರಹೊಳೆ ವ್ಯಾಪ್ತಿಯಲ್ಲಿ ಹಲವು ದೇವಸ್ಥಾನಗಳಿವೆ. ಅಲ್ಲಿನ ಆದಿವಾಸಿಗಳು ಕಿರು ಉತ್ಪನ್ನಗಳನ್ನು ಸಂಗ್ರಹಿಸಿ ಜೀವನ ಕಟ್ಟಿಕೊಳ್ಳುತ್ತಿದ್ದರು. ಆದರೆ ಇತ್ತೀಚೆಗೆ ಇದಕ್ಕೂ ಅವಕಾಶ ನೀಡುತ್ತಿಲ್ಲ. ಆದ್ದರಿಂದ ನಾಗರಹೊಳೆ ವ್ಯಾಪ್ತಿಯ ಆದಿವಾಸಿಗಳಿಗೆ ಕೃಷಿ ಮಾಡಿಕೊಂಡಿರುವ ಭೂಮಿ ಕಲ್ಪಿಸಬೇಕು ಎಂದು ಜಿಲ್ಲಾಧಿಕಾರಿ ಅವರಿಗೆ ಮನವಿ ಮಾಡಿದರು.

ಸೋಮಯ್ಯ ಅವರು ಮಾತನಾಡಿ, ನಾಗರಹೊಳೆ ವ್ಯಾಪ್ತಿಯಲ್ಲಿನ ಆದಿವಾಸಿಗಳ ಅನುಭವಿಸುತ್ತಿರುವ ಕೃಷಿ ಭೂಮಿಯನ್ನು ಅರಣ್ಯ ಇಲಾಖೆಯವರು ಕಸಿದುಕೊಂಡಿದ್ದಾರೆ. ಇದರಿಂದಾಗಿ ಉದ್ಯೋಗವಿಲ್ಲದೆ ಬದುಕುವುದು ಕಷ್ಟವಾಗಿದೆ ಎಂದರು. ಆದಿವಾಸಿ ಮುಖಂಡ ಶಿವು, ನಾಗರ ಹೊಳೆ ಮಹಿ ಯೋಜನೆಯ ನಿರ್ದೇಶಕ ಹರ್ಷಕುಮಾರ್ ಮಾತನಾಡಿದರು.

ಉಪ ವಿಭಾಗಾಧಿಕಾರಿ ಡಾ.ಯತೀಶ್ ಉಳ್ಳಾಲ್, ಭೂ ದಾಖಲೆಗಳ ಉಪ ನಿರ್ದೇಶಕ ಪಿ.ಶ್ರೀನಿವಾಸ್, ಸೆಸ್ಕ್ ಕಾರ್ಯಪಾಲಕ ಎಂಜಿನಿಯರ್ ಅನಿತಾ ಬಾಯಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಗೋಪಾಲ್, ಧನಂಜಯ, ಅರಣ್ಯ ಅಧಿಕಾರಿಗಳು, ಆದಿವಾಸಿ ಪ್ರಮುಖರು ಇತರರು ಇದ್ದರು.

ಬ್ಯಾಂಕ್ ಅಧಿಕಾರಿ, ಗುಮಾಸ್ತ ಹುದ್ದೆಗೆ ಅರ್ಜಿ ಆಹ್ವಾನ

ಮಡಿಕೇರಿ, ಜೂ.15– ಉದ್ಯೋಗಗಳ ಅವಕಾಶ ಕಡಿಮೆಯಾಗುತ್ತಿರುವ ಇತ್ತೀಚಿನ ದಿನಗಳಲ್ಲಿ ಐಬಿಪಿಎಸ್(IBPS) ವತಿಯಿಂದ ರೀಜನಲ್ ರೂರಲ್ ಬ್ಯಾಂಕ್‌ಗಳಲ್ಲಿ ಖಾಲಿ ಇರುವ 8600ಕ್ಕೂ ಹೆಚ್ಚು ಕ್ಲರಿಕಲ್ ಮತ್ತು ಆಫೀಸರ್ಸ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಪದವೀಧರ ಅಭ್ಯರ್ಥಿಗಳು ಈ ಹುದ್ದೆಗಳಿಗೆ ಅರ್ಹರಾಗಿರುತ್ತಾರೆ. ಜೂ.21 ರವರೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ https://ibps.in/ ವೀಕ್ಷಿಸಬಹುದಾಗಿದೆ. ಈಗಾಗಲೇ ಅರ್ಜಿ ಆಹ್ವಾನಿಸಿರುವ ಐಬಿಪಿಎಸ್ ರೀಜನಲ್ ರೂರಲ್ ಬ್ಯಾಂಕ್ ಕ್ಲೆರಿಕಲ್ ಮತ್ತು ಆಫೀಸರ್ಸ್ ಹುದ್ದೆಗಳ ನೇಮಕಾತಿ ಪರೀಕ್ಷೆ ಮತ್ತು ಎಸ್‌ಎಸ್‌ಸಿ (SSC) ನೇಮಕಾತಿ ಪರೀಕ್ಷೆಗಳಿಗೆ ಹಾಗೂ ಮುಂಬರುವ ಎಲ್ಲಾ ಬ್ಯಾಂಕ್, ಎಸ್‌ಎಸ್‌ಸಿ ಪರೀಕ್ಷೆಗಳಿಗೆ ಅನುಭವಿ ನುರಿತ ವಿಷಯ ತಜ್ಞರಿಂದ ಟೈಮ್ ಮ್ಯಾನೇಜ್‌ಮೆಂಟ್ ಸ್ಕಿಲ್ಸ್ ನೊಂದಿಗೆ ರಿಯಾಯಿತಿ ದರದಲ್ಲಿ ತರಬೇತಿ ನೀಡಲಾಗುವುದು. ಆಸಕ್ತರು 8660217739 ಸಂಖ್ಯೆಗೆ ಕರೆ ಅಥವಾ ವಾಟ್ಸಾಪ್ ಮಾಡಿ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಹಾಸನ ಶಾಖೆಯ ಕೃಷಿಕ್ ಸರ್ವೋದಯ ಫೌಂಡೇಶನ್‌ನ ಕಾರ್ಯದರ್ಶಿ ಅವರು ತಿಳಿಸಿದ್ದಾರೆ.

ವಿರಾಜಪೇಟೆಯಲ್ಲಿ ನೂತನ ಕಾಂಕ್ರೀಟ್ ರಸ್ತೆಗಳ ಉದ್ಘಾಟನೆ



ವಿರಾಜಪೇಟೆ, ಜೂ.15– ಪುರಸಭೆಯ ಎಲ್ಲಾ ವಾರ್ಡ್‌ಗಳ ಸದಸ್ಯರು ಒಗ್ಗಟ್ಟಿನಿಂದ ಸರ್ಕಾರದ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ತಿಳಿಸಿದ್ದಾರೆ.

ವಿರಾಜಪೇಟೆ ಪಟ್ಟಣದ ಸುಭಾಷ್ ನಗರದಲ್ಲಿ ನೂತನ ಕಾಂಕ್ರೀಟ್ ರಸ್ತೆ ಹಾಗೂ ವಿದ್ಯಾನಗರದ ಕಾಂಕ್ರೀಟ್ ರಸ್ತೆ ಮತ್ತು ಸಿಲ್ವಾನಗರ ಸೇರಿದಂತೆ ಒಟ್ಟು 23.75 ಲಕ್ಷ ರೂ. ಅನುದಾನದಲ್ಲಿ ನಿರ್ಮಿಸಿರುವ ನೂತನ ಕಾಂಕ್ರೀಟ್ ರಸ್ತೆ ಉದ್ಘಾಟಿಸಿ ಮಾತನಾಡಿದ ಅವರು, ಜನಪ್ರತಿನಿಧಿಗಳಾದವರು ಜನರ ಕಷ್ಟಗಳಿಗೆ ಸ್ಪಂದಿಸಬೇಕು. ಅಭಿವೃದ್ಧಿ ಕಾಮಗಾರಿ ನಡೆಸುವ ಸಂದರ್ಭ ಸ್ಥಳೀಯರು ಸಹಕಾರ ನೀಡುವಂತಾಗಬೇಕು. ಅಭಿವೃದ್ಧಿ ಕಾರ್ಯದಲ್ಲಿ ರಾಜಕೀಯವನ್ನು ದೂರ ಇಟ್ಟು ಕೆಲಸ ಮಾಡಬೇಕಾಗಿದೆ ಎಂದರು.

ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಮಾತನಾಡಿ, ನಗರದ ಈ ಭಾಗದಲ್ಲಿ ಇತ್ತೀಚೆಗೆ ಸಾಕಷ್ಟು ಮನೆಗಳು ನಿರ್ಮಾಣಗೊಂಡಿದ್ದು, ಇಲ್ಲಿ ರಸ್ತೆಗಳ ಅಭಿವೃದ್ಧಿ ಕಾಮಗಾರಿ ನಡೆಯಬೇಕಾಗಿದೆ. ಮುಂದಿನ ದಿನದಲ್ಲಿ ಈ ಕ್ಷೇತ್ರದ ಶಾಸಕರೊಂದಿಗೆ ನಾವೆಲ್ಲರೂ ಕೈ ಜೋಡಿಸುವ ಮೂಲಕ ನಗರದ ಅಭಿವೃದ್ಧಿಗೆ ಸಹಕರಿಸುವುದಾಗಿ ಹೇಳಿದರು.

ಪುರಸಭೆ ಅಭಿಯಂತರ ಹೇಮಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಕೊಡಗಿನ ಇತರ ಪಟ್ಟಣಗಳಿಗಿಂತ ವಿರಾಜಪೇಟೆ ಪುರಸಭೆ 18 ವಾರ್ಡ್‌ಗಳ ವ್ಯಾಪ್ತಿ ಬಹಳ ದೊಡ್ಡದಾಗಿದ್ದು, ಅದನ್ನು ಪರಿಗಣನೆಗೆ ತೆಗೆದುಕೊಂಡು ಸರಕಾರದಿಂದ ಹೆಚ್ಚಿನ ಅನುದಾನ ಬಿಡುಗಡೆಗೊಳಿಸುವಂತೆ ಶಾಸಕರಲ್ಲಿ ಮನವಿ ಮಾಡಿದರು. ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ಅಧ್ಯಕ್ಷೆ ಸುಸ್ಮಿತಾ, ಸದಸ್ಯರಾದ ಮಹ್ಮದ್ ರಫಿ, ಎಸ್.ಹೆಚ್.ಮತೀನ್, ಗುತ್ತಿಗೆದಾರ ನಮೇರ ನವೀನ್, ಕಾಂಗ್ರೆಸ್ ಮುಖಂಡರಾದ ರಂಜಿ ಪೂಣಚ್ಚ, ಮಾದಂಡ ತಿಮ್ಮಯ್ಯ, ಸಿ.ಎ.ನಾಸೀರ್, ಸಂಕೇತ್ ಪೂವಯ್ಯ, ವಿ.ಕೆ.ಸತೀಶ್, ಡಿ.ಪಿ.ರಾಜೇಶ್, ನರೇಂದ್ರ ಕಾಮತ್, ಜಿ.ಜಿ.ಮೋಹನ್, ಜೋಕಿಂ ರಾಡ್ರಿಗಾಸ್ ಹಾಗೂ ಪುರಸಭೆ ಸದಸ್ಯರುಗಳು ಭಾಗವಹಿಸಿದ್ದರು.

ಹಾತೂರು ಗ್ರಾಮದಲ್ಲಿ ಸರಣಿ ಕಳ್ಳತನ

ಗೋಣಿಕೊಪ್ಪ, ಜೂ.15– ಪೊನ್ನಂಪೇಟೆ ತಾಲೂಕಿನ ಹಾತೂರು ಗ್ರಾಮದಲ್ಲಿ ಸರಣಿ ಕಳ್ಳತನವಾಗಿದೆ. ಎರಡು ಮನೆಗಳ ಚಾವಣಿ ತೆಗೆದು ನಗದು ಹಾಗೂ ಚಿನ್ನಾಭರಣ ಕಳುವು ಮಾಡಲಾಗಿದೆ.

ಗ್ರಾಮದ ನವೀನ್ ಎಂಬವರ ಮನೆಯ ಚಾವಣಿ ತೆಗೆದು ಒಳ ನುಗ್ಗಿದ ಕಳ್ಳರು ಬೀರುವಿನಲ್ಲಿಟ್ಟಿದ್ದ 1,02,500 ರೂ. ಮೌಲ್ಯದ ಚಿನ್ನಾಭರಣ ಕದ್ದೊಯ್ದಿದ್ದಾರೆ.

ಇದೇ ಮಾದರಿಯಲ್ಲಿ ಹಾತೂರು ನಿವಾಸಿ ಗಣೇಶ್ ಎಂಬವರ ಮನೆಯಲ್ಲೂ ಕಳ್ಳತನವಾಗಿದ್ದು, ಬೀರುವಿನಲ್ಲಿದ್ದ 30,000 ರೂ. ನಗದು ದೋಚಿದ್ದಾರೆ. ಎರಡು ಪ್ರತ್ಯೇಕ ಪ್ರಕರಣ ಸಂಬಂಧ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಣ ದುರ್ಬಳಕೆ ಆರೋಪ: ರೈತರಿಂದ ಪ್ರತಿಭಟನೆ



ಚಾಮರಾಜನಗರ, ಜೂ.15– ತಾಲೂಕಿನ ಮಲೆಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಚಿನ್ನಾಭರಣ ಸಾಲ ನೀಡುವ ಮೂಲಕ 3 ಕೋಟಿಗೂ ಹೆಚ್ಚು ವಂಚನೆ ಮಾಡಲಾಗಿದೆ ಎಂದು ಆರೋಪಿಸಿ ಸಂಘದ ಕಚೇರಿ ಎದುರು ಸದಸ್ಯರು, ರಾಜ್ಯ ಕಬ್ಬು ಬೆಳೆಗಾರರ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು.

ತಾಲೂಕಿನ ಮಲೆಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಲ್.ಶಿವಪ್ಪ, ಕಾರ್ಯದರ್ಶಿ ನಾಗೇಂದ್ರ ಹಾಗೂ ಆಡಳಿತ ಮಂಡಳಿ ನಿರ್ದೇಶಕರು ಶೂನ್ಯ ಬಡ್ಡಿ ದರದಲ್ಲಿ ಚಿನ್ನಾಭರಣದ ಮೇಲೆ ಸಾಲ ನೀಡುತ್ತೇವೆ ಎಂದು ಹೇಳಿ ರೈತರಿಂದ ಚಿನ್ನಾಭರಣ ಪಡೆದು ಸಾಲ ನೀಡಿದ್ದಾರೆ. ಮತ್ತೆ ರೈತರಿಂದ ಹಣ ಕಟ್ಟಿಸಿಕೊಂಡು ಚಿನ್ನಾಭರಣ ವಾಪಸ್ ನೀಡಲು ಹಿಂದೇಟು ಹಾಕುತ್ತಿದ್ದಾರೆ ಎಂದು ಆರೋಪಿಸಿದ ಪ್ರತಿಭಟನಾಕಾರರು, ನಮ್ಮ ಚಿನ್ನಾಭರಣಗಳನ್ನು ಅಧ್ಯಕ್ಷ, ಕಾರ್ಯದರ್ಶಿ ಹಾಗೂ ಆಡಳಿತ ಮಂಡಳಿ ನಿರ್ದೇಶಕರು ಇತರ ಖಾಸಗಿ ಬ್ಯಾಂಕ್‌ಗಳಲ್ಲಿ ಅಡವಿಟ್ಟು ಹೆಚ್ಚಿನ ಹಣ ಪಡೆದು ದುರ್ಬಳಕೆ ಮಾಡಿಕೊಂಡಿದ್ದು, ಇದೀಗ ನಮ್ಮ ಚಿನ್ನಾಭರಣ ನೀಡದೇ ವಂಚಿಸಿದ್ದಾರೆ ಎಂದು ಆರೋಪಿಸಿದರು. ಹೀಗಾಗಿ ಇವರ ವಿರುದ್ಧ ಸಂಬಂಧಪಟ್ಟವರು ಕ್ರಮ ಕೈಗೊಂಡು ನಮ್ಮ ಚಿನ್ನಾಭರಣ ಬಿಡಿಸಿಕೊಡಬೇಕು ಎಂದು ಆಗ್ರಹಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ರೈತರಿಗೆ ಶೂನ್ಯ ಬಡ್ಡಿ ದರದ ಆಸೆ ತೋರಿಸಿ, ಅವರಿಂದ ನೂರಾರು ಗ್ರಾಂ ಚಿನ್ನಾಭರಣ ಪಡೆದು ವಂಚನೆ ಮಾಡುವ ಉದ್ದೇಶವನ್ನು ಆಡಳಿತ ಮಂಡಳಿ ಹೊಂದಿದೆ. ಹೀಗಾಗಿ ಸಹಕಾರ ಸಂಘಗಳ ನಿಬಂಧಕರು ಹಾಗೂ ಸಬ್‌ರಿಜಿಸ್ಟ್ರರ್ ಪ್ರಕರಣ ದಾಖಲು ಮಾಡಿ ಸಂಘವನ್ನು ಸೂಪರ್‌ಸೀಡ್ ಮಾಡಿ, ಸಂಘದ ವಿರುದ್ಧ ತನಿಖೆ ನಡೆಸಿ ರೈತರಿಗೆ ನ್ಯಾಯ ಕೊಡಿಸಬೇಕು. ಇಲ್ಲದಿದ್ದರೇ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಕಾರ್ಯದರ್ಶಿ ಮಹದೇವಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಪಟೇಲ್ ಶಿವಮೂರ್ತಿ, ತಾಲೂಕು ಅಧ್ಯಕ್ಷ ನಾಗರಾಜು, ತಾಲೂಕು ಪ್ರಧಾನ ಕಾರ್ಯದರ್ಶಿ ಹರ್ಷ, ನಂಜುಂಡನಾಯಕ, ಮಂಜು, ಗೌಡಿಕೆ ಸ್ವಾಮಪ್ಪ, ಸೋಮಣ್ಣ, ಗಿರಿಜಾ ಸೇರಿದಂತೆ ನೂರಾರು ರೈತರಿದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತರ ಪ್ರತಿಭಟನೆ

● ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ● ಸಕಾಲದಲ್ಲಿ ಬಿತ್ತನೆ ಬೀಜ, ಗೊಬ್ಬರ, ಕೀಟನಾಶಕ ವಿತರಣೆಗೆ ಆಗ್ರಹ



ಚಾಮರಾಜನಗರ, ಜೂ.15– ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತ ಸಂಘದ ಕಾರ್ಯಕರ್ತರು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಡಳಿತ ಭವನದ ಎದುರು ಸಮಾವೇಶಗೊಂಡ ರೈತರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಬಳಿಕ ಮಾತನಾಡಿದ ಪ್ರತಿಭಟನಾಕಾರರು, ರೈತರು ಬೆಳೆದ ಬೆಳೆಗಳನ್ನು ವೈಜ್ಞಾನಿಕ ಬೆಲೆ ಅಡಿ ವರ್ಷಪೂರ್ತಿ ಪಂಚಾಯಿತಿ ಮಟ್ಟದಲ್ಲಿ ಖರೀದಿ ಕೇಂದ್ರಗಳ ಮೂಲಕ ಖರೀದಿಸಬೇಕು. ಎಪಿಎಂಸಿ ಮಾರುಕಟ್ಟೆಯನ್ನು ರೈತ ಸ್ನೇಹಿಯಾಗಿಸಬೇಕು. ಮಾರುಕಟ್ಟೆ ವ್ಯವಸ್ಥೆಯನ್ನು ಮತ್ತಷ್ಟು ವಿಸ್ತರಿಸಿ ರೈತರಿಗೆ ಆಗುತ್ತಿರುವ ವಂಚನೆ ತಪ್ಪಿಸಿ ಭ್ರಷ್ಟಾಚಾರ ನಿರ್ಮೂಲನೆ ಮಾಡಬೇಕು ಎಂದು ಒತ್ತಾಯಿಸಿದರು.

ಈ ಹಿಂದಿನ ಕುಮಾರಸ್ವಾಮಿ ನೇತೃತ್ವದ ಸರ್ಕಾರ 2013ರ ಭೂ ಸ್ವಾಧೀನ ಕಾಯ್ದೆಗೆ ರೂಪಿಸಿರುವ ನಿಯಮಗಳು ರೈತ ವಿರೋಧಿಯಾಗಿವೆ. ಇದನ್ನು ಮಾರ್ಪಾಡು ಮಾಡಿ ರೈತ ಪರ ನಿಯಮಗಳನ್ನು ರೂಪಿಸಬೇಕು. ಹಿಂದಿನ ಬಿಜೆಪಿ ಸರ್ಕಾರ ಭೂ ಮಂಜೂರಾತಿ ಕಾಯ್ದೆಗಳನ್ನು ಮೀರಿ ಸರ್ಕಾರಿ ಭೂಮಿಯನ್ನು ಅನರ್ಹರಿಗೆ, ಸಂಘ ಪರಿವಾರಕ್ಕೆ ಮಂಜೂರು ಮಾಡಿದೆ. ಅವುಗಳನ್ನು ರದ್ದುಪಡಿಸಿ ಆ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಬೇಕು ಎಂದು ಆಗ್ರಹಿಸಿದರು.

ಪ್ರಸ್ತುತ ಮುಂಗಾರು ಮಳೆ ವೇಳೆ ಸಮರ್ಪಕ ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕಗಳನ್ನು ರೈತರಿಗೆ ಸಕಾಲದಲ್ಲಿ ಸರಬರಾಜು ಮಾಡಬೇಕು. ಕಳಪೆ ಪೂರೈಕೆ ಮತ್ತು ಮೋಸಕ್ಕೆ ಕಡಿವಾಣ ಹಾಕಬೇಕು. ಬಿತ್ತನೆ ಬೀಜ ಬೆಳೆದು ರೈತರು ಸಂಬಂಧಪಟ್ಟ ಬೀಜ ಕೇಂದ್ರಗಳಿಗೆ ನೀಡಿದ್ದು, ಅವರಿಗೆ ಬರಬೇಕಾದ ಹಣ ಒಂದೂವರೆ ವರ್ಷ ಕಳೆದರೂ ಪಾವತಿಯಾಗಿಲ್ಲ. ಕೂಡಲೇ ರೈತರಿಗೆ ಹಣ ಪಾವತಿ ಮಾಡಬೇಕು ಎಂದರು.

ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ವಿಮೆ ತುಂಬಿದ ರೈತರಿಗೆ ಕಂಪನಿಗಳು ಬಾಕಿ ಉಳಿಸಿಕೊಂಡಿದ್ದು, ಬಾಕಿ ಪಾವತಿಸಲು ಕ್ರಮ ಕೈಗೊಳ್ಳಬೇಕು. ಭತ್ತ ಬೆಳೆಯುವ ಪ್ರದೇಶ ಪ್ರತಿ ವರ್ಷ ಕಡಿಮೆಯಾಗುತ್ತಾ ಬಂದಿದ್ದು, ಭತ್ತದ ಬೆಳೆಯನ್ನು ಉತ್ತೇಜಿಸಲು ಸರ್ಕಾರ ವಿಶೇಷ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ವಸತಿ ರಹಿತರಿಗೆ ಆದ್ಯತೆ ಮೇಲೆ ವಸತಿ ನಿರ್ಮಿಸಿ ಕೊಡಬೇಕು. ರೈತರು ಬೆಳೆದ ಸಾಗುವಾನಿ ಮರಗಳ ಕಟಾವಿಗೆ ಸರಳ ನಿಯಮಗಳನ್ನು ರೂಪಿಸಿ, ಶೀಘ್ರ ಅನುಮತಿ ನೀಡುತ್ತಿಲ್ಲ. ಹೀಗಾಗಿ ಸರ್ಕಾರಿ ಟಿಂಬರ್ ಡಿಪೋ ಹರಾಜು ಪ್ರಕ್ರಿಯೆಯಲ್ಲಿ ರೈತರಿಂದ ಕಮೀಷನ್ ಪಡೆಯದೇ ಮಾರಾಟ ಮಾಡಬೇಕು ಎಂದರು.

ಕಾಡುಪ್ರಾಣಿಗಳ ಹಾವಳಿ ತಡೆಯಬೇಕು. ಪ್ರಕೃತಿ ವಿಕೋಪ ಮತ್ತು ಕಾಡು ಪ್ರಾಣಿಗಳ ಹಾವಳಿ ನಷ್ಟವನ್ನು ಸರ್ಕಾರ ಶೀಘ್ರ ರೈತರ ಖಾತೆಗೆ ವರ್ಗಾಯಿಸಬೇಕು. ಪರಿಸರ ಸಂರಕ್ಷಣೆ, ಪ್ರಕೃತಿ ವಿಕೋಪಗಳನ್ನು ತಡೆಯಲು ರೈತರ ಸಹಭಾಗಿತ್ವದಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಎ.ಎಂ.ಮಹೇಶ್ ಪ್ರಭು, ಮೂಡ್ನಾಕೂಡು ಮಹೇಶ್, ಮಲ್ಲೇಶ್, ಸತೀಶ್, ಗಜೇಂದ್ರ, ಶಿವಕುಮಾರ್, ನಾಗರಾಜು, ಮಲ್ಲಿಕಾರ್ಜುನ್, ಮಹದೇವ ಇತರರಿದ್ದರು.

ಕಾಡಾನೆ ಹಾವಳಿ ತಪ್ಪಿಸಲು ಅಧಿಕಾರಿಗಳಿಗೆ ಸೂಚನೆ



ಹನೂರು, ಜೂ.15– ತಾಲೂಕಿನ ಪೊನ್ನಾಚಿ ಸಮೀಪದ ಮರೂರು ಗ್ರಾಮದಲ್ಲಿ ರೈತರಿಗೆ ತೊಂದರೆ ನೀಡುತ್ತಿರುವ ಕಾಡಾನೆಯನ್ನು ಬೇರೆಡೆಗೆ ಸ್ಥಳಾಂತರಿಸಲು ಹಿರಿಯ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದು ಮಾಜಿ ಶಾಸಕ ಆರ್. ನರೇಂದ್ರ ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಂಟಿಸಲಗ ಕಳೆದ 2 ತಿಂಗಳಿಂದ ತೆಂಗಿನಮರ, ಹಲಸಿನ ಮರ, ವಿದ್ಯುತ್ ವೈರ್, ಕೃಷಿ ಉಪಕರಣಗಳು, ಜೋಳ ಸೇರಿದಂತೆ ಅಪಾರ ಪ್ರಮಾಣದ ಆಸ್ತಿ ನಷ್ಟ ಮಾಡುತ್ತಿದೆ. ಅಲ್ಲದೆ ಮಂಗಳವಾರ ರಾತ್ರಿ ಮನೆಗಳ ಸಮೀಪ ಕಾಣಿಸಿಕೊಂಡು ದ್ವಿಚಕ್ರ ವಾಹನ ಹಾಗೂ ಮನೆ ಮುಂಭಾಗದ ಗೇಟ್ ಹಾಳು ಮಾಡಿದೆ. ಇದರಿಂದ ನಮಗೆ ತೀವ್ರ ತೊಂದರೆಯಾಗುತ್ತಿದೆ. ಹೀಗಾಗಿ ಸಮಸ್ಯೆ ಬಗೆಹರಿಸುವಂತೆ ಗ್ರಾಮಸ್ಥರು ಮನವಿ ಸಲ್ಲಿಸಿದ್ದರು.

ಈ ಹಿನ್ನೆಲೆಯಲ್ಲಿ ಮಲೆ ಮಹದೇಶ್ವರ ವನ್ಯಜೀವಿ ವಲಯದ ಡಿಎಫ್‌ಓ ಅವರಿಗೆ ಕರೆ ಮಾಡಿ ಮಾತನಾಡಿ, ಜಮೀನು ಹಾಗೂ ಸಾರ್ವಜನಿಕ ಆಸ್ತಿಪಾಸ್ತಿ ನಾಶ ಮಾಡುತ್ತಿರುವ ಕಾಡಾನೆ ಸ್ಥಳಾಂತರಿಸುವಂತೆ ತಿಳಿಸಿದ್ದೇನೆ. ಅದರಂತೆ ಅವರು ಸಹ ಹಿರಿಯ ಅಧಿಕಾರಿಗಳ ಒಪ್ಪಿಗೆಗಾಗಿ ಪತ್ರ ಬರೆದಿದ್ದಾರೆ. ಇನ್ನೆರಡು ದಿನಗಳಲ್ಲಿ ಕಾಡಾನೆ ಸ್ಥಳಾಂತರ ಮಾಡುವುದಾಗಿ ಭರವಸೆ ನೀಡಿದ್ದಾರೆ ಎಂದರು. ಈಗಾಗಲೇ ಅರಣ್ಯ ಸಚಿವ ಈಶ್ವರ ಖಂಡ್ರೆ ಜೊತೆಯೂ ಈ ಬಗ್ಗೆ ಮಾತನಾಡಿದ್ದೇನೆ. ಅವರು ಸಹ ಕಾಡಾನೆ ಹಾವಳಿ ತಡೆಯಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದರು.

ಜನರು ಗ್ಯಾರಂಟಿ ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳಿ

ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್



ಚಾಮರಾಜನಗರ, ಜೂ.15– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದು, ಕ್ಷೇತ್ರದ ಜನರು ಈ ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ತಿಳಿಸಿದರು.

ತಾಲೂಕಿನ ಗುಂಡ್ಲುಪೇಟೆ ಕ್ಷೇತ್ರದ ಹಳೇಪುರದಲ್ಲಿ ಅಂಬೇಡ್ಕರ್ ಭವನಕ್ಕೆ ಗುದ್ದಲಿ ಪೂಜೆ ಹಾಗೂ ನೂತನ ಶಾಸಕರಿಗೆ ಅಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ, ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ನಮ್ಮದು ನುಡಿದಂತೆ ನಡೆಯುವ ಸರ್ಕಾರ. ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಜಿಲ್ಲೆಯ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ನೀಡಿ, ಜಿಲ್ಲೆಯ ಅಭಿವೃದ್ಧಿಗೆ ಕಾರಣರಾಗಿದ್ದರು. ಅಲ್ಲದೇ 160 ಭರವಸೆಗಳ ಪೈಕಿ 158 ಭರವಸೆಗಳನ್ನು ಈಡೇರಿಸಿ, ಹಲವು ಭಾಗ್ಯಗಳನ್ನು ನೀಡಿದ್ದರ ಫಲವಾಗಿ ಇಂದು ರಾಜ್ಯದಲ್ಲಿ ಸ್ಪಷ್ಟ ಬಹುಮತದೊಂದಿಗೆ ಕಾಂಗ್ರೆಸ್ ಸರ್ಕಾರ ರಚಿಸಿದೆ ಎಂದರು. ಐದು ಗ್ಯಾರಂಟಿಗಳಿಗೆ ಅನುಮೋದನೆ ನೀಡಿದ್ದು, ಈಗಾಗಲೇ ಮಹಿಳೆಯರ ಉಚಿತ ಬಸ್ ಪ್ರಯಾಣದ ಶಕ್ತಿ ಯೋಜನೆಗೆ ಚಾಲನೆ ನೀಡಲಾಗಿದೆ. ಇನ್ನುಳಿದ ಯೋಜನೆಗಳು ಶೀಘ್ರ ಜಾರಿಯಾಗಲಿದೆ ಎಂದ ಅವರು, ಮುಂಬರುವ ಲೋಕಸಭೆ ಹಾಗೂ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಕೈ ಬಲಪಡಿಸಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾಜಿ ಶಾಸಕ ಡಾ.ಯತೀಂದ್ರ, ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಯನ್ನು ಬೆಂಬಲಿಸಿ ಜನರು ಮತ್ತೇ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ನೀಡಿದ್ದಾರೆ. ಕ್ಷೇತ್ರದಲ್ಲೂ ಗಣೇಶ್ ಪ್ರಸಾದ್ 37 ಸಾವಿರ ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. ನಿಮ್ಮೆಲ್ಲರ ಪ್ರೀತಿ, ವಿಶ್ವಾಸ ಇದೇ ರೀತಿ ಮುಂದುವರಿಯಲಿ ಎಂದರು.

ಕಾರ್ಯಕ್ರಮದಲ್ಲಿ ಶಾಸಕರಾದ ಅನಿಲ್, ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಬ್ಲಾಕ್ ಅಧ್ಯಕ್ಷ ಮುನಿರಾಜು, ತಾಪಂ ಮಾಜಿ ಸದಸ್ಯ ಹೆಚ್.ಎಸ್.ಬಸವರಾಜು, ಜಿಪಂ ಮಾಜಿ ಸದಸ್ಯರಾದ ನವೀನ್, ಗುರುಸಿದ್ದೇಗೌಡ, ತಾಪಂ ಮಾಜಿ ಸದಸ್ಯ ರವಿಕುಮಾರ್, ಎಪಿಎಂಸಿ ನಿರ್ದೇಶಕ ಗುರುಸ್ವಾಮಿ, ಅರಣ್ಯ ಇಲಾಖೆಯ ಮಧುಸೂಧನ್, ಸಿದ್ದರಾಮಯ್ಯ ಅಭಿಮಾನಿಗಳ ಬಳಗದ ಅಧ್ಯಕ್ಷ ಬೆಳ್ಳೀಗೌಡ, ಮುಖಂಡರಾದ ಬಸವರಾಜು, ಗುರು, ಮಾದೇಶ್, ಗ್ರಾಪಂ ಉಪಾಧ್ಯಕ್ಷೆ ನಾಗಮಣಿ, ಸದಸ್ಯರಾದ ಬಸವಣ್ಣ, ಎಂ.ಮಂಜುನಾಥ್, ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷ ಮಹೇಶ್, ಲೋಕೇಶ್ ಕನಕ ಯುವಕ ಸಂಘದ ಅಧ್ಯಕ್ಷ ವಿಜಯಕುಮಾರ್, ಮಲ್ಲೇಶ್, ಶಿವಮಲ್ಲು, ಸಾಗರ್, ಸಿದ್ದೇಶ್, ಬಸವಣ್ಣ, ಕನಕ ಯುವಕರ ಸಂಘ, ಬಸವೇಶ್ವರ ಯುವಕರ ಸಂಘ, ಅಂಬೇಡ್ಕರ್ ಯುವಕರ ಸಂಘದ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಇದ್ದರು.

ಅರ್ಜಿ ಆಹ್ವಾನ

ಚಾಮರಾಜನಗರ, ಜೂ.15– ಚಾಮರಾಜನಗರ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ವಿವಿಧ ಇಂಜಿನಿಯರಿಂಗ್ ಕೋರ್ಸ್‌ನಲ್ಲಿ 2ನೇ ವರ್ಷದ 3ನೇ ಸೆಮಿಸ್ಟರ್ ಡಿಪ್ಲೋಮಾದಲ್ಲಿ ವ್ಯಾಸಂಗ ಮಾಡಲು 2 ವರ್ಷಗಳ ಐಟಿಐ, ದ್ವಿತೀಯ ಪಿಯುಸಿ (ವಿಜ್ಞಾನ) ವಿಷಯಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಜೂ.20ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ.

ಮಕ್ಕಳಿಗೆ ಭಾಷಾ ಜ್ಞಾನ ಮುಖ್ಯ



ಚಾಮರಾಜನಗರ, ಜೂ.15– ಮಕ್ಕಳ ಶೈಕ್ಷಣಿಕ ಪ್ರಗತಿಗೆ ಭಾಷಾ ಹಾಗೂ ವ್ಯವಹಾರ ಜ್ಞಾನ ಮುಖ್ಯ ಎಂದು ಮಾದಾಪುರ ಗ್ರಾಮದ ಸರ್ಕಾರಿ ಶಾಲೆ ಶಿಕ್ಷಕಿ ಮೇರಿಕ್ರಿಸ್ಟಿ ತಿಳಿಸಿದರು.

ನಗರದ ಕೇಂದ್ರೀಯ ವಿದ್ಯಾಲಯದಲ್ಲಿ ನಡೆದ ಒಂದು ದಿನದ ಫೌಂಡೇಶನ್ ಸಾಕ್ಷರತೆಯ ಸಂಖ್ಯಾಶಾಸ್ತ್ರ ಜನಬಾಗಿದಾರಿ ಚಟುವಟಿಕೆ ಕುರಿತು ಶಾಲಾ ಮಟ್ಟದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಸಾಕ್ಷರತೆ ಸಂಖ್ಯಾಶಾಸ್ತ್ರ ಜನಬಾಗಿದಾರಿ ಚಟುವಟಿಕೆಗಳ ಕುರಿತು ಮನ ಮುಟ್ಟುವಂತೆ ತಿಳಿಸಿ, ಸುದೀರ್ಘವಾಗಿ ಮಾಹಿತಿ ಹಂಚಿಕೊಂಡರು. ಶಿಕ್ಷಕರೊಂದಿಗೆ ಸಂವಾದ ನಡೆಸಿ ಅವರ ಸಂದೇಹ ಪರಿಹರಿಸಿದರು. ಈ ವೇಳೆ ಸಹ ಶಿಕ್ಷಕರಾದ ಅಜಿತ್, ದೇವರಾಜ್, ರಾಜೇಶ್, ಶಾಲೆ ಸಿಬ್ಬಂದಿ ವರ್ಗ ಇದ್ದರು.

ಪತ್ನಿಗೆ ಚಾಕುವಿನಿಂದ ಇರಿದ ವ್ಯಕ್ತಿ ಬಂಧನ

ಚಾಮರಾಜನಗರ, ಜೂ.15– ಪತ್ನಿಗೆ ಚಾಕುವಿನಿಂದ ಇರಿದು, ಮಾರಣಾಂತಿಕ ಹಲ್ಲೆ ನಡೆಸಿದ ವ್ಯಕ್ತಿಯೋರ್ವನನ್ನು ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಾಲೂಕಿನ ಅಮಚವಾಡಿ ಗ್ರಾಮದ ನಿವಾಸಿ ಕುಮಾರ್ ಬಂಧಿತ ಆರೋಪಿ. ಈತನ ಪತ್ನಿ ಸುಧಾಮಣಿ ತೀವ್ರ ಗಾಯಗೊಂಡವರು. ಇಟ್ಟಿಗೆ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಕುಮಾರ್ ಬುಧವಾರ ತಡರಾತ್ರಿ ಪತ್ನಿಗೆ ಚಾಕುವಿನಿಂದ ಇರಿದಿದ್ದಾನೆ. ಪರಿಣಾಮ ಆಕೆ ತಲೆ, ಬೆನ್ನು, ಕೈಗಳಿಗೆ ತೀವ್ರ ಗಾಯಗಳಾಗಿದೆ. ಹಲ್ಲೆ ಮಾಡಿ ಮಲಗಿದ್ದ ಕುಮಾರನನ್ನು ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಘಟನೆಗೆ ಕಾರಣ ತಿಳಿದು ಬಂದಿಲ್ಲ. ಈ ಬಗ್ಗೆ ಪೊಲೀಸರು ವಿಚಾರಣೆ ನಡೆಸುತ್ತಿದ್ದು, ತೀವ್ರ ಗಾಯಗೊಂಡ ಸುಧಾಮಣಿ ಅವರನ್ನು ಚಿಕಿತ್ಸೆಗಾಗಿ ಚಾಮರಾಜನಗರ ಸಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೈಸೂರು ಮಿತ್ರ ಶುಕ್ರವಾರ 16 ಜೂನ್ 2023

ಏಷ್ಯಾ ಕಪ್ 2023: ಪಾಕ್‌ನಲ್ಲಿ 4, ಲಂಕಾ ನೆಲದಲ್ಲಿ 9 ಪಂದ್ಯ ಆಯೋಜನೆ

ನವದೆಹಲಿ, ಜೂ.15– ತೀವ್ರ ಕುತೂಹಲ ಕೆರಳಿಸಿದ್ದ ಏಷ್ಯಾಕಪ್ 2023 ಕ್ರಿಕೆಟ್ ಟೂರ್ನಿಯ ವೇಳಾಪಟ್ಟಿ ಕೊನೆಗೂ ಅಂತಿಮವಾಗಿದ್ದು, ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಗುರುವಾರ ಹೈಬ್ರಿಡ್ ಮಾದರಿ ವೇಳಾಪಟ್ಟಿ ಪ್ರಕಟ ಮಾಡಿದೆ. ಟೂರ್ನಿಯ ಒಟ್ಟು 13 ಪಂದ್ಯಗಳ ಪೈಕಿ 4 ಪಂದ್ಯಗಳು ಪಾಕಿಸ್ತಾನದಲ್ಲಿ ನಡೆಯಲಿದ್ದು, ಬಾಕಿ 9 ಪಂದ್ಯಗಳು ಶ್ರೀಲಂಕಾದಲ್ಲಿ ನಡೆಯಲಿವೆ. ಭಾರತ, ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶ, ಅಫ್ಘಾನಿಸ್ತಾನ ಮತ್ತು ನೇಪಾಳ ತಂಡಗಳು ಟ್ರೋಫಿಗಾಗಿ ಸೆಣಸಾಡಲಿದ್ದು, ಆಗಸ್ಟ್ 31 ರಿಂದ ಸೆಪ್ಟೆಂಬರ್ 17, 2023 ರವರೆಗೆ ಈ 13 ರೋಚಕ ODI ಪಂದ್ಯಗಳು ನಡೆಯಲಿವೆ.

ಒಂದನೇ ಪುಟದಿಂದ

ನಿಷೇಧ, ಎಪಿಎಂಸಿ ಕಾಯ್ದೆ ರದ್ದು

ಇನ್ನೆರಡು ವಾರದಲ್ಲಿ ತಲುಪಿಸಲಾಗುವುದು. ಸರ್ಕಾರದ ಈ ನಿರ್ಧಾರದಿಂದ ಬೊಕ್ಕಸಕ್ಕೆ ಹೆಚ್ಚಿನ ಹೊರೆಯಾಗುವುದಿಲ್ಲ. ಕೇವಲ 10 ಲಕ್ಷ ರೂ ವೆಚ್ಚದಲ್ಲಿ ಪೂರಕ ಪಠ್ಯವನ್ನು ಶಾಲೆಗಳಿಗೆ ತಲುಪಿಸಲಾಗುವುದು. 6ರಿಂದ 10ನೇ ತರಗತಿವರೆಗಿನ ಕನ್ನಡ ಮತ್ತು ಸಮಾಜ ವಿಜ್ಞಾನದ ಪಠ್ಯದಲ್ಲಿ ಮಾತ್ರ ಬದಲಾವಣೆ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸಮಗ್ರ ತಿದ್ದುಪಡಿ ಮಾಡಲು ತೀರ್ಮಾನಿಸಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪಠ್ಯ ಪರಿಷ್ಕರಣೆ ಮಾಡಲಾಗುವುದು. ಇದಕ್ಕಾಗಿ ಎರಡು ವಾರದಲ್ಲಿ ತಜ್ಞರ ಸಮಿತಿಯನ್ನು ರಚಿಸಲಾಗುವುದು ಎಂದು ಹೇಳಿದರು.

ಕಳೆದ ಸರ್ಕಾರದ ಅವಧಿಯಲ್ಲಿ ಜಾರಿಗೆ ತರಲಾಗಿದ್ದ ಎಪಿಎಂಸಿ ಕಾಯ್ದೆಯನ್ನು ವಾಪಸ್ಸು ಪಡೆದು, ಮೂಲ ಕಾಯ್ದೆಯ ಸ್ವರೂಪದ ಜತೆ ಸುಧಾರಿತ ರೂಪದಲ್ಲಿ ತಿದ್ದುಪಡಿ ತಂದು ಅಧಿವೇಶನದಲ್ಲಿ ಮಂಡಿಸಲಾಗುವುದು. ಹಿಂದಿನ ಸರ್ಕಾರ ಮಾಡಿದ್ದ ತಿದ್ದುಪಡಿಯಿಂದ ರೈತರು, ವರ್ತಕರು ಹಾಗೂ ಹಮಾಲರಿಗೂ ಉಪ ಯೋಗವಾಗಲಿಲ್ಲ. ಬದಲಾಗಿ ಎಪಿಎಂಸಿಗಳ ಆದಾಯ ವರ್ಷದಿಂದ ವರ್ಷಕ್ಕೆ ಇಳಿಕೆಯಾಗಿ 600 ಕೋಟಿಯಿಂದ 194 ಕೋಟಿ ರೂ.ಗೆ ಕುಸಿದಿದೆ. ಹೀಗಾಗಿ ರೈತರ ಹಿತ ಕಾಪಾಡುವ ನಿಯಂತ್ರಿತ ಮಾರುಕಟ್ಟೆ ಪ್ರಾಂಗಣ ಹಾಗೂ ಎಪಿಎಂಸಿ ಸಮಿತಿ ವ್ಯಾಪ್ತಿಯಲ್ಲಿ ನಡೆಯುವ ವಹಿವಾಟಿಗೂ ಒಂದೇ ತೆರನಾದ ಶುಲ್ಕ ವಿಧಿಸಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಸಂವಿಧಾನ ಪೀಠಿಕೆ ಪಠಣ: ಶಾಲಾ–ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಪ್ರಾರ್ಥನೆ ಸಮಯದಲ್ಲಿ ಸಂವಿಧಾನದ ಪೀಠಿಕೆ ಓದುವುದನ್ನು ಜಾರಿಗೆ ತರಲು ತೀರ್ಮಾನಿಸಲಾಯಿತು. ಅಲ್ಲದೆ, ಸರ್ಕಾರಿ ಕಚೇರಿಗಳಲ್ಲಿ ಸಂವಿಧಾನ ಪೀಠಿಕೆ ಫೋಟೋ ಹಾಕಲು ನಿರ್ಣಯಿಸಲಾಯಿತು. ಇದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಶೀಘ್ರ ಸುತ್ತೋಲೆ ಹೊರಡಿಸಲಾಗುವುದು ಎಂದರು. ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಖಾಲಿ ಇರುವ ಸದಸ್ಯ ಸ್ಥಾನಗಳನ್ನು ಭರ್ತಿ ಮಾಡಲು ಸಮ್ಮತಿಸಿರುವ ಸಂಪುಟ, ಆ ಸ್ಥಾನಗಳಿಗೆ ಯಾರನ್ನು ನೇಮಕ ಮಾಡಬೇಕು ಎಂಬ ತೀರ್ಮಾನ ಹಾಗೂ ಅಧಿಕಾರವನ್ನು ಮುಖ್ಯಮಂತ್ರಿಗಳಿಗೆ ಬಿಡಲಾಗಿದೆ.

ಸಾರಿಗೆ ನಿಗಮದ ಸಿಬ್ಬಂದಿ ವೇತನ ಶೇ.15ರಷ್ಟು ಹೆಚ್ಚಳ: ವಿಪತ್ತು ನಿರ್ವಹಣೆಗಾಗಿ ಸಚಿವ ಸಂಪುಟದ ಉಪ ಸಮಿತಿ ರಚನೆಗೆ ಸಭೆ ತೀರ್ಮಾನಿಸಿದ್ದು, ಸಾರಿಗೆ ಸಂಸ್ಥೆ ಡಬ್ಬಲ್ ಡೆಕ್ಕರ್ ಮತ್ತು ಎಲೆಕ್ಟ್ರಿಕ್ ಬಸ್ ಖರೀದಿಗೆ 28 ಕೋಟಿ ರೂ. ನೀಡಲು ಸಮ್ಮತಿಸಿದೆ. ಅಲ್ಲದೆ, ಸಾರಿಗೆ ನಿಗಮದ ಸಿಬ್ಬಂದಿಯ ವೇತನ ಶೇ.15ರಷ್ಟು ಹೆಚ್ಚಿಸಲು ಸಂಪುಟ ಒಪ್ಪಿದೆ. ಸಾರಿಗೆ ಸಂಸ್ಥೆಗಳು ನಷ್ಟದಲ್ಲಿರುವುದರಿಂದ ಮೋಟಾರು ವಾಹನ ತೆರಿಗೆಯ ಬಾಕಿ 79.85 ಕೋಟಿ ರೂ. ಮನ್ನಾ ಮಾಡಲು ಒಪ್ಪಿರುವುದಲ್ಲದೆ, ಅಗ್ನಿಶಾಮಕ ಕಾಯ್ದೆಗೆ ತಿದ್ದುಪಡಿ ತರಲು ತೀರ್ಮಾನಿಸಿದೆ.

ಪೀಠಿಕೆ ಓದು ಕಡ್ಡಾಯಗೊಳಿಸಿದ ಸರ್ಕಾರ

ಖಾಸಗಿಯಾಗಿರಲಿ –ಸಂವಿಧಾನದ ಪೀಠಿಕೆಯನ್ನು ಕಡ್ಡಾಯವಾಗಿ ಓದಬೇಕು ಎಂದು ಸಚಿವ ಸಂಪುಟ ಸಭೆ ಬಳಿಕ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಹೇಳಿದ್ದಾರೆ. ಇದು ಯುವಜನರನ್ನು ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಲು ಮತ್ತು ಎಲ್ಲಾ ಸಮುದಾಯಗಳ ನಡುವೆ ಸಹೋದರತ್ವವನ್ನು ಉತ್ತೇಜಿಸಲು ಪ್ರೇರೇಪಿಸುತ್ತದೆ ಎಂದು ಎಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ. ಇಂತಹ ಶ್ರೇಷ್ಠ ಸಂವಿಧಾನವನ್ನು ಹೊಂದಿರುವ ನಮ್ಮ ಯುವಕರು ಪ್ರತಿ ದಿನ ಅದರ ಪೀಠಿಕೆಯನ್ನು ಕಡ್ಡಾಯವಾಗಿ ಓದಬೇಕು ಮತ್ತು ಎಲ್ಲಾ ಸರ್ಕಾರಿ ಹಾಗೂ ಅರೆ ಸರ್ಕಾರಿ ಕಚೇರಿಗಳಲ್ಲಿ ಅದರ ಭಾವಚಿತ್ರವನ್ನು ಪ್ರದರ್ಶಿಸಬೇಕು ಎಂದಿದ್ದಾರೆ. ಸಂವಿಧಾನದ ಆಶಯಗಳನ್ನು, ಸಂವಿಧಾನದ ರಚನೆಯ ಮೂಲ ಉದ್ದೇಶಗಳನ್ನು ತಿಳಿಯಲು ಹಾಗೂ ಎಲ್ಲಾ ಜಾತಿ ಧರ್ಮಗಳನ್ನು ಸಮಾನವಾಗಿ ಕಾಣಲು ಅನುವು ಮಾಡಿಕೊಡಲು ಎಲ್ಲಾ ಶಾಲಾ, ಕಾಲೇಜ್ ಮತ್ತು ವಿಶ್ವವಿದ್ಯಾಲಯಗಳಲ್ಲಿ ಸಂವಿಧಾನದ ಪೀಠಿಕೆಯನ್ನು ಕಡ್ಡಾಯವಾಗಿ ಓದಬೇಕು ಮತ್ತು ಸರ್ಕಾರಿ ಕಚೇರಿಯಲ್ಲಿ ಕಡ್ಡಾಯವಾಗಿ ಸಂವಿಧಾನದ ಪೀಠಿಕೆಯ ಭಾವಚಿತ್ರ ಹಾಕಲು ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಡಿಪಿಆರ್ ರೂಪಿಸಲು ಮುಡಾದಿಂದ ಟೆಂಡರ್

ಯೋಜನೆಯ ಸ್ವರೂಪ, ಉದ್ದ, ಅಗಲ, ಎಲ್ಲೆಲ್ಲಿ ಈ ರೋಡ್ ಹಾದು ಹೋಗುತ್ತದೆ, ಬೀದಿ ದೀಪ, ಚರಂಡಿ, ರಸ್ತೆ ವಿಭಜಕ, ಸಿಗ್ನಲ್ ಲೈಟ್ ಸರ್ಕಲ್, ಅಂಡರ್ ಬ್ರಿಡ್ಜ್, ಓವರ್ ಬ್ರಿಡ್ಜ್‌ಗಳು, ಸೇತುವೆಗಳು, ಬೈಪಾಸ್‌ಗಳು ಎಲ್ಲೆಲ್ಲಿ ಬರಬೇಕೆಂಬುದರ ಮಾಹಿತಿಗಳನ್ನು ಟೆಂಡರ್‌ನಲ್ಲಿ ನಮೂದಿಸಲಾಗಿದೆ. ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಕಾಮಗಾರಿಗೆ ತಗಲುವ ವೆಚ್ಚ, ಭೂ ಸ್ವಾಧೀನ ಪ್ರಕ್ರಿಯೆ ಮತ್ತು ರೈತರಿಗೆ ಪರಿಹಾರ ನೀಡಲು ಎಷ್ಟು ಹಣ ಬೇಕಾಗುತ್ತದೆ, ಯೋಜನೆಗೆ ಬೇಕಾದ ಅವಧಿ, ಮತ್ತಿತರ ಅಂಶಗಳನ್ನೊಳಗೊಂಡ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಬೇಕೆಂದು ನಮೂದಿಸಲಾಗಿದೆ. 45 ಮೀಟರ್ ಅಗಲ, 104 ಉದ್ದದ ಪೆರಿಫೆರಲ್ ರಿಂಗ್ ರಸ್ತೆಗೆ ಅಂದಾಜು 824 ಎಕರೆ ಭೂಮಿ ಅಗತ್ಯವಿದ್ದು, ಆ ಪೈಕಿ ಹಾಲಿ ರಸ್ತೆ ಸರ್ಕಾರಿ ಭೂಮಿಯನ್ನು ಈ ಉದ್ದೇಶಕ್ಕೆ ಬಳಸಿಕೊಳ್ಳಲಾಗುವುದು. 6 ಮುಖ್ಯ ರಸ್ತೆ ಹಾಗೂ 2 ಸರ್ವೀಸ್ ರಸ್ತೆಯನ್ನು ನಿರ್ಮಿಸಲುದ್ದೇಶಿಸಲಾಗಿದೆ. ಭೂ ಸ್ವಾಧೀನಕ್ಕೆ 1,236 ಕೋಟಿ ರೂ. ಹಾಗೂ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣಕ್ಕೆ 735 ಕೋಟಿ ರೂ. ಸೇರಿ ಒಟ್ಟು 1,971 ಕೋಟಿ ರೂ.ಗಳನ್ನು ಯೋಜನೆಗೆ ಅಂದಾಜಿಸಲಾಗಿದೆ. ಮೈಸೂರು–ಬೆಂಗಳೂರು ದಶಪಥ ಎಕ್ಸ್‌ಪ್ರೆಸ್ ವೇ, ಬನ್ನೂರು ರಸ್ತೆ, ಮೋಸಂಬನಹಳ್ಳಿ, ದೇವಲಾಪುರ, ಕಡಕೊಳ, ದ್ಯಾವಲಾಪುರ, ಮಾನಂದವಾಡಿ ರಸ್ತೆ, ಜ್ಞಾನ ಗಂಗಾ ಬಡಾವಣೆ, ಬಲ್ಲಹಳ್ಳಿ, ಹುಯಿಲಾಳು, ಇಲವಾಲ, ನಾಗವಾಲ ಹಾಗೂ ಪಶ್ಚಿಮವಾಹಿನಿ ಬಳಿ ಮಾರ್ಗದ ಕೃಷಿ ಜಮೀನಿನಲ್ಲಿ ಪೆರಿಫೆರಲ್ ರಿಂಗ್ ರೋಡ್ ನಿರ್ಮಾಣಕ್ಕೆ ಗುರುತಿಸಲಾಗಿದೆ. ಯಾರು ಅತೀ ಕಡಿಮೆ ದರ ನಮೂದಿ ಸುವರೋ ಅಂತಹ ಸಂಸ್ಥೆಗೆ ನಿಬಂಧನೆಗೊಳಪಡಿಸಿ ಪೆರಿಫೆರಲ್ ರಿಂಗ್ ರಸ್ತೆಗೆ ಡಿಪಿಆರ್ ತಯಾರಿಸುವ ಜವಾಬ್ದಾರಿಯನ್ನು ಒಪ್ಪಿಸಲಾಗುವುದು ಎಂದು ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಅಣ್ಣನ ಭೀಕರವಾಗಿ ಹತ್ಯೆಗೈದ ಪ್ರಿಯಕರ

ಎಂದು ಹೇಳಲಾಗಿದೆ. ಈ ವಿಚಾರ ತಿಳಿದು ಸ್ವಾಮಿ ಹಾಗೂ ಆತನ ಮನೆಯವರು ಕಳೆದ ಕೆಲ ದಿನಗಳ ಹಿಂದೆ ಗ್ರಾಮದಲ್ಲಿ ಪಂಚಾಯ್ತಿ ಸೇರಿಸಿ ಪೇಂಟರ್ ಕೆಲಸ ಮಾಡುತ್ತಿರುವ ಸಾಗರ್‌ಗೆ ಇಂಜಿನಿಯರ್ ಆಗಲಿರುವ ತಮ್ಮ ಹುಡುಗಿಯನ್ನು ಮದುವೆ ಮಾಡಿಕೊಡಲು ಸಾಧ್ಯವಿಲ್ಲ. ಹೀಗಾಗಿ ಆಕೆಯ ತಂಟೆಗೆ ಸಾಗರ್ ಬರಬಾರದು ಎಂದು ತಾಕೀತು ಮಾಡಿದ್ದರಂತೆ. ಈ ಸಂಬಂಧ ಗ್ರಾಮದಲ್ಲಿ ಎರಡು ಬಾರಿ ಪಂಚಾಯ್ತಿ ನಡೆದಿದೆ ಎಂದು ಹೇಳಲಾಗಿದೆ. ಆದರೆ ಸಾಗರ್ ಮತ್ತು ಸ್ವಾಮಿಯ ತಂಗಿ ಸಂಪರ್ಕದಲ್ಲೇ ಇದ್ದರು ಎನ್ನಲಾಗಿದೆ. ಇಂದು ಬೆಳಗ್ಗೆ ಸ್ವಾಮಿಯ ತಂಗಿ ವ್ಯಾಸಂಗ ಮಾಡುತ್ತಿರುವ ಕಡಕೊಳ ಸಮೀಪದ ಕಾಲೇಜು ಬಳಿ ತೆರಳಿದ ಸಾಗರ್ ಆಕೆಯೊಂದಿಗೆ ಮಾತನಾಡಿಸುತ್ತಾ ನಿಂತಿದ್ದ ವಿಚಾರ ತಿಳಿದು ಅಲ್ಲಿಗೇ ತೆರಳಿದ ಸ್ವಾಮಿ, ತನ್ನ ತಂಗಿಯನ್ನು ಮನೆಗೆ ಕರೆತಂದು ಮತ್ತೆ ಸಾಗರ್‌ನನ್ನು ಭೇಟಿ ಮಾಡಬಾರದು ಎಂದು ತಾಕೀತು ಮಾಡಿದ್ದಾನೆ ಎನ್ನಲಾಗಿದೆ.

ಇದರಿಂದ ಕೆರಳಿದ್ದ ಸಾಗರ್, ಇಂದು ಸಂಜೆ ಸ್ವಾಮಿ ತನ್ನ ಸ್ನೇಹಿತ ಸುಖಾಂತ್ ಜೊತೆ ಸ್ಕೂಟರ್‌ನಲ್ಲಿ ಮನೆಯಿಂದ ಹೊರ ಹೋಗಿದ್ದನ್ನು ಕಂಡ ಸಾಗರ್, ಸಂಬಂಧಿಕರಾದ ಪ್ರತಾಪ್ ಮತ್ತು ಮಂಜು ಅವರೊಂದಿಗೆ ಸ್ಕೂಟರ್‌ನಲ್ಲಿ ಆತನನ್ನು ಹಿಂಬಾಲಿಸಿದ್ದರು. ವಿಜಯನಗರ ನಾಲ್ಕನೇ ಹಂತದಲ್ಲಿರುವ ಎಸ್‌ವಿಇಐ ಶಿಕ್ಷಣ ಸಂಸ್ಥೆಯ ಹಿಂಭಾಗದ ರಸ್ತೆಯಲ್ಲಿ ಸಂಜೆ 7.30ರ ಸುಮಾರಿನಲ್ಲಿ ಸ್ವಾಮಿ ಮತ್ತು ಸುಖಾಂತ್ ತೆರಳುತ್ತಿದ್ದಾಗ ಸಾಗರ್ ತನ್ನ ಸ್ಕೂಟರ್‌ನಿಂದ ಸ್ವಾಮಿಯ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದ್ದಾನೆ. ಎರಡೂ ದ್ವಿಚಕ್ರ ವಾಹನದಲ್ಲಿದ್ದವರು ಬಿದ್ದರಾದರೂ, ಮತ್ತೆ ಎದ್ದ ಸಾಗರ್ ಮತ್ತವನ ಸಂಬಂಧಿಕರು ಸ್ವಾಮಿಯನ್ನು ಚಾಕುವಿನಿಂದ ಇರಿದು ಕುಡುಗೋಲಿನಿಂದ ಕೊಚ್ಚಿದ್ದಲ್ಲದೇ, ಸಿಮೆಂಟ್ ಇಟ್ಟಿಗೆಗಳನ್ನು ಆತನ ತಲೆ ಮೇಲೆ ಎತ್ತಿ ಹಾಕಿ ಹತ್ಯೆಗೈಯ್ದಿದ್ದಾರೆ. ಹತ್ಯೆಯ ಪ್ರತ್ಯಕ್ಷದರ್ಶಿ ಸ್ವಾಮಿಯ ಸ್ನೇಹಿತ ಸುಖಾಂತ್ ಈ ಘಟನಾವಳಿಯನ್ನು ಪೊಲೀಸರಿಗೆ ವಿವರಿಸಿದ್ದಾನೆ. ವಿಷಯ ತಿಳಿಯುತ್ತಿದ್ದಂತೆಯೇ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ, ವಿಜಯನಗರ ಉಪ ವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್, ವಿಜಯನಗರ ಇನ್ಸ್‌ಪೆಕ್ಟರ್ ರವಿಶಂಕರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ವಾಮಿ ಸ್ನೇಹಿತ ಸುಖಾಂತ್‌ನ ಹೇಳಿಕೆಯನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದು ಅವರಿಗಾಗಿ ಹುಡುಕಾಟ ನಡೆಯುತ್ತಿದೆ.

ಇಂದಿನಿಂದ ಅರ್ಜಿ ಸಲ್ಲಿಕೆಗೆ ಅವಕಾಶ

ಗುರುವಾರ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಕ್ತಿಭವನದಲ್ಲಿ ಸಾಂಕೇತಿಕವಾಗಿ ಐವರ ಫಲಾನುಭವಿಗಳ ಅರ್ಜಿ ಸಲ್ಲಿಕೆ ಮೂಲಕ ಸೇವಾ ಸಿಂಧು ಜಾಲತಾಣಕ್ಕೆ ಚಾಲನೆ ನೀಡಲಿದ್ದಾರೆ. ಬಿಪಿಎಲ್ ಮತ್ತು ಅಂತ್ಯೋದಯ ಪಡಿತರ ಚೀಟಿ ಹೊಂದಿದವರು ಯೋಜನೆಗೆ ಅರ್ಹರು. ಅರ್ಜಿದಾರರ ಪತಿ ಆದಾಯ ತೆರಿಗೆ ಪಾವತಿದಾರರಾಗಿದ್ದರೆ ಅರ್ಜಿ ತಿರಸ್ಕೃತವಾಗಲಿದೆ. ಇ–ಗವರ್ನೆನ್ಸ್ ಮೂಲಕ ಅರ್ಜಿ ಸಲ್ಲಿಕೆಗೆ ವ್ಯವಸ್ಥೆ ಮಾಡಿದ್ದು, ಅರ್ಜಿ ಸಲ್ಲಿಸುವ ವೇಳೆ ಮೊಬೈಲ್ ನಂಬರ್ ಜೋಡಣೆಯಾದ ಆಧಾರ್ ಸಂಖ್ಯೆಯನ್ನು ನೀಡಬೇಕು. ಯಾವುದೇ ಗೊಂದಲವಿದ್ದರೆ ಸಹಾಯವಾಣಿ ಸಂಖ್ಯೆ 1902ಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದು ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದರು.

ಮುಂಗಾರು ದುರ್ಬಲ, ಬರಿದಾಗುತ್ತಿದೆ ಕೆಆರ್‌ಎಸ್, ಕಬಿನಿ ಒಡಲು



ಈಗ ಉಳಿದಿರುವುದು ಕೇವಲ 6.5 ಟಿಎಂಸಿ ನೀರು, ಮಳೆ ಬಾರದಿದ್ದರೆ ನೀರಿಗೆ ಹಾಹಾಕಾರ

ಕೆಆರ್‌ಎಸ್ ಜಲಾಶಯ
ಗರಿಷ್ಠ ಮಟ್ಟ 124.80 ಅಡಿ
ಈಗಿನ ಮಟ್ಟ 82.32 ಅಡಿ
ಒಳ ಹರಿವು 570 ಕ್ಯುಸೆಕ್
ಹೊರ ಹರಿವು 3,230 ಕ್ಯುಸೆಕ್
ಕಳೆದ ವರ್ಷ ಇದೇ ದಿನ
ಗರಿಷ್ಠ ಮಟ್ಟ 124.80 ಅಡಿ
ಅಂದಿನ ಮಟ್ಟ 105.55 ಅಡಿ
ಒಳ ಹರಿವು 1,425 ಕ್ಯುಸೆಕ್
ಹೊರ ಹರಿವು 1,043 ಕ್ಯುಸೆಕ್

ಕಬಿನಿ ಜಲಾಶಯ
ಗರಿಷ್ಠ ಮಟ್ಟ 2,284 ಅಡಿ
ಈಗಿನ ಮಟ್ಟ 2,250 ಅಡಿ
ಒಳ ಹರಿವು 2,068
ಹೊರ ಹರಿವು 208
ಕಳೆದ ವರ್ಷ ಮಟ್ಟ
ಗರಿಷ್ಠ ಮಟ್ಟ 2,284 ಅಡಿ
ಅಂದಿನ ಮಟ್ಟ 2,261.09
ಒಳ ಹರಿವು 951 ಕ್ಯುಸೆಕ್
ಹೊರ ಹರಿವು 1000 ಕ್ಯುಸೆಕ್

ಮೈಸೂರು. ಜೂ.15.(ಬಿಎಲ್‌ಯು)– ಮುಂಗಾರು ಈಗಾಗಲೇ ಆರಂಭವಾಗಿ ಕೆಆರ್‌ಎಸ್, ಕಬಿನಿ ಸೇರಿದಂತೆ ಕರ್ನಾಟಕದ ಜಲಾಶಯಗಳಿಗೆ ಒಳ ಹರಿವಿನಲ್ಲಿ ಗಣನೀಯ ಹೆಚ್ಚಳವಾಗಬೇಕಿತ್ತು. ಆದರೆ ಈ ಬಾರಿ ಚಂಡಮಾರುತದ ಅಬ್ಬರದಲ್ಲಿ ಮುಂಗಾರು ಕರ್ನಾಟಕವನ್ನು ಪ್ರವೇಶಿಸುವುದು ನಾಲ್ಕು ವಾರ ವಿಳಂಬವಾಗುವ ಸಾಧ್ಯತೆ ಇದೆ. ಹಾಗಾಗಿ ವಾಡಿಕೆ ಮಳೆಯಾಗದೆ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಗಳು ಬತ್ತುವ ಪರಿಸ್ಥಿತಿ ಬಂದಿದೆ. ಇದರಿಂದ ಮೈಸೂರು, ಮಂಡ್ಯ ಹಾಗೂ ಬೆಂಗಳೂರಿಗರಿಗೆ ಕುಡಿಯುವ ನೀರಿನ ಬವಣೆ ಆತಂಕ ಮೂಡಿಸಿದೆ.

ಕಳೆದ ವರ್ಷ ಇದೇ ವೇಳೆ ಕೆಆರ್‌ಎಸ್, ಕಬಿನಿ ಸೇರಿದಂತೆ ರಾಜ್ಯದ ಇತರೆ ಜಲಾಶಯಗಳಲ್ಲಿ ಸಾಕಷ್ಟು ನೀರಿನ ಸಂಗ್ರಹವಾಗಿತ್ತು. ಕಳೆದ ವರ್ಷ ಮುಂಗಾರಿಗೆ ಮುನ್ನವೇ ವರುಣ ಆರ್ಭಟಿಸಿದ್ದ. ಆದರೆ ಈ ವರ್ಷ ಜೂನ್ ಮೂರನೇ ವಾರಕ್ಕೆ ಕಾಲಿಟ್ಟರೂ ಮಳೆ ಇಲ್ಲ. ಆಕಸ್ಮಿಕ ಎಂಬಂತೆ ವಾರಕ್ಕೆ ಒಮ್ಮೆ ಮಳೆ ಆಗುತ್ತಿದೆ.

ಇದರಿಂದ ಕೆಆರ್‌ಎಸ್, ಕಬಿನಿ, ಹಾರಂಗಿ ಜಲಾಶಯದಲ್ಲಿ ನೀರಿನ ಪ್ರಮಾಣ ಭಾರೀ ಪ್ರಮಾಣದಲ್ಲಿ ಕುಸಿತವಾಗಿದ್ದು, ಅಣೆಕಟ್ಟು ಪ್ರದೇಶ ಹಾಗೂ ಹಿನ್ನೀರು ಬರಡಾಗಿ ಕಾಣುತ್ತಿದೆ.

ಕೆಆರ್‌ಎಸ್‌ನಲ್ಲಿ ಕೇವಲ 3.5 ಟಿಎಂಸಿ ಲಭ್ಯವಿದ್ದರೆ, ಕಬಿನಿಯಲ್ಲಿ ಕೇವಲ 3 ಟಿಎಂಸಿ ನೀರಿದೆ. ಈ ಎರಡು ಜಲಾಶಯದಿಂದ ಒಟ್ಟು 6.5 ಟಿಎಂಸಿ ನೀರು ಮಾತ್ರ ಇರುವುದು ಆತಂಕಕ್ಕೆ ಕಾರಣವಾಗಿದೆ. ಸದ್ಯ ಮಳೆ ಬಾರದಿದ್ದರೆ, ಮೈಸೂರು, ಮಂಡ್ಯ ಮತ್ತು ಬೆಂಗಳೂರಿನಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಖಚಿತ.

ಕೆಆರ್‌ಎಸ್ ಅಣೆಕಟ್ಟಿನ ಗರಿಷ್ಠ ಮಟ್ಟ 124.80 ಅಡಿ ಇದ್ದರೆ, ಗುರುವಾರದ ಮಟ್ಟ 82.32 ಅಡಿ, ಜಲಾಶಯಕ್ಕೆ 570 ಕ್ಯುಸೆಕ್ ಒಳ ಹರಿವು ಇದ್ದರೆ, 3,230 ಕ್ಯುಸೆಕ್ ಹೊರ ಹರಿವು ಇದೆ.

60 ಅಡಿ ಡೆಡ್ ಸ್ಟೋರೇಜ್ ಇದ್ದು, ಈಗಿರುವ ನೀರಿನ ಪ್ರಮಾಣದಲ್ಲಿ ಡೆಡ್ ಸ್ಟೋರೇಜ್‌ಗೆ ಇನ್ನು 22 ಅಡಿ ಬಾಕಿ ಇದೆ. ಕೆಆರ್‌ಎಸ್ ಜಲಾಶಯದಲ್ಲಿ ಈಗ 11.84 ಟಿಎಂಸಿ ನೀರು ಇದೆ. ಇದರಲ್ಲಿ ಡೆಡ್ ಸ್ಟೋರೇಜ್ ಬಿಟ್ಟು ಉಳಿದ 3.5 ಟಿಎಂಸಿ ನೀರು ಮಾತ್ರ ಬಳಕೆಗೆ ಉಳಿಯುತ್ತಿದೆ. ಈ ನೀರನ್ನು ಬೆಳೆಗೆ ಬಿಡಲು ಸಾಧ್ಯವಿಲ್ಲ. ಕುಡಿಯಲು ಮಾತ್ರ ಬಳಕೆ ಮಾಡಿಕೊಳ್ಳಬಹುದು.

ಕಾವೇರಿ ನ್ಯಾಯಾಧೀಕರಣದ ಆದೇಶದಂತೆ ತಮಿಳುನಾಡಿಗೆ ಎರಡು ಅಣೆಕಟ್ಟೆಯಿಂದ ಮೇ ತಿಂಗಳ ನೀರನ್ನು ಈಗಾಗಲೇ ಬಿಡಲಾಗಿದೆ. ಆದರೆ ಕುಡಿಯುವ ನೀರಿಗೆ ನಮಗೆ ಸಾಕಾಗದೆ ಇರುವ ಕಾರಣ ಜೂನ್ ತಿಂಗಳ ನೀರನ್ನು ತಮಿಳುನಾಡಿಗೆ ಇನ್ನು ಬಿಟ್ಟಿಲ್ಲ.

ಈಗ ಕುಡಿಯುವ ನೀರಿಗೆ ಅಣೆಕಟ್ಟೆಯಲ್ಲಿ ಕಡಿಮೆ ನೀರು ಇರುವ ಕಾರಣ ಹೊಸ ಬೆಳೆಗೆ ನೀರು ಬಿಡಲು ಸಾಧ್ಯವಿಲ್ಲ.

ಈಗಾಗಲೇ ಬೆಳೆದಿರುವ ಹಳೆ ಬೆಳೆ ಒಣಗಬಾರದು ಎಂದು ಕೆಆರ್‌ಎಸ್ ಜಲಾಶಯದಿಂದ 3,230 ಕ್ಯುಸೆಕ್ ನೀರು ಬಿಡಲಾಗುತ್ತದೆ. ಮುಂಗಾರು ಅಬ್ಬರಿಸಿ ವಾಡಿಕೆಯಂತೆ ಮಳೆಯಾಗಿ 100 ಅಡಿ ಮೇಲೆ ಅಣೆಕಟ್ಟು ತುಂಬಿದರೆ ಮಾತ್ರ ಬೆಳೆಗೆ ನೀರು ಬಿಡಲು ಸಾಧ್ಯವಾಗುತ್ತದೆ.

ಮೈಸೂರಿನ ಹೆಚ್.ಡಿ.ಕೋಟೆಯಲ್ಲಿ ಕೂಡ ಇದೆ ಪರಿಸ್ಥಿತಿ ಇದೆ. ಕಬಿನಿ ಜಲಾಶಯದಲ್ಲಿ ಕೂಡ ಕುಡಿಯುವ ನೀರಿಗೆ 3 ಟಿಎಂಸಿ ನೀರು ಮಾತ್ರ ಇದೆ. ಕಬಿನಿ ಜಲಾಶಯದ ಗರಿಷ್ಠ ಮಟ್ಟ 2,284 ಅಡಿ. ಗುರುವಾರದ ನೀರಿನ ಮಟ್ಟ 2,250 ಅಡಿ. ಡೆಡ್ ಸ್ಟೋರೇಜ್ 2,221 ಅಡಿವರೆಗೆ ಇದೆ. ಇದರಲ್ಲಿ 3 ಟಿಎಂಸಿ ನೀರು ಮಾತ್ರ ಬಳಕೆಗೆ ಸಾಧ್ಯವಾಗಲಿದ್ದು, ಉಳಿಯುವ ನೀರು ಡೆಡ್ ಸ್ಟೋರೇಜ್‌ನಲ್ಲಿ ಇರಲಿದೆ.

ಎರಡೂ ಜಲಾಶಯದಲ್ಲಿರುವ 6.5 ಟಿಎಂಸಿ ನೀರು ಮುಗಿದರೆ ಕುಡಿಯುವ ನೀರಿಗೂ ತತ್ವಾರ ಉಂಟಾಗಲಿದೆ.

ಮುಂಗಾರು ಚುರುಕಾಗಿ ವಾಡಿಕೆಯಂತೆ ಮಳೆ ಬೀಳಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ಇದರಿಂದ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯ ತುಂಬಿ ಕುಡಿಯುವ ನೀರಿಗೆ ತೊಂದರೆ ಆಗುವುದಿಲ್ಲ ಎಂಬ ನಿರೀಕ್ಷೆ ಇದೆ. ಎರಡೂ ಜಲಾಶಯಗಳು ಭರ್ತಿಯಾಗಲಿ ಎಂಬುದೇ ಜನರ ಆಶಯವಾಗಿದೆ.

ಯುಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಶಿಬಿರ

ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸುವ 25 ಮಂದಿಗೆ ಉಚಿತ ತರಬೇತಿ



ಮೈಸೂರು,ಜೂ.15(ಪಿಎಂ)– ಕರ್ನಾಟಕ ಆರ್ಯವೈಶ್ಯ ಮಹಾಸಭಾದ ವಾಸವಿ ಅಕಾಡೆಮಿ ವತಿಯಿಂದ ಲೋಕಸೇವಾ ಆಯೋಗದ (ಯುಪಿಎಸ್‌ಸಿ) 2024ನೇ ಸಾಲಿನ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 8 ತಿಂಗಳ ತರಬೇತಿ ಶಿಬಿರ ಆಯೋಜಿಸಿದ್ದು, ಅಕಾಡೆಮಿ ನಡೆಸುವ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸುವ ಮೊದಲ 25 ಮಂದಿಗೆ ಉಚಿತ ತರಬೇತಿ ಪಡೆಯಲು ಅವಕಾಶವಿದೆ ಎಂದು ಮಹಾಸಭಾದ ಕಾರ್ಯಕಾರಿ ಸಮಿತಿ ಸದಸ್ಯೆ ಗೌರವ್ ಸುಧಾಮುರಳಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ಸಮುದಾಯ ಅಭ್ಯರ್ಥಿಗಳು ಈ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಬಹುದು. ಅಕಾಡೆಮಿಯ ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸುವ 25 ಮಂದಿಗೆ ಊಟ–ವಸತಿ ಸೌಲಭ್ಯ ಸೇರಿದಂತೆ ಉಚಿತ ತರಬೇತಿ ದೊರೆಯಲಿದೆ ಎಂದರು.

ಉಳಿದಂತೆ ಇನ್ನು 50 ಮಂದಿಗೆ ತರಬೇತಿ ಪಡೆಯಲು ಅವಕಾಶ ಕಲ್ಪಿಸುತ್ತಿದ್ದು, ಈ ಅಭ್ಯರ್ಥಿಗಳು ತಲಾ 50 ಸಾವಿರ ರೂ. ತರಬೇತಿ ಶುಲ್ಕ ಪಾವತಿ ಮಾಡಬೇಕಾಗುತ್ತದೆ ಬೆಂಗಳೂರಿನ ಗಾಂಧಿನಗರದ ಶೇಷಾದ್ರಿ ರಸ್ತೆಯ ವಾಸವಿ ಅಕಾಡೆಮಿಯಲ್ಲಿ ತರಬೇತಿ ಶಿಬಿರ ನಡೆಯಲಿದೆ. ಇದೇ ಸ್ಥಳದಲ್ಲಿ ಜು.2 ರಂದು ತರಬೇತಿ ಶಿಬಿರ ಪ್ರವೇಶ ಪಡೆಯುವ ಸಂಬಂಧ ಅಕಾಡೆಮಿಯಿಂದ ಪ್ರವೇಶ ಪರೀಕ್ಷೆ ನಡೆಯಲಿದೆ ಎಂದು ತಿಳಿಸಿದರು.

ಆಸಕ್ತರು ಜೂ.25ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 80734 99217 ಅಥವಾ ಅಕಾಡೆಮಿ ವೆಬ್‌ಸೈಟ್‌ಗೆ (https://vasaviacademy.com/) ಭೇಟಿ ನೀಡಬಹುದು ಎಂದು ಹೇಳಿದರು.

ಮಹಾಸಭಾದ ಮಾಜಿ ನಿರ್ದೇಶಕ ನಾಗರಾಜು ಗುಪ್ತ, ಮೈಸೂರು ವಿಭಾಗೀಯ ಕಾರ್ಯದರ್ಶಿ ಇ.ಕೆ.ಅನಂತ್, ಜಿಲ್ಲಾಧ್ಯಕ್ಷ ಆನಂದ ಕೃಷ್ಣ, ಕಾರ್ಯದರ್ಶಿ ರಶ್ಮಿ ರಾಘವೇಂದ್ರ ಗೋಷ್ಠಿಯಲ್ಲಿದ್ದರು.

ನಾಳೆ ಮಹಾಜನ ಕಾಲೇಜಲ್ಲಿ ಪದವಿ ಪ್ರದಾನ ಸಮಾರಂಭ



ಮೈಸೂರು,ಜೂ.15(ಪಿಎಂ)– ಮಹಾಜನ ವಿದ್ಯಾಸಂಸ್ಥೆಯ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ಪದವಿ ಪ್ರದಾನ ಸಮಾರಂಭವನ್ನು ಜೂ.17ರಂದು ಹಮ್ಮಿಕೊಳ್ಳಲಾಗಿದೆ ಎಂದು ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜಿನ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಸಭಾಂಗಣದಲ್ಲಿ ಅಂದು ಬೆಳಗ್ಗೆ 11ಕ್ಕೆ ಸಮಾರಂಭ ಆರಂಭವಾಗಲಿದೆ. ಯುಜಿಸಿ ನಿಕಟಪೂರ್ವ ಅಧ್ಯಕ್ಷ ಪ್ರೊ.ವೇದ್ ಪ್ರಕಾಶ್ ಪದವಿ ಪ್ರದಾನ ಮಾಡಲಿದ್ದಾರೆ. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಮಾತನಾಡಿ, 2021–22ರ ಶೈಕ್ಷಣಿಕ ವರ್ಷದ ಸ್ನಾತಕ ಪದವಿ ವಿಭಾಗದ ಬಿ.ಎ, ಬಿ.ಕಾಂ., ಬಿಬಿಎ, ಬಿಸಿಎ, ಬಿಎಸ್ಸಿ ಮತ್ತು ಬಿಬಿಎ (ಟೂರಿಸಂ ಅಂಡ್ ಹಾಸ್ಪಿಟಾಲಿಟಿ) ಕೋರ್ಸ್‌ಗಳಲ್ಲಿ ಒಟ್ಟು 488 ವಿದ್ಯಾರ್ಥಿಗಳು ಪದವಿ ಪಡೆಯಲಿದ್ದಾರೆ. ಈ ಪೈಕಿ 188 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 291 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 37 ವಿದ್ಯಾರ್ಥಿಗಳು ಚಿನ್ನದ ಪದಕದೊಂದಿಗೆ ನಗದು ಬಹುಮಾನ ಪಡೆಯಲಿದ್ದಾರೆ ಎಂದು ತಿಳಿಸಿದರು.

ಎಂಬಿಎ, ಎಂಸಿಎ, ಎಂ.ಕಾಂ, ಎಂಎಸ್‌ಡಬ್ಲ್ಯೂ, ಎಂಎಸ್ಸಿ ಕೆಮಿಸ್ಟ್ರಿ ಎಂಎಸ್ಸಿ ಬಯೋಕೆಮಿಸ್ಟ್ರಿ ಎಂಎಸ್ಸಿ ಬಯೋಟೆಕ್ನಾಲಜಿ, ಎಂಎಸ್ಸಿ ಮೈಕ್ರೋಬಯಾಲಜಿ, ಎಂಎಸ್ಸಿ ಕಂಪ್ಯೂಟರ್ ಸೈನ್ಸ್ ಮತ್ತು ಎಂಟಿಟಿಎಂ ಸೇರಿದಂತೆ 10 ಕೋರ್ಸ್‌ಗಳಲ್ಲಿ ಒಟ್ಟು 349 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಪಡೆಯಲಿದ್ದಾರೆ. ಈ ಪೈಕಿ 96 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 250 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 23 ವಿದ್ಯಾರ್ಥಿಗಳು ಚಿನ್ನದ ಪದಕದೊಂದಿಗೆ ನಗದು ಬಹುಮಾನ ಪಡೆಯಲಿದ್ದಾರೆ. 4 ವಿದ್ಯಾರ್ಥಿಗಳು ದತ್ತಿ ನಗದು ಬಹುಮಾನ ಪಡೆಯಲಿದ್ದಾರೆ ಎಂದು ವಿವರಿಸಿದರು.

ಚಿಂತಕ ಪ್ರೊ.ಕೆ.ರಾಮದಾಸ್ ನೆನಪಿನಲ್ಲಿ

ಸಂವಾದ, ಪುಸ್ತಕ ಬಿಡುಗಡೆ, ಪ್ರಶಸ್ತಿ ಪ್ರದಾನ ಸಮಾರಂಭ



ಮೈಸೂರು,ಜೂ.15(ಪಿಎಂ)– ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಜೂ.18 ರಂದು ವಿಚಾರವಾದಿ, ಪ್ರಗತಿಪರ ಚಿಂತಕ ದಿ.ಪ್ರೊ.ಕೆ.ರಾಮದಾಸ್ ನೆನಪಿನಲ್ಲಿ ಸಂವಾದ, ಪುಸ್ತಕ ಬಿಡುಗಡೆ ಹಾಗೂ ಲೇಖನ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಕೃಷ್ಣ ಜನಮನ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಡು ಕಂಡಂತಹ ಪ್ರಾಮಾಣಿಕ ಚಿಂತಕರಲ್ಲಿ ಪ್ರೊ.ಕೆ.ರಾಮದಾಸ್ ಒಬ್ಬರು. ಅವರು ನಮ್ಮನ್ನಗಲಿ 16 ವರ್ಷಗಳು ಕಳೆದಿರುವ ಈ ಸಂದರ್ಭದಲ್ಲಿ ಅವರ ನೆನಪಿನಲ್ಲಿ ಮೈಸೂರಿನ ರಂಗಾಯಣದ ಶ್ರೀರಂಗ ವೇದಿಕೆಯಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 10.30ಕ್ಕೆ ಹಿರಿಯ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದರು.


ಅಂತರ್ಜಾತಿ, ಅಂತರ್‌ಧರ್ಮ ವಿವಾಹವಾಗಿರುವ 30 ಜೋಡಿಗಳ ಅಭಿಪ್ರಾಯ ಸಂಗ್ರಹ ಹೊಂದಿರುವ 'ಒಲವೇ ನಮ್ಮ ಬದುಕು' ಪುಸ್ತಕವನ್ನು ಹಿರಿಯ ಸಾಹಿತಿ ಡಾ.ಬಂಜಗೆರೆ ಜಯಪ್ರಕಾಶ್ ಬಿಡುಗಡೆ ಮಾಡಲಿದ್ದಾರೆ. ಪುಸ್ತಕ ಕುರಿತು ಲೇಖಕಿ ಡಾ.ಹೆಚ್.ಎಸ್.ಅನುಪಮ ಮಾತನಾಡಲಿದ್ದಾರೆ.

'ಅಂತರಜಾತಿ ವಿವಾಹಗಳು ಸಾಮಾಜಿಕ ಬದಲಾವಣೆಯಲ್ಲಿ ಎಷ್ಟು ಪೂರಕ ಮತ್ತು ಪ್ರೇರಕ' ವಿಷಯ ಕುರಿತು ಲೇಖನಗಳನ್ನು ಆಹ್ವಾನಿಸಲಾಗಿತ್ತು. ರಾಜ್ಯದ ವಿವಿಧ ಭಾಗಗಳಿಂದ 41 ಲೇಖನಗಳು ಬಂದಿದ್ದು, ಈ ಪೈಕಿ ಅತ್ಯುತ್ತಮ ಮೂರು ಲೇಖನಗಳನ್ನು ಆಯ್ಕೆ ಮಾಡಿ ಪ್ರಶಸ್ತಿ ಪ್ರದಾನ ಮಾಡಲಾಗುವುದು (ಪ್ರಥಮ ಬಹುಮಾನ 3 ಸಾವಿರ ರೂ., ದ್ವಿತೀಯ ಬಹುಮಾನ 2 ಸಾವಿರ ರೂ. ಮತ್ತು ತೃತೀಯ ಬಹುಮಾನ ಸಾವಿರ ರೂ.). ಚಿಂತಕ ರುದ್ರಪ್ಪ ಹನಗವಾಡಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದರು.

ಮಧ್ಯಾಹ್ನ 2ಕ್ಕೆ ಸಂವಾದ ನಡೆಯಲಿದೆ. ಸಾಹಿತಿ ಡಾ.ಪುರುಷೋತ್ತಮ್ ಬಿಳಿಮಲೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.

ಟ್ರಸ್ಟ್ ಕಾರ್ಯದರ್ಶಿ ಡಾ.ದಿನಮಣಿ, ಪ್ರಕಾಶಕ ಸಂಸ್ಕೃತಿ ಸುಬ್ರಹ್ಮಣ್ಯ, ಚಿಂತಕ ನಾ.ದಿವಾಕರ್ ಗೋಷ್ಠಿಯಲ್ಲಿದ್ದರು.

ಡೇರ್ ಡೆವಿಲ್ ಮುಸ್ತಫಾ ಚಿತ್ರಕ್ಕೆ ತೆರಿಗೆ ವಿನಾಯಿತಿ



ಬೆಂಗಳೂರು, ಜೂ.15.(ಬಿಎಲ್‌ಯು)– ಖ್ಯಾತ ಸಾಹಿತಿ, ಕಾದಂಬರಿಕಾರ ಪೂರ್ಣಚಂದ್ರ ತೇಜಸ್ವಿ ಅವರ ಕತೆ ಆಧಾರಿತ "ಡೇರ್ ಡೆವಿಲ್ ಮುಸ್ತಫಾ" ಸಿನಿಮಾಗೆ ತೆರಿಗೆ ವಿನಾಯಿತಿ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆದೇಶಿಸಿದ್ದಾರೆ. ತಮ್ಮ ಬರಹದ ಮೂಲಕ ಒಂದಿಡೀ ತಲೆಮಾರಿನ ಜನರನ್ನು ಪ್ರಭಾವಿಸುತ್ತಲೇ ಇರುವ ಪೂರ್ಣಚಂದ್ರ ತೇಜಸ್ವಿ ಅವರ ಕತೆ ಆಧಾರಿತ "ಡೇರ್ ಡೆವಿಲ್ ಮುಸ್ತಫಾ" ಸಿನಿಮಾಗೆ ತೆರಿಗೆ ವಿನಾಯಿತಿ ನೀಡುವಂತೆ ಆದೇಶ ನೀಡಿದ್ದೇನೆ ಎಂದು ಹೇಳಿದ್ದಾರೆ. ಇಂದಿನ ಕಾಲಘಟ್ಟದಲ್ಲಿ ಬೇಕಿರುವುದು ಸೌಹಾರ್ದತೆ, ಪ್ರೀತಿ, ವಿಶ್ವಾಸಗಳ ಬುನಾದಿ ಮೇಲೆ ಸಮಾಜ ಕಟ್ಟುವ ಮನಸುಗಳು. ಇಂತಹ ಕಾರ್ಯಕ್ಕೆ ಕೈ ಹಾಕಿದ ಚಿತ್ರ ತಂಡಕ್ಕೆ ಅಭಿನಂದನೆಗಳು ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ. ದ್ವೇಷ ಅಳಿಸಿ ಪ್ರೀತಿ ಹಂಚುವ ಜನರಿಗೆ ನಮ್ಮ ನಿಮ್ಮ ಬೆಂಬಲ ಇರಲಿ ಎಂದು ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.

ಮಹಾರಾಜ, ಮಹಾರಾಣಿ ಕಾಲೇಜು ಅಭಿವೃದ್ಧಿಗೆ ಆದ್ಯತೆ

ಶಾಸಕ ಕೆ. ಹರೀಶ್‌ಗೌಡರ ಭರವಸೆ



ಮೈಸೂರು, ಜೂ 15(ಜಿಎ)–ಮೈಸೂರಿನ ಮಹಾರಾಜ ಮತ್ತು ಮಹಾರಾಣಿ ಕಾಲೇಜಿಗೆ ವಿಶೇಷವಾದ ಘನತೆ ಇದೆ. ಆದರೆ, ಇವುಗಳ ಶಿಥಿಲ ಕಟ್ಟಡಗಳನ್ನು ನೋಡುತ್ತಿದ್ದರೆ ಬೇಸರವಾಗುತ್ತಿದೆ. ಮುಂದಿನ ದಿನಗಳಲ್ಲಿ ಕಾಲೇಜಿನ ಅಭಿವೃದ್ಧಿಗೆ ಶ್ರಮಿಸುತ್ತೇನೆಂದು ಶಾಸಕ ಕೆ.ಹರೀಶ್ ಗೌಡ ಭರವಸೆ ನೀಡಿದರು.

ನಗರದ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಆವರಣದಲ್ಲಿ ಮೈಸೂರು ನೆಹರು ಯುವ ಕೇಂದ್ರ, ಮಹಾರಾಣಿ ಮಹಿಳಾ ಕಲಾ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ ಘಟಕಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಗುರುವಾರ ಆಯೋಜಿಸಿದ್ದ ಜಿಲ್ಲಾಮಟ್ಟದ ಯುವ ಉತ್ಸವಕ್ಕೆ ಚಾಲನೆ ನೀಡಿ, ಮಾತನಾಡಿದರು.

ಮೈಸೂರಿನ ಪ್ರತಿಷ್ಠಿತ ಕಾಲೇಜಿನಲ್ಲಿ ಒಂದಾದ ಮಹಾರಾಣಿ ಕಾಲೇಜಿನಲ್ಲಿ ಯುವ ಉತ್ಸವ ಆಯೋಜಿಸಿರುವುದು ಸಂತಸದ ವಿಚಾರ. ಕಾಲೇಜಿನ ಬಗ್ಗೆ ನನಗೆ ಹೆಮ್ಮೆ ಇದ್ದು, ಇದರ ಪ್ರತಿಷ್ಠೆ ಇಮ್ಮಡಿಗೊಂಡಿದೆ. ಮಹಾರಾಜ ಕಾಲೇಜಿನಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಸೇರಿದಂತೆ ಬಹಳಷ್ಟು ಸಾಧಕರು ಓದಿದ್ದಾರೆ. ನೀವು ಸಹ ಐದು ವರ್ಷ ಕಾಲ ಯಾವುದೇ ಅನಪೇಕ್ಷಿತ ವಿಚಾರಗಳಿಗೆ ಬಲಿಯಾಗದೆ ಕಷ್ಟ ಪಟ್ಟು ವಿದ್ಯಾಭ್ಯಾಸದ ಕಡೆ ಗಮನಹರಿಸಿ, ಶಿಕ್ಷಣದ ಅವಧಿಯನ್ನು ಪೂರ್ಣಗೊಳಿಸಿ ಎಂದು ಸಲಹೆ ನೀಡಿದರು.

ಸರ್ಕಾರದ ಅಧೀನದಲ್ಲಿರುವ ಈ ಕಾಲೇಜಿನಲ್ಲಿ ಎನ್‌ಎಸ್‌ಎಸ್, ರೆಡ್‌ಕ್ರಾಸ್ ಮತ್ತು ಸ್ಕೌಟ್ಸ್ ಅಂಡ್ ಗೈಡ್ಸ್ ತರಬೇತಿ ಶಿಸ್ತಿನಿಂದ ಕಲಿಸುತ್ತಿದ್ದಾರೆ, ನಾನು ಎಸ್‌ಎಸ್ ಎಲ್‌ಸಿಯಲ್ಲಿ ವ್ಯಾಸಂಗ ಮಾಡುವಾಗ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಭಾಗವಹಿಸಿದ್ದೆ ಎಂದು ಸ್ಮರಿಸಿದರು.

ಕಾಲೇಜಿನಲ್ಲಿ ಬಹಳಷ್ಟು ಕೆಲಸಗಳು ಆಗಬೇಕಿದ್ದು, ಕಾಲೇಜಿಗೆ ಏನು ಬೇಕು ಎಂಬುದರ ಬಗ್ಗೆ ಪ್ರಾಂಶುಪಾಲರ ಜೊತೆ ಚರ್ಚಿಸಿ ಸರ್ಕಾರದ ವತಿಯಿಂದ ಅಗತ್ಯ ಅನುದಾನ ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ಭರವಸೆ ನೀಡಿದರು.


ನೆಹರು ಯುವ ಕೇಂದ್ರದ ದಕ್ಷಿಣ ರಾಜ್ಯಗಳ ಪ್ರಾದೇಶಿಕ ನಿರ್ದೇಶಕ ಎಂ.ಎನ್.ನಟರಾಜ್ ಮಾತನಾಡಿ, ಕಳೆದ ವರ್ಷ ದೇಶವು ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವವನ್ನು ಆಚರಿಸಿದ್ದು, 2047ರ ಶತಮಾನೋತ್ಸವದ ಒಳಗೆ ದೇಶವನ್ನು ಯುವ ಪೀಳಿಗೆಯಿಂದ ಸದೃಢಗೊಳಿಸುವ ದೃಷ್ಟಿಯಿಂದ ಪ್ರಧಾನಮಂತ್ರಿಗಳು ಯುವ ಉತ್ಸವಕ್ಕೆ ಕರೆ ನೀಡಿದ್ದು, ಅದರಂತೆ ಕರ್ನಾಟಕದ 31 ಜಿಲ್ಲೆಗಳು ಸೇರಿದಂತೆ ದೇಶದ 744 ಜಿಲ್ಲೆಗಳಲ್ಲಿಯೂ ನೆಹರು ಯುವ ಕೇಂದ್ರದ ವತಿಯಿಂದ ಉತ್ಸವವನ್ನು ಏರ್ಪಡಿಸಲಾಗಿದೆ ಎಂದರು.

ಯುವ ಉತ್ಸವದಲ್ಲಿ ಪಂಚಪ್ರಾಣ ಇಂಡಿಯಾ ಅಟ್ 2047 ಎಂಬ ವಿಷಯದಡಿ ಚಿತ್ರಕಲೆ, ಕವನ, ಮೊಬೈಲ್ ಫೋಟೋಗ್ರಫಿ ಸ್ಪರ್ಧೆ, ಭಾಷಣ ಮತ್ತು ಜಾನಪದ ನೃತ್ಯ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು ಇದರಲ್ಲಿ ಮೈಸೂರು ಜಿಲ್ಲೆಯ 16 ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ವಿ. ವಸಂತಕುಮಾರ್, ಮೈಸೂರು ವಿವಿ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮ ಸಂಯೋಜನಾಧಿಕಾರಿ, ಮೈಸೂರು ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಅಭಿಷೇಕ್ ಎಸ್.ಚವರೆ, ಕಾಲೇಜಿನ ಸಾಂಸ್ಕೃತಿಕ ಕಾರ್ಯದರ್ಶಿ ಡಾ.ಆರ್.ಜಯರಾಜು, ಕಾರ್ಯಕ್ರಮಾಧಿಕಾರಿ ಪ್ರೊ.ಎಂ.ವಿಶ್ವನಾಥನ್ ಹಾಗೂ ಸವಿತಾ, ಲಿಂಗರಾಜು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

> 1947ರ ಸಮಯದಲ್ಲಿ ಭಾರತದ ಜನಸಂಖ್ಯೆಯೂ 33 ಕೋಟಿ ಇತ್ತು. ಆದರೆ, ಈಗ 130 ಕೋಟಿಗೂ ಹೆಚ್ಚು ತಲುಪಿದೆ. ಮೊದಲು 15 ರಿಂದ 35 ವರ್ಷದೊಳಗಿನವರನ್ನು ಯುವ ಸಮೂಹ ಎನ್ನಲಾಗುತ್ತಿತ್ತು ಆದರೆ, ಈಗ 15 ರಿಂದ 29 ವರ್ಷದೊಳಗಿರುವವರನ್ನು ಯುವ ಸಮೂಹ ಎಂದು ಗುರುತಿಸಲಾಗಿದೆ. ಸರ್ವೇಗಳ ಪ್ರಕಾರ ಭಾರತದಲ್ಲಿ ಪ್ರಸ್ತುತ 45 ಕೋಟಿ ಯುವ ಸಮುದಾಯವಿದೆ. ಇದು ಭಾರತವನ್ನು ಇಡೀ ವಿಶ್ವವೇ ತಿರುಗುವಂತೆ ಮಾಡಿದೆ. ಈ ಯುವ ಶಕ್ತಿಯನ್ನು ಬಳಸಿಕೊಂಡು ದೇಶ ಕಟ್ಟುವ ಕೆಲಸ ಮಾಡುವ ಮೂಲಕ ಬಹುತೇಕ ಸಮಸ್ಯೆಗಳನ್ನು ಬಗೆಹರಿಸಬಹುದು ಎಂದು ಅಭಿಪ್ರಾಯಪಟ್ಟರು.
>
> – ಎಂ.ಎನ್. ನಟರಾಜ್, ನೆಹರು ಯುವ ಕೇಂದ್ರದ ದಕ್ಷಿಣ ರಾಜ್ಯಗಳ ಪ್ರಾದೇಶಿಕ ನಿರ್ದೇಶಕ


ಗರಡಿ ಅಡ್ಡಾದಲ್ಲಿ ನಿಶ್ವಿಕಾ ನಾಯ್ಡು ಡ್ಯಾನ್ಸ್


ನಿರ್ಮಾಪಕ ಬಿ.ಸಿ.ಪಾಟೀಲ್

ನಿರ್ದೇಶಕ ಯೋಗರಾಜ್ ಭಟ್ ಹಾಗೂ ನಿರ್ಮಾಪಕ, ನಟ ಬಿ.ಸಿ.ಪಾಟೀಲ್ ಅವರ ಕಾಂಬಿನೇಶನ್‌ನ, ನಮ್ಮ ನೆಲದ ಸೊಗಡನ್ನು ಒಳಗೊಂಡ ಚಿತ್ರ 'ಗರಡಿ'. ಈ ಚಿತ್ರದ ವಿಶೇಷ ಹಾಡೊಂದರಲ್ಲಿ ನಟಿ ನಿಶ್ವಿಕಾ ನಾಯ್ಡು ಹೆಜ್ಜೆ ಹಾಕಿದ್ದಾರೆ. ಯೋಗರಾಜ್ ಭಟ್ ಸಾಹಿತ್ಯ ಬರೆದಿರೋ ಈ ಹಾಡಿಗೆ ಉತ್ತರ ಕರ್ನಾಟಕದ ಪ್ರತಿಭೆ ಮೇಘನಾ ಹಳ್ಳಿಯಾಳ ದನಿಯಾಗಿದ್ದಾರೆ. ಸಾಂಗ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ನಿಶ್ವಿಕಾ, ನನಗೆ ನೃತ್ಯ ಅಂದರೆ ಇಷ್ಟ, ನನ್ನ ಹಾಡನ್ನು ನೋಡಲು ತುಂಬಾ ದಿನಗಳಿಂದ ಕಾಯ್ತಿದ್ದೆ, ಪ್ರತಿಭೆ ಇದ್ದರೆ ಸಾಲದು, ಅದನ್ನು ಎಕ್ಸ್‌ಪ್ರೆಸ್ ಮಾಡಲು ಸೂಕ್ತ ವೇದಿಕೆ ಸಿಗಬೇಕು. ಈಗ ಯೋಗರಾಜ್ ಭಟ್ಟರ ಗರಡಿಯಲ್ಲಿ ಅಂಥಾ ಅವಕಾಶ ಸಿಕ್ಕಿದೆ. ಅವರು ಕರೆ ಮಾಡಿ ಹೇಳಿದ ತಕ್ಷಣ ಒಪ್ಪಿಕೊಂಡೆ ಎಂದರು.

ಶ್ರೀಮತಿ ವನಜಾ ಪಾಟೀಲ್ ಅವರ ನಿರ್ಮಾಣದ ಈ ಚಿತ್ರಕ್ಕೆ ಸೃಷ್ಟಿ ಪಾಟೀಲ್ ಕಾರ್ಯಕಾರಿ ನಿರ್ಮಾಪಕಿಯಾಗಿದ್ದಾರೆ. ಯಶಸ್ ಸೂರ್ಯ, ಸೋನಲ್ ಮೊಂಥೆರೋ, ಸುಜಯ್, ರವಿಶಂಕರ್ ಸೇರಿದಂತೆ ಹಲವು ಕಲಾವಿದರು ನಟಿಸಿದ್ದಾರೆ. ಬಿ.ಸಿ.ಪಾಟೀಲ್ ಗರಡಿ ಪೈಲ್ವಾನ್ ರಂಗಣ್ಣನಾಗಿ, ಚಾಲೆಂಜಿಂಗ್ ಸ್ಟಾರ್ ದರ್ಶನ್ ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ.

ಈ ಸಂದರ್ಭದಲ್ಲಿ ಬಿ.ಸಿಪಾಟೀಲ್ ಮಾತನಾಡಿ, ಯೋಗರಾಜ್ ಭಟ್, ನಾವು ಅಕ್ಕಪಕ್ಕದ ಊರಿನವರಾಗಿದ್ದರೂ ಎರಡು ಸಲ ಮಾತ್ರ ಭೇಟಿಯಾಗಿದ್ದೇವೆ. ಬೇರೊಂದು ಸಿನಿಮಾ ಮಾಡಲು ಅವರು ನನ್ನ ಬಳಿ ಬಂದಿದ್ರು, ಕೊನೆಗೆ 'ಗರಡಿ' ಫೈನಲ್ ಆಯ್ತು. ಜನ ಈಗ ನನಗೆ ಸಮಯ ನೀಡಿದ್ದಾರೆ. ಹೀಗಾಗಿ ಸಿನಿಮಾ ಕಡೆ ಗಮನ ಹರಿಸುತ್ತೇನೆ. ಸಿನಿಮಾಗಾಗೇ ನಾನು ಪೊಲೀಸ್ ಕೆಲಸ ಬಿಟ್ಟು ಬಂದವನು. ನಮ್ಮ ಸಂಸ್ಥೆಯಲ್ಲಿ ಹೊಸ ಪ್ರತಿಭೆಗಳಿಗೆ ಅವಕಾಶ ನೀಡುತ್ತೇವೆ. ಒಳ್ಳೆಯ ಕಥೆಗಳನ್ನು ಯಾರೇ ತಂದರೂ ನಮ್ಮ ಸಂಸ್ಥೆಯಿಂದ ನಿರ್ಮಾಣ ಮಾಡಲು ಸಿದ್ದರಿದ್ದೇವೆ, ಕತೆ ನಮಗೆ ಇಷ್ಟವಾಗಬೇಕು ಎಂದು ಹೇಳಿದರು. ನಿರ್ಮಾಪಕಿ ಸೃಷ್ಟಿ ಪಾಟೀಲ್ ಮಾತನಾಡಿ, ಇದು ನಮ್ಮ ಸಂಸ್ಥೆಯ 16ನೇ ಚಿತ್ರ. ಮೊದಲ ಬಾರಿಗೆ ಪ್ರೊಡಕ್ಷನ್ ಜವಾಬ್ದಾರಿ ನಿರ್ವಹಿಸಿದ ಅನುಭವ ವಿಶೇಷವಾಗಿತ್ತು. ಎಲ್ಲರ ಸಹಕಾರದಿಂದ ಅದು ಸಾಧ್ಯವಾಯಿತು. ಇದರ ಜೊತೆಗೆ 'ಕೌಸಲ್ಯಾ ಸುಪ್ರಜಾರಾಮಾ' ರೆಡಿಯಾಗುತ್ತಿದೆ. ಅಲ್ಲದೆ ಒಂದು ಮಲಯಾಳಂ ಚಿತ್ರವನ್ನೂ ಮಾಡುತ್ತಿದ್ದೇವೆ. ನಮ್ಮ ಬ್ಯಾನರ್‌ನಿಂದ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಸಿನಿಮಾ ಮಾಡುವ ಆಲೋಚನೆಯೂ ಇದೆ ಎಂದರು. ನಿರ್ದೇಶಕ ಯೋಗರಾಜ್ ಭಟ್ ಮಾತನಾಡಿ 'ಗರಡಿ' ಪದವನ್ನು ನಾವು ಅನೇಕ ಸಂದರ್ಭಗಳಲ್ಲಿ ಬಳಸುತ್ತೇವೆ. ಅದರ ನಿಜವಾದ ಅರ್ಥ ವ್ಯಾಯಾಮಶಾಲೆ. ಗರಡಿ ಪೈಲ್ವಾನ್ ರಂಗಪ್ಪನ ಪಾತ್ರವನ್ನು ಪಾಟೀಲರು ಮಾಡಿದ್ದಾರೆ ಎಂದರು. ನಾಯಕ ಯಶಸ್ ಸೂರ್ಯ ಮಾತನಾಡಿ, ಗರಡಿ ನಮ್ಮ ನಾಡಿನ ಸೊಗಡನ್ನು ಬಿಂಬಿಸುತ್ತದೆ. ಕುಸ್ತಿ ಕ್ರೀಡೆ ಸಂಸ್ಕೃತಿಯ ಪ್ರತೀಕ. ಈ ಹಿಂದೆ ಪೈಲ್ವಾನರು ಊರನ್ನು ಕಾಯುತ್ತಿದ್ದರು, ಪೈಲ್ವಾನರ ಕುಸ್ತಿಯ ವೈಭವವನ್ನು ಈ ಚಿತ್ರದ ಮೂಲಕ ತೆರೆಯಮೇಲೆ ನೋಡಬಹುದು ಎಂದರು. ನಾಯಕಿ ಸೋನಾಲ್, ಖಳನಾಯಕ ರಾಘವೇಂದ್ರ, ನಿರ್ದೇಶಕ ಶಶಾಂಕ್ ಇನ್ನು ಅನೇಕರು ವೇದಿಕೆಯಲ್ಲಿದ್ದರು.


ನಿರ್ದೇಶಕ ಯೋಗರಾಜ ಭಟ್



'ಕಪ್ಪು ಹಂಸ' ವೀಡಿಯೋ ಹಾಡು ಬಿಡುಗಡೆ


ಸ್ಟುಡಿಯೋ ಸ್ವರಮಧುರ ಅರ್ಪಿಸುವ ಕನ್ನಡ ಕಿರುಚಿತ್ರ "ಕಪ್ಪು ಹಂಸ" ದ ವಿಡಿಯೋ ಹಾಡು ಹಾಗೂ ಪೋಸ್ಟರ್‌ಅನ್ನು ಖ್ಯಾತ ರಂಗಭೂಮಿ ಹಾಗೂ ಚಲನಚಿತ್ರ ನಟ ಮಂಡ್ಯ ರಮೇಶ್ ಬಿಡುಗಡೆ ಮಾಡಿದರು. ನಿರ್ಮಾಪಕಿ ಅಶ್ವಿನಿ ಮುರಳಿ, ನಿರ್ದೇಶಕ ರಜತ್ ರಂಗನಾಥ, ಸಂಗೀತ ನಿರ್ದೇಶಕ ರಾಕೇಶ್ ಸುಧೀರ್ ಮತ್ತು ರಂಗಭೂಮಿ ಕಲಾವಿದೆ ಇಂದಿರಾ ನಾಯರ್, ಕಿರುಚಿತ್ರ ತಂಡದ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು. ಈ ವೀಡಿಯೊ ಹಾಡನ್ನು ಯೂಟ್ಯೂಬ್ ಚಾನೆಲ್‌ನಲ್ಲಿ ಈಗಾಗಲೇ ಜೂನ್ 14 ರಂದು ಸಂಜೆ 6 ಗಂಟೆಗೆ ಬಿಡುಗಡೆ ಮಾಡಲಾಗಿದೆ.

'ಲವ್‌ಲೀ' ಹಾಡಿಗೆ ತಾರಾಮೇಳ

ಇತ್ತೀಚೆಗೆ ನಡೆದ ವಸಿಷ್ಠಸಿಂಹ, ಸ್ಟೆಫಿ ಪಟೇಲ್ ಅಭಿನಯದ 'ಲವ್‌ಲೀ' ಚಿತ್ರದ ಟೈಟಲ್‌ಸಾಂಗ್ ಬಿಡುಗಡೆ ಕಾರ್ಯಕ್ರಮದಲ್ಲಿ ಕ್ರೇಜಿಸ್ಟಾರ್ ರವಿಚಂದ್ರನ್, ಉಪೇಂದ್ರ, ಪ್ರಿಯಾಂಕ ಉಪೇಂದ್ರ, ನೆನಪಿರಲಿ ಪ್ರೇಮ್ ಹಾಜರಿದ್ದರು. ನೈಜ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಚೇತನ್ ಕೇಶವ್ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಎಂ.ಆರ್. ರವೀಂದ್ರಕುಮಾರ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಈ ಸಂದರ್ಭದಲ್ಲಿ ಚಿತ್ರದ ಟೈಟಲ್‌ಸಾಂಗ್ ಅನ್ನು ಪ್ರಿಯಂಕಾ ಉಪೇಂದ್ರ ಬಿಡುಗಡೆ ಮಾಡಿದರು ನಾಯಕ ವಸಿಷ್ಠಸಿಂಹ ಮಾತನಾಡಿ, ನನಗೆ ತುಂಬಾ ಕಾಡಿದಂತಹ ಸಿನಿಮಾ ಇದು. ಈ ಹಾಡಿನಿಂದಲೇ ಚಿತ್ರದ ಪ್ರಮೋಷನ್ ಶುರು ಮಾಡಿದ್ದು, ಆಗಸ್ಟ್‌ನಲ್ಲಿ ರಿಲೀಸ್ ಮಾಡುವ ಪ್ಲ್ಯಾನಿದೆ. ಸುಂದರವಾದ ಲವ್‌ಸ್ಟೋರಿ ಇರುವ ಚಿತ್ರ ಎಂದು ಹೇಳಿದರು.

ನಾಯಕಿ ಸ್ಟೆಫಿ ಪಟೇಲ್ ಮಾತನಾಡಿ, ಈಗಾಗಲೇ ನಾನು ತಮಿಳು, ತೆಲುಗು ಸಿನಿಮಾಗಳಲ್ಲಿ ನಟಿಸಿದ್ದು, ಕನ್ನಡದಲ್ಲಿ ಇದು ಮೊದಲ ಸಿನಿಮಾ. ಬೆಂಗಳೂರು ನನಗೆ ಹೋಮ್ ಟೌನ್ ಥರ. ಒಳ್ಳೆಯ ತಂಡದ ಜೊತೆ ಕೆಲಸ ಮಾಡಿದ್ದು ಖುಷಿಯಾಗುತ್ತಿದೆ. ಈ ಚಿತ್ರದಲ್ಲಿ ನಾನು ಜನನಿ ಎಂಬ ಪಾತ್ರ ಮಾಡಿದ್ದೇನೆ ಎಂದು ಕನ್ನಡದಲ್ಲೇ ಮಾತಾಡಿದರು. ನಿರ್ದೇಶಕ ಚೇತನ್ ಕೇಶವ ಮಾತನಾಡಿ, ಹಾಡಿನಂತೆ ಸಿನಿಮಾ ಕೂಡ ಕಲರ್‌ಫುಲ್ ಆಗಿ ಮೂಡಿಬಂದಿದೆ. ಚಿತ್ರದಲ್ಲಿ ಒಂದು ಸೋಶಿಯಲ್ ಮೆಸೇಜ್ ಹೇಳಿದ್ದೇವೆ. ಮಂಗಳೂರು, ಬೆಂಗಳೂರು, ಉಡುಪಿಯ ಸುತ್ತಮುತ್ತ ಚಿತ್ರೀಕರಣ ಮಾಡಿದ್ದೇವೆ. ಶಾಲಾ ದಿನಗಳಿಂದ ಸಿನಿಮಾ ಮಾಡುವ ಆಸೆಯಿತ್ತು.



'ಘೋಸ್ಟ್' ಸೆಟ್‌ನಲ್ಲಿ ಸಚಿವ ಮಧು ಬಂಗಾರಪ್ಪ ಹವಾ

ಸಂದೇಶ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ, ರಾಷ್ಟ್ರಪ್ರಶಸ್ತಿ ವಿಜೇತ ಸಂದೇಶ್ ನಾಗರಾಜ್ ಅರ್ಪಿಸುವ, ಸಂದೇಶ್ ಎನ್ ನಿರ್ಮಿಸುತ್ತಿರುವ ಹಾಗೂ ಶ್ರೀನಿ ನಿರ್ದೇಶನದಲ್ಲಿ ಕರುನಾಡ ಚಕ್ರವರ್ತಿ ಶಿವರಾಜಕುಮಾರ್ ನಾಯಕರಾಗಿ ಅಭಿನಯಿಸುತ್ತಿರುವ "ಘೋಸ್ಟ್" ಚಿತ್ರದ ಚಿತ್ರೀಕರಣ ಚಾಮರಾಜಪೇಟೆ ಪೊಲೀಸ್ ಮೈದಾನದಲ್ಲಿ ನಿರ್ಮಿಸಲಾಗಿರುವ ಅದ್ದೂರಿ ಸೆಟ್‌ನಲ್ಲಿ ನಡೆಯುತ್ತಿದೆ.

ಚಿತ್ರೀಕರಣ ನಡೆಯುತ್ತಿರುವ ಸ್ಥಳಕ್ಕೆ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಾದ ಮಧು ಬಂಗಾರಪ್ಪ ಭೇಟಿ ನೀಡಿದ್ದರು. ಚಿತ್ರ ತಂಡದವರ ಜೊತೆ ಸ್ವಲ್ಪ ಸಮಯ ಕಳೆದು, ಎಲ್ಲರೊಂದಿಗೆ ಮಾತನಾಡಿ, ಕೊನೆಗೆ ಚಿತ್ರ ಯಶಸ್ವಿಯಾಗಲಿ ಎಂದು ಹಾರೈಸಿದ್ದಾರೆ.

ಮಾಲಾಶ್ರೀ ಕೈಯಲ್ಲೀಗ 'ಮಾರಕಾಸ್ತ್ರ'




ಕಿರಣ್‌ಬೇಡಿ, ಲೇಡಿ ಕಮೀಷನರ್, ದುರ್ಗಿ ಹೀಗೆ ಹಲವಾರು ಚಿತ್ರಗಳಲ್ಲಿ ಲೇಡಿ ಪೊಲೀಸ್, ಆಕ್ಷನ್ ಹೀರೋಯಿನ್ ಆಗಿ ಕಾಣಿಸಿಕೊಂಡಿದ್ದ ನಟಿ ಮಾಲಾಶ್ರೀ ಬಹಳ ದಿನಗಳ ನಂತರ ಮತ್ತೆ ಪೊಲೀಸ್ ಖದ್ದರ್‌ನಲ್ಲಿ ಅಬ್ಬರಿಸಿದ್ದಾರೆ. ಆ ಚಿತ್ರದ ಹೆಸರು 'ಮಾರಕಾಸ್ತ್ರ'. ಪತ್ರಕರ್ತನ ಲೇಖನಿ ಕತ್ತಿಗಿಂತಲೂ ಹರಿತವಾದದ್ದು. ದೇಶದ ರಾಜಕೀಯ ವ್ಯವಸ್ಥೆಯನ್ನೇ ಬುಡ ಮೇಲು ಮಾಡುವ ಶಕ್ತಿಯೂ ಇದಕ್ಕಿದೆ. ಸಮಾಜದ ವ್ಯವಸ್ಥೆಗೆ ಮಾರಕವಾದ ದುಷ್ಟಶಕ್ತಿಗಳನ್ನು ನಿಗ್ರಸುವ ಶಕ್ತಿಯೂ ಪತ್ರಕರ್ತರ ಲೇಖನಿಗಿದೆ ಎಂದು ಹೇಳುವ 'ಮಾರಕಾಸ್ತ್ರ' ಚಿತ್ರದ ಟೀಸರ್ ಅನ್ನು ಇತ್ತೀಚೆಗೆ ನಾಯಕಿ ಮಾಲಾಶ್ರೀ ಅವರೇ ರಿಲೀಸ್ ಮಾಡಿದರು. ನಂತರ ಮಾತನಾಡುತ್ತಾ, ನಾನು ಈ ಸಿನಿಮಾ ಮಾಡಲು ನಿರ್ದೇಶಕ ಗುರುಮೂರ್ತಿ ಅವರೇ ಕಾರಣ. ಅವರು ಮನೆಗೆ ಬಂದು ಹೇಳಿದ ಕಥೆ ನನಗೆ ತುಂಬಾ ಇಷ್ಟವಾಯ್ತು. ಅಂಗವಿಕಲರಾಗಿ, ನಡೆಯಲಿಕ್ಕೆ ಆಗದಿದ್ದರೂ ಅಂಥದ್ದೊಂದು ಸಾಹಸಕ್ಕೆ ಕೈಹಾಕಿರುವುದಕ್ಕಾಗಿಯೇ ನಾನೀ ಚಿತ್ರದಲ್ಲಿ ಅಭಿನಯಿಸಿದ್ದೇನೆ. ತುಂಬಾ ಸಿನಿಮಾಗಳಲ್ಲಿ ಪೊಲೀಸ್ ಪಾತ್ರ ಮಾಡಿದ್ದರೂ, ಈ ಪಾತ್ರ ವಿಭಿನ್ನವಾಗಿದೆ. ಚಿತ್ರದಲ್ಲಿ ಸಾಕಷ್ಟು ಟ್ವಿಸ್ಟ್‌ಗಳ ಜೊತೆ ಮಾಟ-ಮಂತ್ರದ ಕಥೆಯಿದೆ. ಹೊಸ ನಿರ್ಮಾಪಕರು ತುಂಬಾ ಕನಸಿಟ್ಟುಕೊಂಡು ಇಂಡಸ್ಟ್ರಿಗೆ ಬಂದಿದ್ದಾರೆ. ಒಂದು ಹಾಡನ್ನು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, 32 ದಿನಗಳ ಕಾಲ ಶೂಟ್ ಮಾಡಿದ್ದಾರೆ ಎಂದರು.

ಹಲವಾರು ಕಿರುಚಿತ್ರಗಳನ್ನು ನಿರ್ದೇಶಿಸಿರುವ ಗುರುಮೂರ್ತಿ ಸುನಾಮಿ ಅವರ ಪ್ರಥಮ ನಿರ್ದೇಶನದ ಈ ಚಿತ್ರವನ್ನು ಕೋಮಲ ನಟರಾಜ್ ನಿರ್ಮಿಸುತ್ತಿದ್ದಾರೆ. 'ಮಾರಕಾಸ್ತ್ರ' ಚಿತ್ರದಲ್ಲಿ ನಾಯಕನಾಗಿ ಆನಂದ್ ಆರ್ಯ ನಟಿಸಿದ್ದಾರೆ. ನೋಡಲು ಪುನೀತ್ ರಾಜ್‌ಕುಮಾರ್ ಅವರಂತೆಯೇ ಕಾಣುವ ಆನಂದ್ ಆರ್ಯ ಮಾತನಾಡಿ, ನಾನು ಅಪ್ಪು ಅವರನ್ನು ಸದಾ ನೆನಪಿಸಿಕೊಳ್ಳುತ್ತೇನೆ, ಚಿತ್ರ ತುಂಬಾ ಚೆನ್ನಾಗಿ ಬಂದಿದೆ ಎಂದರು. ನಾಯಕಿ ಹರ್ಷಿಕಾ ಪೂಣಚ್ಚ ಮಾತನಾಡಿ, ನಾನು ಎಷ್ಟೇ ಸಿನಿಮಾ ಮಾಡಿದ್ರೂ, ಈ ಸಿನಿಮಾದಲ್ಲಿ ಮಾಲಾಶ್ರೀ ಅವರ ಜೊತೆ ತೆರೆ ಹಂಚಿಕೊಂಡಿದ್ದೇನೆ ಎಂದು ಹೇಳಿಕೊಳ್ಳುವುದೇ ಹೆಮ್ಮೆ. ಇದರಲ್ಲಿ ನನ್ನದು ಕ್ರೈಮ್ ರಿಪೋರ್ಟರ್ ಪಾತ್ರ ಎಂದು ಹೇಳಿದರು. ನಿರ್ದೇಶಕ ಗುರುಮೂರ್ತಿ ಸುನಾಮಿ ಮಾತನಾಡಿ ನಾನು ಮಾಲಾಶ್ರೀ ಅವರ ಜೊತೆ ಕೆಲಸ ಮಾಡುತ್ತೇನೆ ಅಂದುಕೊಂಡಿರಲಿಲ್ಲ. ಚಿತ್ರದಲ್ಲಿ ಫ್ಯಾಮಿಲಿ ಕಂಟೆಂಟ್ ಜೊತೆ ಹಾರರ್, ಥ್ರಿಲ್ಲರ್ ಹೀಗೆ ಎಲ್ಲ ರೀತಿಯ ಕಮರ್ಷಿಯಲ್ ಎಲಿಮೆಂಟ್ಸ್ ಇದೆ ಎಂದರು. ಚಿತ್ರದ ನಿರ್ಮಾಪಕ ನಟರಾಜ್ ಮಾತನಾಡುತ್ತಾ, ಗುರುಮೂರ್ತಿ ಅವರು ಆಗಲೇ ಸಿನಿಮಾ ಪ್ರಾರಂಭಿಸಿದ್ದರು. ಆಕ್ಟ್ ಮಾಡಲು ಬಂದ ನಾನು ನಿರ್ಮಾಪಕನಾದೆ. ಈ ಕಥೆಯಲ್ಲಿ ನಮ್ಮ ದೇಶ ರಕ್ಷಣೆಯ ಬಗ್ಗೆ ಹಾಗೂ ದೇಶಭಕ್ತಿ ಮೂಡಿಸುವಂಥ ಹಲವಾರು ಅಂಶಗಳನ್ನು ನಿರ್ದೇಶಕರು ತೆಗೆದುಕೊಂಡಿದ್ದಾರೆ. ಹಾಗಾಗಿಯೇ ಈ ಚಿತ್ರದ ಜವಾಬ್ದಾರಿ ವಹಿಸಿಕೊಂಡೆ, ಮಾಲಾಶ್ರೀ ಅವರ ರೀಎಂಟ್ರಿ ಅದ್ಭುತವಾಗಿದೆ. ನಾನೊಬ್ಬ ಪ್ರೊಫೆಸರ್ ಆಗಿ ನಟಿಸಿದ್ದೇನೆ ಎಂದರು.

ಸಿನಿಪದಬಂಧ-478

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
ದೂರವಾಣಿ ಸಂಖ್ಯೆ ______

ವಿಜೇತರು: ಶಮಂತ್ ಸಿ. ಕಶ್ಯಪ್, ನಂ. 40, ಎರಡನೇ ಮೇನ್, 1ನೇ ಕ್ರಾಸ್, ರೈಲ್ವೇ ಲೇಔಟ್, ಬೋಗಾದಿ, ಮೈಸೂರು-26

ಸಿನಿ ಪದಬಂಧ 477ರ ಸರಿ ಉತ್ತರ

ಅ	ದ್ವೈ	ತ	■	ಕ	ಲ್ಲ	ರ	ಳಿ	ಹೂ	ವಾ	ಗಿ
ಭಿ	■	■	■	ಲ್ಯಾ	■	■	■	ವಿ	■	■
ಸಾ	ಕಿ	ದ	ಗಿ	ಣಿ	■	ಸೂ	■	ನ	■	ರಂ
ರಿ	■	ಲ್ಲಾ	■	■	ಸ	ರಿ	ಗ	ಮ	ವಿ	ಜಿ
ಕೆ	ರ	ಳಿ	ದ	ಸ	ರ್ಪ	■	■	ಳೆ	■	ತಾ
■	■	■	ತ್ತ	■	ಕಾ	■	ಅಂ	■	■	■
ಅ	■	ಎ	■	■	ವ	ಸಂ	ತ	ಪೂ	ರ್ಣೆ	ಮ
ಮ	ರ್ಯಾ	ದೆ	ಮ	ಹ	ಲು	■	■	ಜಾ	■	ಧು
ಲಾ	■	ಗಾ	■	ಲಂ	■	ಕಾ	ವೇ	ರಿ	ತೀ	ರ
■	■	ರಿ	■	■	■	ಡಿ	■	■	■	ಮೈ
ಹೀ	ಗೇ	ಕೆ	ವಿ	ಷ	ವಾ	ದೆ	■	ಸಾ	ವಿ	ತ್ರಿ

ಎಡದಿಂದ ಬಲಕ್ಕೆ

1. ಹಿರಿದು ಮತ್ತು ತೋರು ಎರಡನ್ನು ರೌಂಡ್ ಮಾಡಿ ಇನ್ನುಳಿದವನ್ನು ಮೇಲೆತ್ತಿ ಚೆನ್ನಾಗಿದೆ ಅಲ್ಲವೇ! 3
2. "ಅಲ್ಲೊಂದು ಲೋಕ ಉಂಟು ಇಲ್ಲೊಂದು ದಾರಿ ಉಂಟು.....", ಗೀತೆಯ ಚಿತ್ರ 7
4. ಈತ ಎನ್‌ಕೌಂಟರ್ ಸ್ಪೆಷಲಿಸ್ಟ್ 5
8. ಹೊಸ ಡಬ್ಬಿಂಗ್ ಚಿತ್ರ "ಖುಷಿ"ಯ ಹಾಡಿನ ಸಾಲಿದು 6
9. ಕಾಲ್ಬೆರಳಿಗೆ ಧರಿಸಿದ ಆಭರಣ ಶ್ರೀಮತಿಗೆ ಸುಂದರ! 6
14. ಇಲ್ಲೇ ಮೇಲಿನಿಂದ ಕೆಳಕ್ಕೆ 13 ರಲ್ಲಿರುವ ನಾಯಕಿಯ ಜೊತೆ ಶಿವಣ್ಣ ಅಭಿನಯವಿದೆ 6
17. ವಾಸು – ದುರ್ಗಾಶೆಟ್ಟಿಯ ಸ್ವಪ್ನ ಜಗತ್ತು 6
19. ಈತ ಸಂತನಲ್ಲ ಒಬ್ಬ ಛಾಯಾಗ್ರಾಹಕ 5
20. ಚಿ. ಗುರುದತ್ ದಿಗ್ದರ್ಶನದಲ್ಲಿ ದೊಡ್ಡಣ್ಣ, ಸುದೀಪ್, ರಾಕ್ ಲೈನ್ ಇದ್ದಾರೆ 7
21. ಮಾಜಿ ಮುಖ್ಯಮಂತ್ರಿಯೊಬ್ಬರ ಪುತ್ರ "ಸಾರಥಿ" 3

ಮೇಲಿನಿಂದ ಕೆಳಕ್ಕೆ

1. ನೂಲನಿಡಿದು ಶ್ರೀನಾಥ್ ಆಡಿಸಿದ ಚಮತ್ಕಾರಯುತ ಆಕರ್ಷಕ ಕಲೆ 5
2. "ನಮ್ಮ ಸಂತೋಷಕ್ಕಿಂತ ಇತರರ ಸಂತೋಷ ಮುಖ್ಯ" ಶಾಸ್ತ್ರಿ ಶ್ರೀವಾತ್ಸವ್ ಮಾತು ನೆನೆದ "ಸ್ಟಾರ್" ದರ್ಶನ್ 3
3. ಬಂಗಾರದ ಮನುಷ್ಯನ ಸೆರೆ ಹಿಡಿದ ಛಾಯಾಗ್ರಾಹಕ 5
5. ವಿನೋದ್ ರಾಜ್ "ಲೀಡರ್" 3
6. ರವಿಚಂದ್ರನ್ – ಯಮುನಾ ಅಭಿನಯದ ಚಿತ್ರ 2
7. _ _ _ ಮಾಡ್ಲಿಲ್ಲ 3
8. ಕಾಡುಗಳ್ಳ, ದಂತಚೋರ ವೀರಪ್ಪನ್ ಮನುಷ್ಯನನ್ನು ಬಿಡಲಿಲ್ಲ! 5
10. ಪ್ರಣವ್ ಹೆಗ್ಡೆ – ಅಹಲ್ಯ ಸುರೇಶ್ ರೋಮ್ಯಾಂಟಿಕ್ ಲವ್ ಸ್ಟೋರಿ "ಧೋತರ" 2
11. ಡಾ. ರಾಜಕುಮಾರ್ ಬೀರಿದ ನೇರ ದೃಷ್ಟಿ 2
12. ಮಾನವಚಾಲಿತ ದ್ವಿಚಕ್ರ ವಾಹನ ತೆರೆಯ ಮೇಲೂ ಓಡಾಡಿದೆ 3
13. ಇಲ್ಲೇ ಎಡದಿಂದ ಬಲಕ್ಕೆ 14 ರಲ್ಲಿರುವ ಚಿತ್ರದ ನಾಯಕಿ 5
15. ಈತ ಒಬ್ಬ ಕಲಾ ನಿರ್ದೇಶಕ 3
16. ವಾಸ್ತವಕ್ಕೆ ಹತ್ತಿರವಿರುವ ನಟ ನಮ್ಮ ಉಪ್ಪಿ ! 5
18. ಪ್ರೇಮ, ಸ್ನೇಹದ " ಪ್ರಪಂಚ" 2
19. ತಾಯಿಯ "ಅಂತಃಕರಣ" 3

ರೈತ ಸಭೆಯಲ್ಲಿ ರೈತ ಗೀತೆ ಹಾಡದ ಹಿನ್ನೆಲೆ

ಸಭೆ ಬಹಿಷ್ಕರಿಸಿ ಹೊರ ನಡೆದ ಕಬ್ಬು ಬೆಳೆಗಾರರು

ಅಧಿಕಾರಿಗಳ ಗೈರಿಗೂ ಆಕ್ರೋಶ, ಉಳಿದ ರೈತರ ಸಭೆ ನಡೆಸಿದ ಕೃಷಿ ಅಧಿಕಾರಿ

ತಿ.ನರಸೀಪುರ, ಜೂ.15– ರೈತರ ಸಭೆಯಲ್ಲಿ ರೈತ ಗೀತೆ ಹಾಡದೆ ಸಭೆ ಆರಂಭ ಮಾಡಿದ್ದಲ್ಲದೆ, ತಹಶೀಲ್ದಾರ್ ಮತ್ತು ತಾಪಂ ಕಾರ್ಯ ನಿರ್ವಾಹಣಾಧಿಕಾರಿಗಳು ಗೈರು ಹಾಜರಾಗಿದ್ದರಿಂದ ಅಸಮಾಧಾನಗೊಂಡ ಬೆಳೆಗಾರರು ಸಭೆಯಿಂದ ಹೊರ ನಡೆದ ಘಟನೆ ಸಂಭವಿಸಿದೆ.



ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ತಾಲೂಕು ಆಡಳಿತ ಮತ್ತು ಕೃಷಿ ಇಲಾಖೆ ವತಿಯಿಂದ ಗುರುವಾರ ಮುಂಗಾರು ಹಂಗಾಮು ಹಿನ್ನೆಲೆಯಲ್ಲಿ ರೈತರ ವಿವಿಧ ಬೇಡಿಕೆಗಳ ಕುರಿತು ಚರ್ಚಿಸಲು ರೈತರ ಸಭೆಯನ್ನು ಕರೆಯಲಾಗಿತ್ತು. ಸಭೆಯನ್ನು ರೈತ ಗೀತೆ ಹಾಡದೆ ಆರಂಭಿಸಲಾಯಿತು. ಜೊತೆಗೆ ಸಭೆಯ ಅಧ್ಯಕ್ಷತೆ ವಹಿಸಬೇಕಿದ್ದ ತಹಸೀಲ್ದಾರ್ ಕೂಡ ಸಭೆಗೆ ಗೈರಾಗಿದ್ದರು.

ಇದರಿಂದ ಆಕ್ರೋಶಗೊಂಡ ಕಬ್ಬು ಬೆಳೆಗಾರರು ಇದು ರೈತರನ್ನ ಅವಮಾನಿಸುವ ಘಟನೆ. ಅತ್ತ ಕೆಆರ್‌ಎಸ್‌ನಲ್ಲಿ ನೀರು ಬರಿದಾಗುತ್ತಿದೆ. ರೈತರು ಬೆಳೆದ ಬೆಳೆಗಳಿಗೆ ನೀರು ಪೂರೈಸಲು ಸಾಧ್ಯವಾಗ್ತಿಲ್ಲ. ಸರ್ಕಾರ ಉಚಿತ ವಿದ್ಯುತ್ ಘೋಷಣೆ ಮಾಡಿದೆ. ವಿದ್ಯುತ್ ಪೂರೈಕೆ ಮಾಡುವಲ್ಲಿಯೂ ಚೆಸ್ಕಾಂ ವಿಫಲವಾಗಿದೆ. ಕಾಟಾಚಾರಕ್ಕೆ ನಡೆಸುವ ಸಭೆ ನಮಗೆ ಬೇಕಾಗಿಲ್ಲ ಎಂದು ಸಭೆಯಿಂದ ಹೊರ ನಡೆದರು.

ನಂತರ ಕೃಷಿ ಸಹಾಯಕ ನಿರ್ದೇಶಕಿ ಸುಹಾಸಿನಿ, ರೈತ ಗೀತೆ ಹಾಡದಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರಲ್ಲದೆ, ಕಬ್ಬು ಬೆಳೆಗಾರರ ಹೊರತುಪಡಿಸಿ ಇನ್ನುಳಿದ ರೈತ ಮುಖಂಡರುಗಳ ಸಭೆ ನಡೆಸಿದರು. ನಂತರ ರೈತ ಗೀತೆಯನ್ನು ಹಾಡಿಸಿ ಸಭೆ ನಡೆಸಲಾಯಿತು.

ಮಳೆ ಇಲ್ಲದೆ ಅಣೆಕಟ್ಟುಗಳಲ್ಲಿ ನೀರಿಲ್ಲ. ಇಂಥ ಸಂದರ್ಭದಲ್ಲಿ ರಸಗೊಬ್ಬರ ಅಂಗಡಿಗಳಲ್ಲಿ ಲಭ್ಯ ಇರುತ್ತದೆ. ನಂತರ ಮಳೆ ಶುರುವಾಗಿ ರೈತರು ಬೇಸಾಯ ಶುರು ಮಾಡಿದಾಗ ರಸಗೊಬ್ಬರದ ಅಂಗಡಿಗಳಲ್ಲಿ ಸಮರ್ಪಕವಾಗಿ ನ್ಯಾಯಯುತ ಬೆಲೆಗಳಲ್ಲಿ ರಸಗೊಬ್ಬರಗಳು ದೊರೆಯುವುದಿಲ್ಲ. ನಂತರ ಅದೇ ಗೊಬ್ಬರಕ್ಕೆ ಒಂದಕ್ಕೆ ಎರಡರಷ್ಟು ಹಣ ನೀಡಿ ರೈತರು ರಸಗೊಬ್ಬರವನ್ನು ಖರೀದಿಸಬೇಕಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಅಂಗಡಿ ಮಾಲೀಕರಿಗೆ ದಾಸ್ತಾನಿರುವ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳನ್ನು ಅಂಗಡಿಯ ಮುಂಗಟ್ಟುಗಳಲ್ಲಿ ನಾಮಫಲಕಗಳನ್ನು ಹಾಕಬೇಕು. ನಿಗದಿತ ದರವನ್ನು ಪ್ರದರ್ಶಿಸಬೇಕು ಎಂದು ರೈತರು ಆಗ್ರಹಿಸಿದರು.

ಬಳಿಕ ಮಾತನಾಡಿದ ಸುಹಾಸಿನಿ ರೈತರ ಬೇಡಿಕೆಗಳಂತೆ ಕೃಷಿ ಪರಿಕರ ಮಾರಾಟಗಾರರು ರಸಗೊಬ್ಬರ ಹಾಗೂ ಇನ್ನಿತರ ವಸ್ತುಗಳ ದಾಸ್ತಾನು ಹಾಗೂ ದರ ಪಟ್ಟಿ ಪ್ರದರ್ಶಿಸಬೇಕು. ರಸಗೊಬ್ಬರ ಖರೀದಿಸುವಾಗ ಬೇರೆ ಪದಾರ್ಥಗಳನ್ನು ಖರೀದಿಸುವಂತೆ ಒತ್ತಡ ಹೇರದಂತೆ ಮಾರಾಟಗಾರರಿಗೆ ಸೂಚಿಸಿದರು. ರೈತ ಮುಖಂಡರಾದ ಕೆ.ಜಿ. ಶಿವ ಪ್ರಸಾದ್, ಕರೋಹಟ್ಟಿ ಕುಮಾರಸ್ವಾಮಿ, ನಾರಾಯಣ್, ಶಿವಕುಮಾರ್, ಕಳ್ಳಿಪುರ ಮಹದೇವಸ್ವಾಮಿ, ದಿನೇಶ್ ಮತ್ತಿತರಿದ್ದರು.

ಬಣ್ಣಾರಿ ಬಳಿ ಮರಕ್ಕೆ ಕಾರು ಡಿಕ್ಕಿ; ಹುಣಸೂರಿನ ಶುಂಠಿ ವ್ಯಾಪಾರಿ ಸಾವು

ಮತ್ತಿಬ್ಬರಿಗೆ ತೀವ್ರ ಗಾಯ, ಆಸ್ಪತ್ರೆಗೆ ದಾಖಲು

ಹುಣಸೂರು, ಜೂ.15 – ಕಾರೊಂದು ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಶುಂಠಿ ವ್ಯಾಪಾರಿ ಸಾವನ್ನಪ್ಪಿ, ಮತ್ತಿಬ್ಬರು ತೀವ್ರವಾಗಿ ಗಾಯಗೊಂಡಿರುವ ಘಟನೆ ತಮಿಳುನಾಡಿನ ಬಣ್ಣಾರಿ ಬಳಿ ಗುರುವಾರ ಬೆಳಗ್ಗೆ ಸಂಭವಿಸಿದೆ.



ತಾಲೂಕಿನ ರತ್ನಪುರಿ ಗ್ರಾಮದ ದರ್ಗಾ ನಿವಾಸಿ ನಾಸಿರ್ ಪಾಷಾ ಸಾವನ್ನಪ್ಪಿದವರು. ತೀವ್ರವಾಗಿ ಗಾಯಗೊಂಡಿರುವ ಮುಜಾಮಿಲ್ ಮತ್ತು ಸಿಕಂದರ್ ಪಾಷಾ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ತಾಲೂಕಿನ ರತ್ನಪುರಿ ಗ್ರಾಮದ ದರ್ಗಾ ನಿವಾಸಿಗಳಾದ ಈ ಮೂವರು ಬೆಳಗಿನ ಜಾವ ಶುಂಠಿ ವ್ಯಾಪಾರಕ್ಕೆಂದು ತಮ್ಮ ಸ್ವಿಫ್ಟ್ ಕಾರಿನಲ್ಲಿ ತಮಿಳುನಾಡಿಗೆ ತೆರಳುತ್ತಿದ್ದಾಗ, ನಿಯಂತ್ರಣ ತಪ್ಪಿ ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದುದರಿಂದ ಈ ದುರಂತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳೀಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದು, ಹೆಚ್ಚಿನ ಮಾಹಿತಿಯನ್ನು ನಿರೀಕ್ಷಿಸಲಾಗುತ್ತಿದೆ.

ಜೂ.19, ಉಚಿತ ಕಣ್ಣಿನ ತಪಾಸಣಾ ಶಿಬಿರ

ಬೆಟ್ಟದಪುರ, ಜೂ.15– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿ ಬೆಟ್ಟದ ತುಂಗ ಗ್ರಾಮದ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಜೂ.19 ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ಎಂಆರ್‌ಸಿ ಕಣ್ಣಿನ ಆಸ್ಪತ್ರೆ ಹಾಗೂ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಸಹಯೋಗದೊಂದಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ.

ಇಂದು ಸಭೆ ಕೌನ್ಸಿಲ್ ಸಭೆ

ಹುಣಸೂರು, ಜೂ.15 – ನಗರಸಭೆಯ ಆಡಳಿತಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಶುಕ್ರವಾರ ನಗರ ಸಭೆಯ ಸಭಾಂಗಣದಲ್ಲಿ ನಗರಸಭೆಯ ಕೌನ್ಸಿಲ್ ಸಾಮಾನ್ಯ ಸಭೆ ನಡೆಯಲಿದೆ ಎಂದು ಪೌರಾಯುಕ್ತ ಸುಜಯ್‌ಕುಮಾರ್ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಸುಜ್ಞಾನ ನಿಧಿ ಶಿಷ್ಯವೇತನ ವಿತರಣೆ



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬೆಳ್ಳಿ ಹಬ್ಬದ ಪ್ರಯುಕ್ತ ನೀಡುತ್ತಿರುವ ಸುಜ್ಞಾನ ನಿಧಿ ಶಿಷ್ಯವೇತನವನ್ನು ಈ ವರ್ಷವೂ ಮುಂದುವರಿಸಿದ್ದು, ಎಚ್.ಡಿ.ಕೋಟೆ ಯೋಜನಾ ಕಚೇರಿ ವ್ಯಾಪ್ತಿಯ 33 ವಿದ್ಯಾರ್ಥಿಗಳಿಗೆ ಈ ವರ್ಷದ ಸುಜ್ಞಾನ ನಿಧಿ ಶಿಷ್ಯವೇತನ ಮಂಜೂರಾತಿ ಪತ್ರವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಉದಯ್ ಕುಮಾರ್, ನಿರ್ದೇಶಕ ಲಕ್ಷ್ಮಣ್, ಧರ್ಮಸ್ಥಳ ಯೋಜನಾಧಿಕಾರಿ ವಿ. ಭಾಸ್ಕರ್, ಮೇಲ್ವಿಚಾರಿಕಿ ಪವಿತ್ರ ಉಪಸ್ಥಿತರಿದ್ದರು.

ರೋಶ್ನಿಗೆ ನೀಟ್‌ನಲ್ಲಿ 2673ನೇ ರ್‍ಯಾಂಕ್

ಬೆಟ್ಟದಪುರ, ಜೂ.15– ಬೆಟ್ಟದಪುರ ಸಮೀಪದ ಹಾರನಹಳ್ಳಿ ಗ್ರಾಮದ ಉಪನ್ಯಾಸಕ ವಾಸು ಬೋರೇಗೌಡ ಮತ್ತು ಶಿಕ್ಷಕಿ ಶೋಭ ದಂಪತಿಯ ಪುತ್ರಿ ರೋಶ್ನಿ ವಿ.ಎಸ್. ಗೌಡ ಈ ಬಾರಿಯ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ(ನೀಟ್)ನಲ್ಲಿ 660 ಅಂಕಗಳಿಸಿ ದೇಶದಲ್ಲಿ 2673ನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ.



ಕಳೆದ ಬಾರಿಯ ನೀಟ್ ಪರೀಕ್ಷೆಯಲ್ಲಿ 552 ಅಂಕ ಪಡೆದರೂ ಅಂಕಪಟ್ಟಿಯಲ್ಲಿ ಅಂಕ ವ್ಯತ್ಯಾಸವಾಗಿ ವೈದ್ಯಕೀಯ ಸೀಟು ಅವಕಾಶ ಕೈತಪ್ಪಿ ಹೋಗಿತ್ತು. ಆದರೆ ಈ ಬಾರಿ ವೈದ್ಯಳಾಗುವ ಕನಸನ್ನು ನನಸಾಗಿಸಿಕೊಂಡಿದ್ದಾರೆ. ಬೆಂಗಳೂರಿನ ಸರ್ಕಾರಿ ಮೆಡಿಕಲ್ ಕಾಲೇಜು ಸೇರಲು ಇಚ್ಛಿಸಿದ್ದಾರೆ.

ಇನ್‌ಸೈಟ್ಸ್ ಆನ್ ಸಿಇಟಿ ಕೌನ್ಸಿಲಿಂಗ್ ಕಾರ್ಯಾಗಾರ

ನಂಜನಗೂಡು, ಜೂ.15 – ತಾಲೂಕಿನ ತಾಂಡವಪುರದ ಬಳಿಯಿರುವ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ ಕಾಲೇಜು ಆವರಣದಲ್ಲಿ ಜೂ.17ರ ಶನಿವಾರದಂದು ಪಿಯುಸಿ ವಿದ್ಯಾರ್ಥಿಗಳಿಗೆ ಓಪನ್ ಡೇ ಕಾರ್ಯಕ್ರಮ ಏರ್ಪಡಿಸಿ ಇನ್‌ಸೈಟ್ಸ್ ಆನ್ ಸಿಇಟಿ ಕೌನ್ಸಿಲಿಂಗ್ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಾಲೇಜಿನ ಪ್ರಾಧ್ಯಾಪಕ ಎಂ.ಜಿ.ಶ್ರೀನಿವಾಸ್ ಮನವಿ ಮಾಡಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ವಿದ್ಯಾರ್ಥಿಗಳಿಗೆ ಉತ್ತಮ ತಾಂತ್ರಿಕ ಶಿಕ್ಷಣವನ್ನು ಒದಗಿಸಬೇಕೆಂಬ ಹಂಬಲದೊಂದಿಗೆ 2014ರಲ್ಲಿ ಎಂಐಟಿ ಕಾಲೇಜು ಸ್ಥಾಪನೆಗೊಂಡಿದೆ. ಈವರೆಗೆ ಸಾವಿರಾರು ವಿದ್ಯಾರ್ಥಿಗಳು ಸಂಸ್ಥೆಯಿಂದ ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯುವ ಜೊತೆಗೆ ಉದ್ಯೋಗವಕಾಶವನ್ನು ಪಡೆದಿದ್ದಾರೆ. ಪ್ರಸ್ತುತ ಪಿಯುಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಇನ್‌ಸೈಟ್ಸ್ ಆನ್ ಸಿಇಟಿ ಕೌನ್ಸಿಲಿಂಗ್ ಒಂದು ದಿನದ ಕಾರ್ಯಗಾರವನ್ನು ಏರ್ಪಡಿಸಲಾಗಿದೆ ಎಂದರು. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನೋಡಲ್ ಅಧಿಕಾರಿ ಉದಯ ಶಂಕರ್ ಅವರು ರಾಜ್ಯವ್ಯಾಪಿ ಸಿಇಟಿ ಮುಖಾಂತರ ಇಂಜಿನಿಯರಿಂಗ್ ಆಯ್ಕೆ ವಿಧಾನಗಳಾದ ಕೌನ್ಸಿಲಿಂಗ್, ಡಾಕ್ಯುಮೆಂಟ್ ವೆರಿಫಿಕೇಶನ್, ಸಿಇಟಿ ಮೂಲಕ ಹೇಗೆ ಸರ್ಕಾರಿ ಸೀಟ್ ಪಡೆಯಬಹುದು ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸಲಿದ್ದಾರೆ.



ಮೈಸೂರು ಜಿಲ್ಲೆಯ ಎಲ್ಲಾ ತಾಲೂಕಿನ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದರು. ಹೆಚ್ಚಿನ ಮಾಹಿತಿಗಾಗಿ ಪ್ರೊ. ಸಲಾಮತ್ (9980832371) ಅವರನ್ನು ಸಂಪರ್ಕಿಸುವಂತೆ ಅವರು ಕೋರಿದರು. ಸುದ್ದಿಗೋಷ್ಠಿಯಲ್ಲಿ ಮೊಹಮದ್ ಸಲಾಮತ್, ಗಣೇಶ್ ಇದ್ದರು.

ವಿದ್ಯಾರ್ಥಿನಿ ಸಾವು

ಹುಣಸೂರು, ಜೂ.15– ನಗರದ ಸೇಂಟ್ ಜೋಸೆಫ್ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಹಾಗೂ ದಾವಣಿ ಬೀದಿಯ ವಾಸಿ ನಟೇಶ್ ಅವರ ಪುತ್ರಿ ಹೆಚ್.ಎನ್. ಪ್ರಜ್ಞಾ (15) ಬೆಳಗ್ಗೆ ನಿಧನರಾದರು.



ನಿನ್ನೆ ಶಾಲೆಯಲ್ಲಿ ಮಧ್ಯಾಹ್ನ 3 ಗಂಟೆ ಸಮಯದಲ್ಲಿ ತಲೆ ನೋವು ಕಾಣಿಸಿಕೊಂಡು ವಾಂತಿಯಾಗಿದೆ. ತಕ್ಷಣ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಮನೆಗೆ ಕರೆದುಕೊಂಡು ಹೋಗಲಾಗಿದೆ. ಆದರೆ ಬೆಳಗ್ಗೆ ಬಾಲಕಿ ಕೊನೆಯುಸಿರೆಳೆದಿದ್ದಾರೆ.

ನಟೇಶ್ ಅವರಿಗೆ ಇಬ್ಬರು ಪುತ್ರಿಯರಿದ್ದು, ಮೃತ ಪ್ರಜ್ಞಾ ಹಿರಿಯ ಪುತ್ರಿಯಾಗಿದ್ದರು. ಪುತ್ರಿಯ ನಿಧನದಿಂದ ಇಡಿ ಮನೆ ಶೋಕಸಾಗರದಲ್ಲಿ ಮುಳುಗಿದೆ. ಮೃತ ಬಾಲಕಿಯ ಅಂತ್ಯಕ್ರಿಯೆ ನಗರದ ಪಂಪ್ ಹೌಸ್ ಬಳಿ ಇರುವ ರುದ್ರ ಭೂಮಿಯಲ್ಲಿ ನೆರವೇರಿತು.

ಸಾಲಬಾಧೆ ತಾಳಲಾರದೆ ಆತ್ಮಹತ್ಯೆಗೆ ಶರಣಾದ ರೈತ

ಹುಣಸೂರು, ಜೂ.15– ಸಾಲದ ಬಾಧೆ ತಾಳಲಾರದೆ ರೈತನೊಬ್ಬ ನೇಣಿಗೆ ಶರಣಾಗಿರುವ ಘಟನೆ ತಾಲೂಕಿನ ಮೂಕನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.



ರಾತ್ರಿ ಮನೆಯಿಂದ ಹೊರ ಹೋದ ನಾಗ ಬೆಳಗಿನ ಜಾವ ತಮ್ಮ ಇನ್ನೊಂದು ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರಾತ್ರಿ ಮನೆಗೆ ಬಾರದಿದ್ದರಿಂದ ಹಳೆ ಮನೆ ಹತ್ತಿರ ಹೋಗಿ ನೋಡಿದಾಗ ನೇಣಿಗೆ ಶರಣಾಗಿರುವುದು ಬೆಳಕಿಗೆ ಬಂದಿದೆ.

ಘಟನೆ ವಿವರ: ಗ್ರಾಮದ ಹೊನ್ನೇಗೌಡರ ಮಗ ನಾಗರಾಜ ಉರುಫ್ ಕುರಿ ನಾಗ ಎಂದೇ ಹೆಸರುವಾಸಿಯಾಗಿದ್ದ ಇವರು ಕೃಷಿ ಚಟುವಟಿಕೆ ಜೊತೆಗೆ ಕುರಿ ಮಾಂಸ ವ್ಯಾಪಾರ ಮಾಡಿಕೊಂಡಿದ್ದು, ಕೃಷಿ ಮತ್ತು ತನ್ನ ವ್ಯವಹಾರಗಳಿಗಾಗಿ ವಿಎಸ್‌ಎಸ್‌ಎನ್ ಬ್ಯಾಂಕ್‌ನಿಂದ 5 ಲಕ್ಷ, ಹೆಚ್‌ಡಿಎಫ್‌ಸಿ ಬ್ಯಾಂಕ್‌ನಿಂದ 9 ಲಕ್ಷ, ವಿವಿಧ ಸಂಘ–ಸಂಸ್ಥೆಗಳು ಹಾಗೂ ಜನರಿಂದ ಕೈ ಸಾಲ ಸೇರಿದಂತೆ 50 ಲಕ್ಷಕ್ಕೂ ಹೆಚ್ಚು ಸಾಲ ಮಾಡಿಕೊಂಡಿದ್ದರು. ಕೃಷಿ ಚಟುವಟಿಕೆಯಲ್ಲಿ ಸರಿಯಾದ ಬೆಳೆ ಬಾರದೆ, ತಾನು ಮಾಡುತ್ತಿದ್ದ ವ್ಯಾಪಾರದಲ್ಲೂ ಸರಿಯಾಗಿ ಲಾಭವಾಗದ ಹಿನ್ನೆಲೆಯಲ್ಲಿ ಸಾಲ ತೀರಿಸಲಾಗದೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಮೃತ ರೈತ ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಈ ಸಂಬಂಧ ಟೌನ್ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಅಭಿವೃದ್ಧಿ



ತಿ.ನರಸೀಪುರ, ಜೂ.15– ಶಿಕ್ಷಣ, ಆರೋಗ್ಯ ಹಾಗೂ ದಾಸೋಹಗಳಿಗೆ ಸೀಮಿತವಾಗದೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜನ ಸಾಮಾನ್ಯರ ಬದುಕಿನ ಸುಧಾರಣೆಗೆ ಶ್ರಮಿಸುತ್ತಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್‌ನ ಕೇಂದ್ರ ಕಚೇರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಎಸ್. ಅನಿಲ್ ಕುಮಾರ್ ಹೇಳಿದರು.

ಪಟ್ಟಣದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್‌ನ ಸ್ಥಳಾಂತರಗೊಂಡ ಯೋಜನಾ ಕಚೇರಿ ಉದ್ಘಾಟನೆ ಮತ್ತು ಬೀದಿ ಬದಿ ವ್ಯಾಪಾರಸ್ಥರ 101 ನೇ ಸಂಘ 'ಅಭಿವೃದ್ಧಿ' ಸಂಘದ ಉದ್ಘಾಟನೆ ಹಾಗೂ ವಿವಿಧ ಅನುದಾನಗಳ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕಳೆದ 4 ದಶಕಗಳಿಂದ ವೀರೇಂದ್ರ ಹೆಗ್ಗಡೆ ಯವರು ರಾಜ್ಯದ ಜನರ ಅಭಿವೃದ್ಧಿಯ ಆಶಯವಿಟ್ಟು ಯೋಜನೆಗಳನ್ನು ಕೊಟ್ಟಿದ್ದಾರೆ.

ಉನ್ನತ ಶಿಕ್ಷಣ ಪಡೆಯುವ 20 ಸಾವಿರ ಬಡ ವಿದ್ಯಾರ್ಥಿಗಳಿಗೆ ಮಾಸಿಕ ವಿದ್ಯಾರ್ಥಿ ವೇತನ, ನಿರ್ಗತಿಕರಿಗೆ ಮಾಸಾಶನ. ವಾತ್ಸಲ್ಯ ಕಾರ್ಯಕ್ರಮದಡಿ ಆಹಾರ ಕಿಟ್‌ಗಳನ್ನು ನೀಡಲಾಗುತ್ತಿದೆ ನಮ್ಮ ಸೇವಾ ಸಿಬ್ಬಂದಿ ನಿಮ್ಮ ನೆರವಿಗೆ ಬಂದು ಶ್ರಮಿಸಲಿದ್ದಾರೆ ಎಂದರು.

ತಹಸೀಲ್ದಾರ್ ಸಿ.ಜಿ. ಗೀತಾ ಮಾತನಾಡಿ, ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆಯ ಜನಪರ ಸೇವಾ ಕಾರ್ಯಗಳು ಶ್ಲಾಘನೀಯ. ಆಡಳಿತ ಅಧಿಕಾರಿ ವರ್ಗ ಇವರ ಜತೆ ಕೈಜೋಡಿಸಿ ಕರ್ತವ್ಯ ನಿರ್ವಹಿಸಿದಲ್ಲಿ ಜನರಿಗೆ ಮತ್ತಷ್ಟು ಅನುಕೂಲವಾಗಲಿದೆ.

ಬೀದಿ ಬದಿ ವ್ಯಾಪಾರಸ್ಥರು. ನಿರ್ಗತಿಕರು. ಕಡು ಬಡವರಿಗೆ ಆರೋಗ್ಯ ಸೇವೆ ಯೋಜನೆಗಳ ಮೂಲಕ ನೊಂದವರ ಆಶಾಕಿರಣವಾಗಿ ಸಂಸ್ಥೆ ಮತ್ತು ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಬಿಸಿ ಟ್ರಸ್ಟ್‌ನ ಜಿಲ್ಲಾ ನಿರ್ದೇಶಕ ಬಿ ಜಯರಾಮ ನೆಲ್ಲಿತ್ತಾಯ. ಎಂ ಲಕ್ಷ್ಮಣ್,ಟ್ರಸ್ಟ್‌ನ ಯೋಜನಾಧಿಕಾರಿ ಹನುಮಂತಪ್ಪ ಅಂಗಡಿ ಶ್ರೀಸೇವಾಶ್ರಯ ಫೌಂಡೇಶನ್‌ನ ಅಧ್ಯಕ್ಷ ಮಣಿಕಂಠರಾಜ್ ಗೌಡ, ಜನಜಾಗೃತಿ ಸಮಿತಿ ಸದಸ್ಯರಾದ ಕಿರಗಸೂರು ಶಂಕರ್. ಜೆಡಿಎಸ್ ನಿಕಟ ಪೂರ್ವ ಅಧ್ಯಕ್ಷ ತಾಯೂರು ಪ್ರಕಾಶ್, ಪ್ರಸಾದ್ ನಾಯಕ್, ಪುಷ್ಪಲತಾ ರಾಜಶೇಖರ್ ಮೂರ್ತಿ, ಮಂಜುನಾಥ್, ಸುಜಾತ, ಕೃಷಿ ಮೇಲ್ವಿಚಾರಕ ಟಿ.ಆರ್. ಕುಮಾರ್, ಪವಿತ್ರ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಕೆ.ಆರ್.ನಗರದಲ್ಲಿ ಶಾಸಕ ರವಿಶಂಕರ್ ಕಚೇರಿ ಉದ್ಘಾಟನೆ

● ಇನ್ನು ಮುಂದೆ ಕಚೇರಿಯಲ್ಲೇ ಸಾರ್ವಜನಿಕರ ಅಹವಾಲು ಸ್ವೀಕಾರ ● ನಾಳೆ ಕೃತಜ್ಞತಾ ಸಭೆ



ಕೆ.ಆರ್.ನಗರ, ಜೂ.15– ಪಟ್ಟಣದ ಲೋಕೋಪಯೋಗಿ ಇಲಾಖೆಯ ಕಟ್ಟಡದಲ್ಲಿ ಶಾಸಕರ ಕಚೇರಿ ಆರಂಭಿಸಲಾಗಿದ್ದು ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳ ಜನತೆ ಪಕ್ಷದ ಕಚೇರಿಗೆ ಮತ್ತು ಮನೆಗೆ ಅಲೆದಾಡುವ ಬದಲು ನೇರವಾಗಿ ಶಾಸಕರ ಕಚೇರಿಗೆ ಬಂದು ಅಹವಾಲು ಸಲ್ಲಿಸಬೇಕು ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ಬುಧವಾರ ಕಚೇರಿ ಉದ್ಘಾಟನೆ ಸಮಾರಂಭದ ನಂತರ ಮಾತನಾಡಿದ ಅವರು ಕ್ಷೇತ್ರದಲ್ಲಿ ಇರುವ ಸಂದರ್ಭದಲ್ಲಿ ಕಚೇರಿಯಲ್ಲಿ ಕುಳಿತು ಜನತೆಯ ಅಹವಾಲು ಆಲಿಸಲಾಗುತ್ತದೆ ಎಂದು ಭರವಸೆ ನೀಡಿದಲ್ಲದೆ ವಿಧಾನಸಭಾ ಅಧಿವೇಶನ ಮತ್ತಿತರ ಸಂದರ್ಭದಲ್ಲಿ ಕಚೇರಿಯಲ್ಲಿ ಲಭ್ಯವಿಲ್ಲದ ಬಗ್ಗೆ ಮೊದಲೇ ಮಾಹಿತಿ ನೀಡಲಾಗುತ್ತದೆ ಎಂದರು.

ನನಗೆ 1,04,502 ಮತಗಳನ್ನು ನೀಡಿ ಶಾಸಕನಾಗಲು ಕಾರಣಕರ್ತರಾದ ಕ್ಷೇತ್ರದ ಮತದಾರರಿಗೆ ಮತ್ತು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸುವ ಸಭೆಯನ್ನು ಜೂನ್ 17ರ ಶನಿವಾರ ಬೆಳಗ್ಗೆ 11ಕ್ಕೆ ಪಟ್ಟಣದ ರೇಡಿಯೋ ಮೈದಾನದಲ್ಲಿ ಏರ್ಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ವಹಿಸಲಿದ್ದು, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಮುಖ್ಯಮಂತ್ರಿಗಳ ಪುತ್ರ ಮಾಜಿ ಶಾಸಕ ಡಾ.ಯತೀಂದ್ರಸಿದ್ದರಾಮಯ್ಯ, ಕ್ಷೇತ್ರದ ಉಸ್ತುವಾರಿ ಡಾ.ರವೀಂದ್ರ, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಸೇರಿದಂತೆ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ಪಕ್ಷದ ಶಾಸಕರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಶಾಸಕ ಡಿ.ರವಿಶಂಕರ್ ಪತ್ನಿ ಸುನೀತಾ, ತಂದೆ ದೊಡ್ಡಸ್ವಾಮೇಗೌಡ, ತಾಯಿ ವನಜಾಕ್ಷಮ್ಮ ಅವರೊಂದಿಗೆ ಕಛೇರಿ ಆರಂಭಿಸಲು ಹೋಮ ಹವನ ನಡೆಸಿ, ಆನಂತರ ತಂದೆಯವರಿಂದ ಕಚೇರಿ ಉದ್ಘಾಟಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್. ಮಹದೇವ್, ಉದಯಶಂಕರ್, ವಕ್ತಾರ ಸೈಯದ್ ಜಾಬೀರ್, ಜಿ.ಪಂ. ಮಾಜಿ ಸದಸ್ಯರಾದ ಜಿ.ಆರ್.ರಾಮೇಗೌಡ, ಸಿದ್ದಪ್ಪ, ಜಯರಾಮೇಗೌಡ, ತಾ.ಪಂ. ಮಾಜಿ ಅಧ್ಯಕ್ಷರಾದ ಹಾಡ್ಯಮಹದೇವಸ್ವಾಮಿ, ಚಂದ್ರಶೇಖರ್, ಹೆಚ್.ಟಿ.ಮಂಜುನಾಥ್, ಮಾಜಿ ಸದಸ್ಯ ಎ.ಟಿ.ಗೋವಿಂದೇಗೌಡ, ಪುರಸಭೆ ಮಾಜಿ ಅಧ್ಯಕ್ಷರಾದ ಗೀತಾ ಮಹೇಶ್, ನರಸಿಂಹರಾಜು, ಸದಸ್ಯರಾದ ಶಿವುನಾಯಕ್, ಶಂಕರ್, ಮಾಜಿ ಸದಸ್ಯ ಕೆ.ವಿನಯ್, ಮುಖಂಡರಾದ ಚೆಲುವರಾಜು, ಸೌಮ್ಯ ಲೋಕೇಶ್, ಸರಿತಾಜವರಪ್ಪ, ಲತಾರವೀಶ್, ರಾಣಿ, ಕೆ.ಪಿ.ಜಗದೀಶ್, ವಿರ್ಲೆನಾಗರಾಜು, ಗಂಧನಹಳ್ಳಿ ಹೇಮಂತ್, ಮಂಚನಹಳ್ಳಿ ನಾರಾಯಣ, ನೀಲಕಂಠೇಗೌಡ, ಹೆಚ್.ಪಿ. ಗೋಪಾಲ್ ಸೇರಿದಂತೆ ನೂರಾರು ಮಂದಿ ಹಾಜರಿದ್ದರು.

ಮೈಸೂರು ಬೇಸಿಗೆ ಕಾಲದ ರೇಸುಗಳು

4ನೇ ದಿನ, ಶುಕ್ರವಾರ 16-6-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಕಪಿಲ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಕಾನ್ಸ್ಪಿರಸಿ 2. ಮೈ ಲೈಫ್ ಮೈ ರೂಲ್ಸ್ 3. ಶಿವಾಲಿಕ್ ಸೌಂಡ್

II. ಹೆಗ್ಗಡದೇವನಕೋಟೆ ಪ್ಲೇಟ್ ಡಿI– 1200 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಕಾಪರ್ ಸನ್‌ರೈಸ್ 2. ಮಾರ್ಗನೈಟ್ 3. ಮಿರಾಕುಲಸ್ ಗರ್ಲ್

III. ರಾಣಿ ಬೆನ್ನೂರ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಮಿಲೋಸ್ 2. ದಿ ಸ್ಟ್ರೆಕ್ಸ್ 3. ಸ್ಪಾರ್ಕಲಿಂಗ್ ನೈಟ್

IV. ಹೆಗ್ಗಡದೇವನಕೋಟೆ ಪ್ಲೇಟ್ ಡಿII– 1200 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಮಾರ್ಚ್ ಟು ವಿಕ್ಟರಿ 2. ಡಿ ಕರ್ನನ್ 3. ಅಸ್ತರಾ

V. ಮೈಸೂರ್ ಫಿಲ್ಲೀಸ್ ಟ್ರೇಯಲ್ ಸ್ಟೇಕ್ಸ್–1400 ಮೀ. 3 ವರ್ಷದ (ಟರ್ಮ್ಸ್). ಸಂ.4.00ಕ್ಕೆ
1. ಅರಲಿನಾ 2. ಶಿ ಕೇನ್ 3. ಪ್ಲಾನೇಟ್ ರಾಯಲ್

VI. ತಕ್ಷಶಿಲಾ ಪ್ಲೇಟ್–1600 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಪವರ್ ಆಫ್ ಕಾಂತರ 2. ಪ್ರಿನ್ಸ್ ಕಾರ್ಪೊರೇಟ್ 3. ಡಿ ಗೋಲ್ಡ್ ಸ್ಟಾರ್

VII. ಕಾಗಿನೆಲೆ ಪ್ಲೇಟ್– 1200 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಸ್ಪಾರ್ಕಲ್ಸ್ 2. ವಿಜಯ ಸ್ಪಾರ್ಕಲ್ 3. ಪವರ್ ಆಫ್ ಥಿಯಾ

ದಿನದ ಅತ್ಯುತ್ತಮ....................	: ಅರಲಿನಾ
ಡಬ್ಬಲ್....................	: ಮಿಲೋಸ್, ಮಾರ್ಚ್ ಟು ವಿಕ್ಟರಿ
ಜಾಕ್‌ಪಾಟ್....................	: 3, 4, 5, 6 ಮತ್ತು 7
I ಟ್ರಿಬಲ್....................	: 2, 3 ಮತ್ತು 4
II ಟ್ರಿಬಲ್....................	: 5, 6 ಮತ್ತು 7
ಎಕ್ಸ್‌ಆಕ್ಟ್....................	: 1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಬ್ಯಾಂಕ್ ಸತ್ಯನಾರಾಯಣ್ ನಿಧನ

ಹುಣಸೂರು, ಜೂ.15– ಹುಣಸೂರು ತಾಲೂಕಿನಲ್ಲಿ ಬ್ಯಾಂಕ್ ಸತ್ಯನಾರಾಯಣ್ ಎಂದೇ ಚಿರಪರಿಚಿತರಾಗಿದ್ದ, ಪಟ್ಟಣದ ನಿವಾಸಿ ಸತ್ಯನಾರಾಯಣ್ ಗುರುವಾರ ಬೆಂಗಳೂರಿನ ಮಗಳ ಮನೆಯಲ್ಲಿ ನಿಧನರಾಗಿದ್ದಾರೆ.



ಮೃತರು ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತಿದ್ದು, ಇತ್ತೀಚೆಗೆ ಬೆಂಗಳೂರಿನ ನಾಗರಬಾವಿ ಬಿಡಿಎ ಕಾಂಪ್ಲೆಕ್ಸ್‌ನಲ್ಲಿರುವ ಮಗಳ ಮನೆಯಲ್ಲಿ ವಾಸವಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ನಿಧನರಾದರು.

ಪುತ್ರ ಅಸ್ಟ್ರೇಲಿಯಾದ ಸಿಡ್ನಿಯಲ್ಲಿದ್ದು ಶುಕ್ರವಾರ ಸಂಜೆ ಬೆಂಗಳೂರಿಗೆ ಬಂದ ನಂತರ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೃತರು ಪುತ್ರಿ, ಅಳಿಯ, ಮಗ, ಸೊಸೆ ಹಾಗೂ ಅಪಾರ ಬಂಧು–ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಮೃತರು ಆರ್‌ಎಸ್‌ಎಸ್ ಸ್ವಯಂ ಸೇವಕರಾಗಿ, ವಿವೇಕ ಬಳಗದ ಅಧ್ಯಕ್ಷರಾಗಿ, ಹುಣಸೂರು ಸಾಂಸ್ಕೃತಿಕ ಕೇಂದ್ರದ ಅಧ್ಯಕ್ಷರಾಗಿ ಹಾಗೂ ಹಲವಾರು ಹಿಂದೂಪರ ಸಂಘಟನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಹಲವಾರು ಸಂಘಸಂಸ್ಥೆಗಳು ಮತ್ತು ಆರ್‌ಎಸ್‌ಎಸ್ ಮುಖಂಡರು ಸಂತಾಪ ಸೂಚಿಸಿದ್ದಾರೆ.

ಕಾಣೆಯಾಗಿದ್ದಾರೆ




ದೇಶಿಗೌಡ
75 ವರ್ಷ

ನಂ.2671, 3ನೇ ಕ್ರಾಸ್, ಕೆ.ಜಿ.ಕೊಪ್ಪಲು, ಮೈಸೂರು ಇಲ್ಲಿ ವಾಸವಿದ್ದ ಇವರು ದಿ:11.06.2023 ರಂದು ಮಧ್ಯಾಹ್ನ 3.30ಕ್ಕೆ ಹೊರಗೆ ಹೋದವರು ಇದುವರೆಗೂ ಮನೆಗೆ ವಾಪಸ್ಸು ಬಂದಿರುವುದಿಲ್ಲ. ಇವರಿಗೆ ಸಕ್ಕರೆ ಖಾಯಿಲೆ ಇದ್ದು, ಸ್ವಲ್ಪ ಕಿವಿ ಕೇಳಿಸುವುದಿಲ್ಲ. ಇವರನ್ನು ಕಂಡವರು ಕೂಡಲೇ ಹತ್ತಿರದ ಪೊಲೀಸ್ ಠಾಣೆ ಅಥವಾ 9731748882 ನಂಬರ್‌ಗೆ ಕರೆ ಮಾಡಬೇಕಾಗಿ ಕೋರುತ್ತೇವೆ. ಹುಡುಕಿ ಕೊಟ್ಟವರಿಗೆ ಸೂಕ್ತ ಬಹುಮಾನ ನೀಡಲಾಗುವುದು.

ಮೈಸೂರು ಮಿತ್ರ
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

TEACHERS REQUIRED
For Science, Maths, English and Hindi
Drop your resumes at
SUBHODA SCHOOL
Kuvempunagar, 'M' Block, Mysore.
Call : 89040 40406 / 63617 28454



ಇಂದಿನಿಂದ
ಸಂಗಂ ಚಿತ್ರಮಂದಿರ
2k Digital
Dolby 7.1
ಆದಿಪುರುಷ
2ಡಿ(ಕನ್ನಡ ಅವೃತ್ತಿ)
ದಿನ 4 ಪ್ರದರ್ಶನ
10.15 1.30
4.45 8.00

COMMERCIAL PROPERTY FOR SALE / RENT
5750 Sqft in Ground Floor, Mittal Pride, J.P Nagar, Mysore
Contact :
Sonia : 97400 11608



ಶ್ರೀ ಸಿದ್ದಬಸವೇಗೌಡ ರವರಿಗೆ
(B.Com., GDC)
ನಿವೃತ್ತ ಸಹಾಯಕ ಪೊಲೀಸ್ ಸಬ್–ಇನ್ಸ್‌ಪೆಕ್ಟರ್
71ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು
ಮೊ:9945352260
ಇವರಿಗೆ ತಾಯಿ ಚಾಮುಂಡೇಶ್ವರಿ ಆರೋಗ್ಯ, ಆಯಸ್ಸು ಮತ್ತು ಐಶ್ವರ್ಯ ಕೊಟ್ಟು ಕಾಪಾಡಲಿ ಎಂದು ಹಾರೈಸುವ



ಡಾ|| ಜಗದೀಶ್.ಕೆ.ಎಸ್ ಮತ್ತು ಮಂಜುನಾಥ್.ಕೆ.ಎಸ್
ಮಾಲೀಕರು ಶ್ರೀ ಬಸವೇಶ್ವರ ಭಾರತ್‌ಗ್ಯಾಸ್, ತಿ.ನರಸೀಪುರ
ಮಹದೇವಣ್ಣ, ಅಧ್ಯಕ್ಷರು, ಪಿಎಲ್‌ಡಿ ಬ್ಯಾಂಕ್, ತಿ.ನರಸೀಪುರ
ಮಂಜು (ಬಾದಾಮಿ), ಪುರಸಭಾ ಸದಸ್ಯರು ಹಾಗೂ ಉಮೇಶ್

ಹಸಿರು ನಮ್ಮ ಉಸಿರು

ದಾಸ್‌ತಿ ಪ್ಯಾರಾ ಮೆಡಿಕಲ್ ಕಾಲೇಜ್
#ಎಲ್.46/4.ಎಂ.ಜೆ.ಟವರ್ಸ್, 2ನೇ ಮಹಡಿ, (ಕೆ.ಹೆಚ್.ಬಿ. ಕಾಂಪ್ಲೆಕ್ಸ್ ಹಿಂಭಾಗ) 1ನೇ ಹಂತ, ಕುವೆಂಪುನಗರ, ಮೈಸೂರು – 570023
(ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)
ಈ ಸಂಸ್ಥೆಯಲ್ಲಿ ಪರಿಣಿತ ವೈದ್ಯರು ಮತ್ತು ತಾಂತ್ರಿಕ ತಜ್ಞರಿಂದ ಬೋಧನೆ.
" ಪ್ರವೇಶ ತೆರೆದಿದೆ, ತ್ವರೆಮಾಡಿ "
1. ಡಿಪ್ಲೋಮಾ – ಇನ್–ಮೆಡಿಕಲ್ ಹೆಲ್ತ್ ಇನ್ಸ್‌ಪೆಕ್ಟರ್ (DMHI)
(ನಗರಸಭೆ/ನಗರಪಾಲಿಕೆ/ಸರ್ಕಾರಿ ಉದ್ಯೋಗಕ್ಕೆ ಅವಕಾಶ)
2. ಡಿಪ್ಲೋಮಾ–ಇನ್–ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ (DMLT)
(ಸರ್ಕಾರಿ/ಖಾಸಗಿ ಆಸ್ಪತ್ರೆಗಳಲ್ಲಿ ಉದ್ಯೋಗಕ್ಕೆ ಅವಕಾಶ)
ಎಸ್.ಎಸ್.ಎಲ್.ಸಿ ಪಾಸಾದವರಿಗೆ 3 ವರ್ಷ ಮತ್ತು ಪಿಯುಸಿ(ಪಿ.ಸಿ.ಎಂ.ಬಿ) ಪಾಸಾದವರಿಗೆ 2 ವರ್ಷ ಅವಧಿ
ಸಂಪರ್ಕಿಸಿ: 8904403905 9731507047

ರುದ್ರಾಕ್ಷ
RUDRAKSHA EXHIBITION CUM SALE
June 11th to 18th
Timings: 10:00 am to 09:00pm
ಕೊನೆಯ 3 ದಿನ ಮಾತ್ರ
ಈ ನಮ್ಮ ರುದ್ರಾಕ್ಷ ಪ್ರದರ್ಶನದಲ್ಲಿ ಖರೀದಿಸಿದ ಯಾವುದೇ ರುದ್ರಾಕ್ಷ ನಕಲಿ ಎಂದು ಸಾಬೀತು ಮಾಡಿದಲ್ಲಿ ಬೆಲೆಯ 2 ಪಟ್ಟು ಹಣವನ್ನು ಮರಳಿ ಕೊಡಲಾಗುವುದು.
ಯಾವ ರುದ್ರಾಕ್ಷಿಯನ್ನು ಯಾವಾಗ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯ ಇಲ್ಲದೇ ವೇದ ಗಣಿತದ ಮೂಲಕ ಜನ್ಮ ರಾಶಿ, ಜನ್ಮ ನಕ್ಷತ್ರ ಇವುಗಳನ್ನು ನೋಡಿ ಕ್ಷಣಾರ್ಧದಲ್ಲಿ ತಿಳಿಸಲಾಗುವುದು.
Venue: HOTEL SEPOY GRANDE
MG Road, opp. JSS Hospital, Agrahara, Mysore
Contact: 9885211449, 7799211449

SITE FOR SALE
40x40, Site No. 270/G
South-East Corner
Ananda Sagar, 5th phase
MUDA approved layout
Hunsur Road, Mysore.
Price: Rs. 52 Lakhs
Call 9845107830

SALE
Buy 2 Get 1 Free*
on wide range of Mens wear
HEAVENLYS GENARATIONS
Dhanvantri Road, Mysore

MUDA APPROVED SITES FOR SALE
30X40, 30X50
READY FOR REGISTRATION
Location: Adjacent J P Nagar, At Mysore-Ooty Road & Ring Road Junction.
Call: 96200 99122

ಸಾರ್ವಜನಿಕ ಪ್ರಕಟಣೆ

ಆದಾಗಿ ಷೆಡ್ಯೂಲ್ ಸ್ವತ್ತನ್ನು ನಮ್ಮ ಕಕ್ಷಿದಾರರು ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಕುವೆಂಪುನಗರ, ಇ ಅಂಡ್ ಎಫ್ ಬ್ಲಾಕ್, ಮನೆ ನಂ. 689ರಲ್ಲಿ ವಾಸವಾಗಿರುವ ಲೇಟ್ ಸತ್ಯನಾರಾಯಣರವರ ಮಗ ಶ್ರೀ ಎಂ.ಎಸ್. ಉಮೇಶ್ ರವರಿಂದ ಕ್ರಯಕ್ಕೆ ಕೊಂಡುಕೊಳ್ಳಲು ಇಚ್ಛಿಸಿ ಕ್ರಯದ ವ್ಯವಹಾರವನ್ನು ಮಾಡಲು ನಿಶ್ಚಯಿಸಿರುತ್ತಾರೆ.

ಆದ್ದರಿಂದ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾರಿಗಾದರೂ ಯಾವುದೇ ರೀತಿಯ ಕಾನೂನು ಬದ್ಧ ಹಕ್ಕು–ವಗೈರೆ ಮತ್ತು ಹಿತಾಸಕ್ತಿ ಇದ್ದಲ್ಲಿ ಈ ದಿನದಿಂದ 07 ದಿನದ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಕೆಳಕಂಡ ವಕೀಲರನ್ನು ಸಂಪರ್ಕಿಸಿ ತಕರಾರನ್ನು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಸದರಿ ಕ್ರಯದ ವ್ಯವಹಾರವನ್ನು ಮುಂದುವರೆಸುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಅಣಗಹಳ್ಳಿ ಗ್ರಾಮದ ಸರ್ವೆ ನಂ.78/8ರ ಎಂ.ಎಸ್.ಉಮೇಶ್ ಬಿನ್ ಲೇಟ್ ಸತ್ಯನಾರಾಯಣ ರವರ ಹೆಸರಿನಲ್ಲಿರುವ 2–10.08 ಎಕರೆ ಖುಷ್ಕಿ ಜಮೀನು ಮತ್ತು ಇದಕ್ಕೆ ಚೆಕ್ಕುಬಂದಿ:
ಪೂರ್ವಕ್ಕೆ: ಸ್ವಾಮಿ ಬಿನ್ ಲೇಟ್ ಚಿಕ್ಕಣ್ಣೇಗೌಡ ರವರ ಜಮೀನು ಮತ್ತು ಕರೀಗೌಡ ಬಿನ್ ಗಡ್ಡಪ್ಪ ರವರ ಜಮೀನು. ಪಶ್ಚಿಮಕ್ಕೆ: ಶಿವಣ್ಣೇಗೌಡ ಬಿನ್ ಕರೀಗೌಡರವರ ಜಮೀನು. ಉತ್ತರಕ್ಕೆ : ಚೌಡಮ್ಮ ಕೋಂ ಶಿವಣ್ಣೇಗೌಡರವರ ಜಮೀನು. ದಕ್ಷಿಣಕ್ಕೆ : ರಸ್ತೆ ಮತ್ತು ಕರೀಗೌಡ ಬಿನ್ ಗಡ್ಡಪ್ಪ ರವರ ಜಮೀನು

ಸಹಿ/– **ಎಂ.ಜಿ.ಸಿದ್ದರಾಜು,**
ಬಿಬಿಎಂ., ಎಲ್‌ಎಲ್‌ಬಿ, ವಕೀಲರು,
En.No. KAR-2787/03
2773/1, ಹೆಚ್–21/2,
ರೂಪ ನಿಲಯ, 2ನೇ ಕ್ರಾಸ್, ರೈಲ್ವೆ ಗೇಟ್ ರಸ್ತೆ,
ಕೆ.ಜಿ.ಕೊಪ್ಪಲ್, ಮೈಸೂರು–570009
ಮೊ: 7899099995

ಸಾರ್ವಜನಿಕ ಪ್ರಕಟಣೆ

ಆದಾಗಿ ಷೆಡ್ಯೂಲ್ ಸ್ವತ್ತನ್ನು ನಮ್ಮ ಕಕ್ಷಿದಾರರು ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಮಾಡ್ರಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ನಾಗರಾಜಪ್ಪರವರ ಮಗ ಶ್ರೀ ಎನ್. ಮಲ್ಲೇಶ್ ರವರಿಂದ ಕ್ರಯಕ್ಕೆ ಕೊಂಡುಕೊಳ್ಳಲು ಇಚ್ಛಿಸಿ ಕ್ರಯದ ವ್ಯವಹಾರವನ್ನು ಮಾಡಲು ನಿಶ್ಚಯಿಸಿರುತ್ತಾರೆ.

ಆದ್ದರಿಂದ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾರಿಗಾದರೂ ಯಾವುದೇ ರೀತಿಯ ಕಾನೂನು ಬದ್ಧ ಹಕ್ಕು–ವಗೈರೆ ಮತ್ತು ಹಿತಾಸಕ್ತಿ ಇದ್ದಲ್ಲಿ ಈ ದಿನದಿಂದ 07 ದಿನದ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಕೆಳಕಂಡ ವಕೀಲರನ್ನು ಸಂಪರ್ಕಿಸಿ ತಕರಾರನ್ನು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಸದರಿ ಕ್ರಯದ ವ್ಯವಹಾರವನ್ನು ಮುಂದುವರೆಸುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಅಣಗಹಳ್ಳಿ ಗ್ರಾಮದ ಸರ್ವೆ ನಂ.78/7ರ ಎನ್.ಮಲ್ಲೇಶ್ ಬಿನ್ ಲೇಟ್ ನಾಗರಾಜಪ್ಪ ರವರ ಹೆಸರಿನಲ್ಲಿರುವ 1–01 ಎಕರೆ ಖುಷ್ಕಿ ಜಮೀನು ಮತ್ತು ಇದಕ್ಕೆ ಚೆಕ್ಕುಬಂದಿ:
ಪೂರ್ವಕ್ಕೆ: ಎಂ.ಎಸ್.ಉಮೇಶ್ ರವರ ಸ್ವತ್ತು, ಪಶ್ಚಿಮಕ್ಕೆ: ಶಿವಣ್ಣೇಗೌಡರವರ ಸ್ವತ್ತು, ಉತ್ತರಕ್ಕೆ : ಎಂ.ಎಸ್.ಉಮೇಶ್ ರವರ ಸ್ವತ್ತು, ದಕ್ಷಿಣಕ್ಕೆ : ಶಿವಮ್ಮ ರವರ ಜಮೀನು.

ಸಹಿ/– **ಎಂ.ಜಿ.ಸಿದ್ದರಾಜು,**
ಬಿಬಿಎಂ., ಎಲ್‌ಎಲ್‌ಬಿ, ವಕೀಲರು,
En.No. KAR-2787/03
2773/1, ಹೆಚ್–21/2,
ರೂಪ ನಿಲಯ, 2ನೇ ಕ್ರಾಸ್, ರೈಲ್ವೆ ಗೇಟ್ ರಸ್ತೆ,
ಕೆ.ಜಿ.ಕೊಪ್ಪಲ್, ಮೈಸೂರು–570009
ಮೊ: 7899099995



https://msa.edu.in | social@msa.edu.in | +91 91138 70169
MYSORE SCHOOL OF ARCHITECTURE
Approved by CoA, New Delhi & Affiliated to VTU, Belgavi
OPEN DAY
JUNE 17, 2023
9:30 AM to 6:00 PM
All are invited for Open Day 2023 in our campus
THE LEGACY OF DESIGN & ARCHITECTURE
ADMISSIONS OPEN 2023-24
✔ Campus Tour
✔ Exhibition of Students' Work
✔ Guidance on Architecture Education
✔ Competition for Students (10th, 11th, 12th & Diploma)
QUIZ · SKETCHING · PHOTOGRAPHY · FACE PAINTING · WATER COLOR PAINTING
MSD MYSORE SCHOOL OF DESIGN
Recognised by University of Mysore
CA-01, University Layout, Near Dattagalli Ring Road, Lingambudi, Mysuru 570 008

WANTED
TRAINED GRADUATE TEACHERS
• Engish (Primary (1st to 4th)
• (PT) Physical Education B.P.Ed.,
JNANA GANGOTHRI CONVENT
Rajendra Nagar, Mysuru
Mob : 91139 80741
jgcenglishschool@gmail.com

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ವಾರ್ಷಿಕ ಪುಣ್ಯಸ್ಮರಣೆ



ಶ್ರೀಮತಿ ಎಂ.ನಂಜಮ್ಮಣ್ಣಿ
ನಿವೃತ್ತ ಶಾಲಾ ಶಿಕ್ಷಕಿ
ನಿಧನ: 19.06.2022
ಆರಾಧನೆ: 16.06.2023
952, 2ನೇ ಕ್ರಾಸ್, ಅಗ್ನಿ ಹಂಸ ರಸ್ತೆ, ಇ&ಎಫ್ ಬ್ಲಾಕ್, ಕುವೆಂಪುನಗರ, ಮೈಸೂರು–570023
ದುಃಖತಪ್ತರು: ಕುಟುಂಬವರ್ಗ

ಸ್ಥಾಪನೆ: 1910


ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ,

ಶ್ರೀ ಹರ್ಷರಸ್ತೆ, ಮೈಸೂರು– 570001

ನವೀಕರಣಗೊಂಡ ಬ್ಯಾಂಕ್ ಉದ್ಘಾಟನಾ ಸಮಾರಂಭ



ಆತ್ಮೀಯ ಸದಸ್ಯರುಗಳಿಗೆ ಹಾಗೂ ಗ್ರಾಹಕರುಗಳಿಗೆ ಹೃತ್ಪೂರ್ವಕ ಸ್ವಾಗತ...





ಸ್ವರೂಪ್ ಎಂ.ಎನ್ – ಅಧ್ಯಕ್ಷರು
ಶಿವ. ಎಸ್.ಬಿ – ನಿರ್ದೇಶಕರು
ಧ್ರುವರಾಜ್. ಎನ್ – ನಿರ್ದೇಶಕರು
ಮಧು. ವಿ – ನಿರ್ದೇಶಕರು
ಪ್ರಕಾಶ್.ಜೆ, ಕುರುಬಾರಹಳ್ಳಿ – ಉಪಾಧ್ಯಕ್ಷರು
ಪುಟ್ಟಸ್ವಾಮಿ. ಎಂ – ನಿರ್ದೇಶಕರು
ಪ್ರಸನ್ನ ಎನ್ ಲಕ್ಷ್ಮಣ್ – ನಿರ್ದೇಶಕರು
ದಿನೇಶ್. ಎಂ ವೆಂಕಟಲಿಂಗಯ್ಯ – ನಿರ್ದೇಶಕರು
ಜಯಕುಮಾರ್ – ನಿರ್ದೇಶಕರು
ಸ್ವಾಮಿ. ಎಸ್ – ನಿರ್ದೇಶಕರು
ಅಶೋಕ್. ಎಂ.ಕೆ – ನಿರ್ದೇಶಕರು
ಹೇಮಾ – ನಿರ್ದೇಶಕರು
ಪುಷ್ಪಲತಾ – ನಿರ್ದೇಶಕರು
ರಾಜಶೇಖರ್. ಹೆಚ್ – ಪ್ರಭಾರ ವ್ಯವಸ್ಥಾಪಕರು

16/06/2023 ಶುಕ್ರವಾರ